ಸೋಮವಾರ, ಜೂನ್ 24, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಒಡವೆಯ ಗೊಡವೆ...
ರಾಜಸ್ಥಾನದ ಬಿಕನೇರ್‌ನಲ್ಲಿ ಭಾನುವಾರ ನಡೆದ ಆಭರಣ ಮಳಿಗೆಯೊಂದರ ಉದ್ಘಾಟನೆ ಕಾರ್ಯಕ್ರಮದಲ್ಲಿ ಬಾಲಿವುಡ್ ನಟ ಮಲೈಕಾ ಅರೋರಾ ಕಾಣಿಸಿಕೊಂಡಿದ್ದು ಹೀಗೆ



ಸೋಮವಾರ, ಜೂನ್ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 175 | ಪುಟ 14
● www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಮಕ್ಕಳಲ್ಲಿ ಪರೀಕ್ಷೆಯ ಆತಂಕ ಕಡಿಮೆ ಮಾಡಲು ತೆರೆದ ಪುಸ್ತಕ ಮೌಲ್ಯಾಂಕನ ವ್ಯವಸ್ಥೆ ಜಾರಿಗೆ ಬರಲಿದೆ. ಇದೆಂಥ ಪರೀಕ್ಷೆ...



ಆಳ-ಅಗಲ
ವಿವಿಧ ನೇಮಕಾತಿ ಮತ್ತು ಅರ್ಹತಾ ಪ್ರಕ್ರಿಯೆ 8 ವರ್ಷಗಳಲ್ಲಿ 48 ಪರೀಕ್ಷೆಗಳು ರದ್ದು, ತಡೆ

ಕೈದಿಗಳಿಗೆ 'ಟೆಲಿ ಮೆಡಿಸಿನ್' ಸೇವೆ ವಿಸ್ತರಣೆ 8

'ಅಣ್ಣತಮ್ಮಂದಿರ ಗುಲಾಮಗಿರಿ ಬಿಡಿ' 4

968 ಗ್ರಾಮಗಳು ಮುಳುಗಡೆ, ಸಂತ್ರಸ್ತರಾದ 1.17 ಲಕ್ಷ ಜನ 9

ಅಸ್ಸಾಂನಲ್ಲಿ ಪ್ರವಾಹ ಸ್ಥಿತಿ ಗಂಭೀರ

ಸಮಗ್ರ ತನಿಖೆಗೆ ವಿಶೇಷ ತಂಡ ರಚನೆ ● ಪಟ್ನಾಕ್ಕೆ ಭೇಟಿ ನೀಡಿದ ತನಿಖಾಧಿಕಾರಿಗಳು

ನೀಟ್: ಸಿಬಿಐ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಯುಜಿಸಿ-ನೆಟ್ ಪರೀಕ್ಷಾ ಅಕ್ರಮಗಳ ಬಗ್ಗೆ ಇತ್ತೀಚೆಗಷ್ಟೇ ಪ್ರಕರಣ ದಾಖಲಿಸಿದ್ದ ಸಿಬಿಐ, 'ನೀಟ್-ಯುಜಿ' ಪರೀಕ್ಷಾ ಅಕ್ರಮಗಳ ಕುರಿತು ಭಾನುವಾರ ಪ್ರಕರಣ ದಾಖಲು ಮಾಡಿದೆ.

ಈ ಸಂಬಂಧ ಸಿಬಿಐ ವಿಶೇಷ ತಂಡಗಳನ್ನು ರಚಿಸಿದ್ದು, ತನಿಖಾಧಿಕಾರಿಗಳು ಪಟ್ನಾಕ್ಕೆ ತೆರಳಿದ್ದಾರೆ. ಗೋಧ್ರಾಗೂ ಭೇಟಿ ನೀಡಲಿದೆ. ಈ ಎರಡೂ ಕಡೆಗಳಲ್ಲಿನ ಸ್ಥಳೀಯ ಪೊಲೀಸರು ಪ್ರಶ್ನೆಪತ್ರಿಕೆ ಸೋರಿಕೆ ಕುರಿತು ಪ್ರಕರಣಗಳನ್ನು ದಾಖಲಿಸಿದ್ದು, ಗೋಧ್ರಾ ಪ್ರಕರಣದ ತನಿಖೆಯನ್ನೂ ಸಿಬಿಐ ವಹಿಸಿಕೊಳ್ಳುವ ಸಾಧ್ಯತೆ ಇದೆ.

ಕ್ರಿಮಿನಲ್ ಪಿತೂರಿ, ವಂಚನೆ ಪ್ರಕರಣ ದಾಖಲು: 'ನೀಟ್' ಪರೀಕ್ಷಾ ಅಕ್ರಮಗಳ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಕೇಂದ್ರ ಸರ್ಕಾರ ನಿರ್ಧರಿಸಿದ ಬಳಿಕ, ಶಿಕ್ಷಣ ಸಚಿವಾಲಯದ ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶಕರು ಸಿಬಿಐಗೆ ದೂರು ನೀಡಿದರು. ಅದನ್ನು ಆಧರಿಸಿ ಸಿಬಿಐ ಎಫ್‌ಐಆರ್ ದಾಖಲಿಸಿದೆ. ಭಾರತೀಯ ದಂಡ ಸಂಹಿತೆ ಕಲಂ 120–ಬಿ (ಕ್ರಿಮಿನಲ್ ಪಿತೂರಿ) ಮತ್ತು 420 (ವಂಚನೆ) ಅಡಿಯಲ್ಲಿ ಪ್ರಕರಣ ದಾಖಲಾಗಿದೆ.



ಬಂಧಿತನನ್ನು ಬಿಹಾರದ ಪಟ್ನಾದಲ್ಲಿರುವ ಎಲ್‌ಎನ್‌ಜೆಪಿ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೊಳಪಡಿಸಲಾಯಿತು

ಮೇ 5ರಂದು ವಿದೇಶದ 14 ನಗರಗಳು ಸೇರಿದಂತೆ ದೇಶದ 571 ನಗರಗಳ 4,750 ಕೇಂದ್ರಗಳಲ್ಲಿ ಪರೀಕ್ಷೆ ನಡೆಸಲಾಗಿತ್ತು. 23 ಲಕ್ಷಕ್ಕೂ ಹೆಚ್ಚು ಅಭ್ಯರ್ಥಿಗಳು ಹಾಜರಾಗಿದ್ದರು. ಕೆಲ ರಾಜ್ಯಗಳಲ್ಲಿ ಪರೀಕ್ಷಾ ಅಕ್ರಮಗಳು ನಡೆದಿರುವ ದೂರುಗಳು ಬಂದಿವೆ ಎಂದು ಶಿಕ್ಷಣ ಸಚಿವಾಲಯ ದೂರಿನಲ್ಲಿ ತಿಳಿಸಿದೆ.

9ನೇ ಪುಟ ನೋಡಿ

ಪರೀಕ್ಷೆಗೆ ಒಂದು ದಿನ ಮುನ್ನ ನೀಟ್-ಪಿಜಿ ರದ್ದುಪಡಿಸಲಾಗಿದೆ. ಅದರ ಹೊಣೆ ಮೋದಿ ಮತ್ತು ಸಚಿವರದ್ದು. ಪ್ರಧಾನಿ ಕ್ಷಮೆ ಕೇಳಬೇಕು
ಅಸಾದುದ್ದೀನ್ ಒವೈಸಿ, ಎಐಎಂಐಎಂ ನಾಯಕ

ನೀಟ್-ಪಿಜಿ ಮುಂದೂಡಿಕೆ ಆಗಿದೆ. ಮೋದಿಯವರ ಆಡಳಿತದಲ್ಲಿ ದೇಶದ ಶಿಕ್ಷಣ ವ್ಯವಸ್ಥೆ ಹಾಳಾಗಿರುವುದಕ್ಕೆ ಮತ್ತೊಂದು ದುರದೃಷ್ಟಕರ ಉದಾಹರಣೆ ಇದು
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಎನ್‌ಟಿಎ ಸ್ವಾಯತ್ತ ಸಂಸ್ಥೆ ಎಂದು ಬಿಂಬಿಸಲಾಗಿದೆ. ಆದರೆ, ವಾಸ್ತವದಲ್ಲಿ ಅದನ್ನು ಬಿಜೆಪಿ/ಆರ್‌ಎಸ್‌ಎಸ್‌ನ ಹಿತಾಸಕ್ತಿಗಳನ್ನು ಜಾರಿಗೊಳಿಸಲು ಬಳಸಲಾಗುತ್ತಿದೆ
ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ಅಧ್ಯಕ್ಷ

ನೀಟ್: ಐವರ ಬಂಧನ

ಪಟ್ನಾ (ಪಿಟಿಐ): ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯನ್ನು ಚುರುಕುಗೊಳಿಸಿರುವ ಬಿಹಾರ ಪೊಲೀಸ್ ಇಲಾಖೆಯ ಆರ್ಥಿಕ ಅಪರಾಧಗಳ ವಿಭಾಗವು, ಭಾನುವಾರ ನಳಂದದ ಐದು ಮಂದಿಯನ್ನು ಬಂಧಿಸಿದೆ.

ಈ ಮೂಲಕ ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 18ಕ್ಕೆ ಏರಿಕೆ ಆಗಿದೆ. ಬಲದೇವ ಕುಮಾರ್, ಮುಕೇಶ್ ಕುಮಾರ್, ಪಂಕು ಕುಮಾರ್, ರಾಜೀವ್ ಕುಮಾರ್ ಮತ್ತು ಪರಮಜೀತ್ ಸಿಂಗ್ ಬಂಧಿತರು.

ಈ ಪ್ರಕರಣವನ್ನು ಬಿಹಾರ ಸರ್ಕಾರವು ಸಿಬಿಐಗೆ ವರ್ಗಾಯಿಸಿದೆ.

ಮಹಾರಾಷ್ಟ್ರದಲ್ಲಿ ಇಬ್ಬರ ವಿಚಾರಣೆ: ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಪೊಲೀಸರು ಇಬ್ಬರು ಶಿಕ್ಷಕರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಶಿಕ್ಷಕರಾದ ಸಂಜಯ್ ತುಕಾರಾಂ ಜಾಧವ್ ಮತ್ತು ಜಲೀಲ್‌ಉಮರ್ ಖಾನ್ ಪಠಾಣ್ ಅವರು ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಶಂಕೆಯ ಮೇರೆಗೆ ನಾಂದೇಡ್ ಭಯೋತ್ಪಾದನಾ ನಿಗ್ರಹ ದಳದವರು (ಎಟಿಎಸ್) ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ.

ಮರು ನೀಟ್: 813 ಮಂದಿ ಹಾಜರು

ನವದೆಹಲಿ (ಪಿಟಿಐ): ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯಲ್ಲಿ (ನೀಟ್) ಕೃಪಾಂಕ ನೀಡಿದ್ದ 1,563 ಅಭ್ಯರ್ಥಿಗಳಿಗಾಗಿ ಭಾನುವಾರ ನಡೆದ ಮರು ಪರೀಕ್ಷೆಗೆ 813 ಮಂದಿ ಹಾಜರಾಗಿದ್ದಾರೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಛತ್ತೀಸಗಢ, ಗುಜರಾತ್, ಹರಿಯಾಣ, ಮೇಘಾಲಯ ಮತ್ತು ಚಂಡೀಗಢದಲ್ಲಿ ಏಳು ಪರೀಕ್ಷಾ ಕೇಂದ್ರಗಳನ್ನು ತೆರೆದಿತ್ತು. 750 ಅಭ್ಯರ್ಥಿಗಳು ಗೈರಾಗಿದ್ದಾರೆ.

9ನೇ ಪುಟ ನೋಡಿ



ಪರೀಕ್ಷೆ ಯಶಸ್ವಿ

ಚಿತ್ರದುರ್ಗ ಜಿಲ್ಲೆ ನಾಯಕನಹಟ್ಟಿ ಸಮೀಪದ ಕುದಾಪುರ ಡಿಆರ್‌ಡಿಒ ಏರೋನಾಟಿಕಲ್ ಟೆಸ್ಟ್ ರೇಂಜ್ ಆವರಣದಲ್ಲಿ ಭಾನುವಾರ ನಡೆದ ಅಂತಿಮ ಹಂತದ ಪರೀಕ್ಷಾರ್ಥ ಹಾರಾಟದ ವೇಳೆ 'ಪುಷ್ಪಕ್' ಉಡಾವಣಾ ವಾಹನವು ಪ್ಯಾರಾಚೂಟ್ ನೆರವಿನಿಂದ ವೇಗ ತಗ್ಗಿಸಿಕೊಂಡು ರನ್‌ವೇ ಮಧ್ಯ ಭಾಗದಲ್ಲಿ ಲ್ಯಾಂಡಿಂಗ್ ಆದ ಕ್ಷಣ (ಚಿತ್ರಕೃಪೆ: ಇಸ್ರೊ)

4ನೇ ಪುಟ ನೋಡಿ

ಸೂರಜ್ ರೇವಣ್ಣ ಜೈಲಿಗೆ

14 ದಿನ ನ್ಯಾಯಾಂಗ ಬಂಧನ ವಿಧಿಸಿದ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವಕನ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪ ಹೊತ್ತಿರುವ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತರಾಗಿರುವ ಸೂರಜ್ ರೇವಣ್ಣ ಅವರನ್ನು ಪೊಲೀಸರು 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ (42ನೇ ಎಸಿಎಂಎಂ) ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್. ಶಿವಕುಮಾರ್ ಅವರ ಕೋರಮಂಗಲದಲ್ಲಿರುವ ನಿವಾಸದಲ್ಲಿ ಭಾನುವಾರ ಸಂಜೆ ಹಾಜರುಪಡಿಸಿದರು.

ವಿಚಾರಣೆ ನಡೆಸಿದ ನ್ಯಾಯಾಧೀಶರು ಸೂರಜ್ ರೇವಣ್ಣ ಅವರನ್ನು 14 ದಿನಗಳ ನ್ಯಾಯಾಂಗ ಬಂಧನಕ್ಕೆ ನೀಡಿ ಆದೇಶಿಸಿದರು.

ಭಾನುವಾರ ಬೆಳಿಗ್ಗೆ ಬಂಧನ



ಹಾಸನ: ಯುವಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರನ್ನು ಭಾನುವಾರ ಪೊಲೀಸರು ಇಲ್ಲಿ ಬಂಧಿಸಿದರು. ಸಿಐಡಿಗೆ ತನಿಖೆಯನ್ನು ಒಪ್ಪಿಸಲಾಗಿದೆ.

ಕಸ್ಟಡಿಗೆ ನ್ಯಾಯಾಲಯಕ್ಕೆ ಅರ್ಜಿ

ಬೆಂಗಳೂರು: 'ಸೂರಜ್ ರೇವಣ್ಣ ಅವರ ವಿರುದ್ಧದ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲಾಗಿರುವ ಕಾರಣ ಹಾಸನ ಪೊಲೀಸರು ಆರೋಪಿಯನ್ನು ಕಸ್ಟಡಿಗೆ ಪಡೆದುಕೊಂಡಿಲ್ಲ. ಈಗ ಪ್ರಾಥಮಿಕ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಜೊತೆಗೆ, ಆರೋಪಿ ಸೂರಜ್ ಅವರ ವಿಚಾರಣೆಯ ಅಗತ್ಯವಿದೆ. ಅವರನ್ನು ಕಸ್ಟಡಿಗೆ ಪಡೆಯಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗುವುದು' ಎಂದು ಸಿಐಡಿ ಮೂಲಗಳು ತಿಳಿಸಿವೆ.

'ಈ ಪ್ರಕರಣವನ್ನು ಸಿಐಡಿಗೆ ವಹಿಸಿ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಡಿಸಿಪಿ ಆರ್. ಹಿತೇಂದ್ರ ಆದೇಶ ಹೊರಡಿಸಿದ್ದಾರೆ. ಇದರ ಬೆನ್ನಲ್ಲೇ ಸಿಐಡಿ ಎಡಿಜಿಪಿ ಬಿ.ಕೆ. ಸಿಂಗ್ ಅವರು ತನಿಖೆಗೆ ಡಿವೈಎಸ್‌ಪಿ ನೇತೃತ್ವದಲ್ಲಿ ತಂಡ ರಚಿಸಿದ್ದಾರೆ. ಸೋಮವಾರದಿಂದ ತಂಡದ ತನಿಖೆ ಶುರುವಾಗಲಿದೆ' ಎಂದು ಮೂಲಗಳು ಹೇಳಿವೆ.

8ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬಿಹಾರ: ನಿರ್ಮಾಣ ಹಂತದ ಇನ್ನೊಂದು ಸೇತುವೆ ಕುಸಿತ

ಮೋತಿಹಾರಿ (ಪಿಟಿಐ): ಬಿಹಾರದ ಪೂರ್ವ ಚಂಪಾರಣ್ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿದ್ದ ಸೇತುವೆಯೊಂದು ಭಾನುವಾರ ಕುಸಿದುಬಿದ್ದಿದೆ. ಒಂದು ವಾರಕ್ಕಿಂತ ಕಡಿಮೆ ಅವಧಿಯಲ್ಲಿ ಬಿಹಾರದಲ್ಲಿ, ನಿರ್ಮಾಣ ಹಂತದ ಸೇತುವೆ ಮುರಿದುಬಿದ್ದ ಮೂರನೆಯ ಪ್ರಕರಣ ಇದು.

ಮೋತಿಹಾರಿಯ ಘೋಡಾಸಹಾನ್‌ನಲ್ಲಿ ನಡೆದ ಈ ಘಟನೆಯಲ್ಲಿ ಪ್ರಾಣಾಪಾಯ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 16 ಮೀಟರ್ ಉದ್ದದ ಈ ಸೇತುವೆಯನ್ನು ಕಾಲುವೆಯೊಂದರ ಮೇಲೆ ನಿರ್ಮಿಸಲಾಗುತ್ತಿತ್ತು. ರಾಜ್ಯ ಸರ್ಕಾರದ ಗ್ರಾಮೀಣ ಕಾಮಗಾರಿ ವಿಭಾಗವು ₹1.5 ಕೋಟಿ ವೆಚ್ಚದ ಈ ಕಾಮಗಾರಿಯನ್ನು ಕೈಗೆತ್ತಿಕೊಂಡಿತ್ತು.

'ಸೇತುವೆ ಕುಸಿದು ಬೀಳುವುದಕ್ಕೆ ಕಾರಣ ಏನು ಎಂಬುದು ಖಚಿತವಾಗಿಲ್ಲ. ಆದರೆ ಇದು ಗಂಭೀರ ವಿಚಾರ. ಇಲಾಖಾ ತನಿಖೆಗೆ ಆದೇಶಿಸಲಾಗಿದೆ. ತಪ್ಪು ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ' ಎಂದು ಗ್ರಾಮೀಣ ಕಾಮಗಾರಿ ವಿಭಾಗದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ದೀಪಕ್ ಕುಮಾರ್ ಸಿಂಗ್ ಹೇಳಿದ್ದಾರೆ. 'ಜಿಲ್ಲಾಡಳಿತದ ಹಿರಿಯ ಅಧಿಕಾರಿಗಳು ಸ್ಥಳಕ್ಕೆ ತೆರಳಿದ್ದಾರೆ. ವಿಸ್ತೃತ ವರದಿ ಬರಬೇಕಿದೆ' ಎಂದು ಹೇಳಿದ್ದಾರೆ.

11ನೇ ಪುಟ ನೋಡಿ

16 ಜಿಲ್ಲೆಗಳಲ್ಲಿ ಭಾರಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಮತ್ತು ದಕ್ಷಿಣ ಒಳನಾಡಿನ ಹಲವೆಡೆ ಸೋಮವಾರವೂ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ತಿಳಿಸಿರುವ ಹವಾಮಾನ ಇಲಾಖೆಯು, 10 ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಆರು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಬೆಳಗಾವಿ, ಧಾರವಾಡ, ಹಾವೇರಿ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಹಾಗೂ ಕೊಡಗು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಗುಡುಗು ಸಹಿತ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ.

ಬಾಗಲಕೋಟೆ, ಗದಗ, ದಾವಣಗೆರೆ, ಮೈಸೂರು, ಮಂಡ್ಯ ಹಾಗೂ ಚಾಮರಾಜನಗರ ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ. ಕರಾವಳಿಯ ಉದ್ದಕ್ಕೂ ತೀವ್ರ ಬಿರುಗಾಳಿಯ ಸಾಧ್ಯತೆಯಿದೆ. ಗಂಟೆಗೆ 35 ಕಿ.ಮೀ.ನಿಂದ 55 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಂಭವವಿದೆ. ಮೀನುಗಾರರು ಎಚ್ಚರ ವಹಿಸಬೇಕು. ಸಮುದ್ರದಲ್ಲಿ ಕಾರ್ಯಾಚರಣೆ ಹಾಗೂ ಸಮುದ್ರದ ದಡದಲ್ಲಿ ಮನರಂಜನಾ ಚಟುವಟಿಕೆಗಳನ್ನು ನಡೆಸುವಾಗ ಜಾಗರೂಕವಾಗಿರಬೇಕು ಎಂದು ಇಲಾಖೆ ಹೇಳಿದೆ.

ಮಂಗಳವಾರವೂ ರಾಜ್ಯದ 14 ಜಿಲ್ಲೆಗಳಲ್ಲಿ ತೀವ್ರ ಮಳೆಯಾಗುವ ಸಾಧ್ಯತೆಯಿದ್ದು, ಏಳು ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ ಏಳು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಿರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ.

ನಗರದಲ್ಲಿ ಇಂದು

ಯುವೋತ್ಸವ-ವಾಲಿಬಾಲ್ ಮತ್ತು ಥ್ರೋಬಾಲ್ ಕ್ರೀಡಾಕೂಟ: ಆಯೋಜನೆ ಮತ್ತು ಸ್ಥಳ: ರಾಣಿ ಸರಳಾದೇವಿ ಪದವಿ ಕಾಲೇಜು, ಜಯನಗರ, 10ನೇ ಮುಖ್ಯರಸ್ತೆ, ಬೆಳಿಗ್ಗೆ 9

ಡಿ.ಎಸ್. ವಿಶ್ವನಾಥ್ ಅವರ ಮೂರು ಪುಸ್ತಕಗಳ ಲೋಕಾರ್ಪಣೆ: ಬಿಡುಗಡೆ: ಎಂ.ವಿ. ರವೀಂದ್ರ, ಎಂ.ಎನ್. ಸುಧಾ, ಎಸ್.ಜಿ. ಸಿದ್ದರಾಮಯ್ಯ, ಅಧ್ಯಕ್ಷತೆ: ಮನು ಬಳಿಗಾರ್, ಆಯೋಜನೆ: ಗಣೇಶ್ ಪಬ್ಲಿಕೇಷನ್, ಬೆಳಿಗ್ಗೆ 10.15

'ಸಂಪೂರ್ಣ ರಾಮಾಯಣ' ನಾಟಕ: ಉದ್ಘಾಟನೆ: ಜಗದೀಶ್ ಗೌಡ, ಅಧ್ಯಕ್ಷತೆ: ನಾಗರಾಜಮೂರ್ತಿ, ಉಪಸ್ಥಿತಿ: ಅಶೋಕ ಛಲವಾದಿ, ನಾಗರಾಜು, ಡಿ.ರಾಜು, ರಂಗಗೌರವ: ಲಕ್ಷ್ಮಣ್ ಮಾಲೂರು, ಡಬ್ಲ್ಯು.ಎಚ್. ಶಾಂತಕುಮಾರ್, ವಿ. ವಿಜಯಕುಮಾರ್, ವೆಂಕಟಯ್ಯ, ವೆಂಕಟೇಶ್, ಸಿದ್ದಪ್ಪ, ಆರ್. ಕೋದಂಡರಾಮು, ಮುತ್ತುರಾಜು, ಇರಗಪ್ಪ, ಆಯೋಜನೆ: ಅಖಿಲ ಕರ್ನಾಟಕ ರಂಗಭೂಮಿ ಪರಿಷತ್ತು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ದೃಶ್ಯೋತ್ಸವ-ವಾರ್ಷಿಕ ಪ್ರದರ್ಶನ: ಆಯೋಜನೆ ಮತ್ತು ಸ್ಥಳ: ಚಿತ್ರಕಲಾ ಮಹಾವಿದ್ಯಾಲಯ, ವಿಷ್ಣುವರ್ಧನ್ ರಸ್ತೆ, ಶ್ರೀನಿವಾಸಪುರ, ಬನಶಂಕರಿ, ಸಂಜೆ 4.30

'ಅಂಗ ರಂಗಾಭಿನಯ'-ರಂಗಶಿಬಿರ ಸಮಾರೋಪ, 'ಕರ್ಣ ಭಾರ' ಪ್ರದರ್ಶನ: ಅತಿಥಿಗಳು: ಎಚ್.ಆರ್.ಸ್ವಾಮಿ, ಕೂಡ್ಲೂರು ವೆಂಕಟಪ್ಪ, ಕೆ. ಜಯಣ್ಣ, ಎನ್.ಎಸ್. ರಾಜು, ನಾರ್ಲೆಕ್ಸ್ ರಮೇಶ, ನಿರ್ಮಲ ನಾದನ್, ಆಯೋಜನೆ: ಕರ್ನಾಟಕ ಬೀದಿನಾಟಕ ಅಕಾಡೆಮಿ, ಕೇಂದ್ರ ಸಂಸ್ಕೃತಿ ಸಚಿವಾಲಯ, ಸ್ಥಳ: ಕೆ.ಆರ್.ಪಿ. ಇಂಟಿಮೇಟ್ ಥಿಯೇಟರ್, ಮಾರಮ್ಮ ದೇವಸ್ಥಾನ ಹತ್ತಿರ, ರಾಜರಾಜೇಶ್ವರಿ ನಗರ, ಸಂಜೆ 6

'ದಾರಿ ತೋರು ಗುರುವೆ' ಸಂಚಾರ ನಿಯಮಗಳ ಬಗ್ಗೆ ಜಾಗೃತಿ ಮೂಡಿಸುವ ಬೀದಿ ನಾಟಕ: ಅತಿಥಿಗಳು: ಮಂಜುನಾಥ ಎಸ್. ಅಧ್ಯಕ್ಷತೆ: ಡಾ.ಕೆ.ಎಸ್.ಗೋಪಾಲಕೃಷ್ಣ, ಆಯೋಜನೆ: ಬಿಜಿಎಸ್ ಕಲೆ ಮತ್ತು ವಾಣಿಜ್ಯ ಸಂಜೆ ಮಹಾವಿದ್ಯಾಲಯ, ಸ್ಥಳ: ಮಹಾವಿದ್ಯಾಲಯದ ಆವರಣ, 16ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ರಾಷ್ಟ್ರಮಟ್ಟದ ಪಟ್ಟಣ ಸಹಕಾರ ಬ್ಯಾಂಕ್‌ಗಳ ಸಮಾವೇಶದಲ್ಲಿ ನಿರ್ಧಾರ

ಬ್ಯಾಂಕ್: ದತ್ತಾಂಶ ರಕ್ಷಣೆಗೆ ಒತ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ಸೈಬರ್ ಭದ್ರತೆ ಮತ್ತು ದತ್ತಾಂಶ ಸುರಕ್ಷತೆಗಾಗಿ ಉತ್ತಮ ವಿಧಾನಗಳನ್ನು ಅಳವಡಿಸಲು ಭಾನುವಾರ ನಡೆದ ರಾಷ್ಟ್ರ ಮಟ್ಟದ ಪಟ್ಟಣ ಸಹಕಾರ ಬ್ಯಾಂಕ್‌ಗಳ ಸಮಾವೇಶದಲ್ಲಿ ನಿರ್ಧರಿಸಲಾಯಿತು.

ಭಾವಸಾರ ಕ್ಷತ್ರಿಯ ಸಹಕಾರಿ ಬ್ಯಾಂಕ್ ಆಶ್ರಯದಲ್ಲಿ ನಡೆದ ಈ ಸಮಾವೇಶದಲ್ಲಿ 150 ಪಟ್ಟಣ ಸಹಕಾರಿ ಬ್ಯಾಂಕ್‌ಗಳ ಅಧ್ಯಕ್ಷರು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಮಾಹಿತಿ ತಂತ್ರಜ್ಞಾನ ತಂಡದ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ದೇಶದ ವಿವಿಧ ಐ.ಟಿ. ವಲಯದ ಸಂಸ್ಥೆಗಳ ಪ್ರತಿನಿಧಿಗಳೂ ಪಾಲ್ಗೊಂಡಿದ್ದರು.

ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಮಹಾ ಮಂಡಳದ ಹಿರಿಯ ನಿರ್ದೇಶಕ ರುದ್ರೇಗೌಡ ಮಾತನಾಡಿ, 'ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿ ಸುರಕ್ಷತೆ ಅಗತ್ಯವಾಗಿದೆ. ದತ್ತಾಂಶ ಸೋರಿಕೆ, ಸೈಬರ್ ಅಪಾಯಗಳು ಹೆಚ್ಚಾಗುತ್ತಿವೆ. ಬ್ಯಾಂಕ್‌ಗಳ ಆಡಳಿತ ಮಂಡಳಿಗಳು ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಬೇಕು. ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ವಿಶೇಷ ಗಮನಹರಿಸಬೇಕು. ಮೈಲ್ಯ ಕಣ್ಣಾಗಿ ಕಾರ್ಯನಿರ್ವಹಿಸಬೇಕು' ಎಂದು ಸಲಹೆ ನೀಡಿದರು. ಭಾವಸಾರ ಕ್ಷತ್ರಿಯ ಸಹಕಾರಿ ಬ್ಯಾಂಕ್ ಅಧ್ಯಕ್ಷ ಕೆ.ಜಿ.ಅನಂತ್ ಕುಮಾರ್ ಮಾತನಾಡಿ, 'ದತ್ತಾಂಶ ಮತ್ತು ಸೈಬರ್ ಭದ್ರತೆಗೆ ಕೇಂದ್ರ ಸರ್ಕಾರ 2014 ರಲ್ಲಿ ಜಾರಿಗೆ ತಂದ ನಿಯಮಗಳನ್ನು ನಾವು ಅಳವಡಿಸಿಕೊಂಡಿದ್ದೇವೆ. ಮತ್ತಷ್ಟು ಸುಧಾರಿತ ತಂತ್ರಜ್ಞಾನ ಮತ್ತು ನಿಯಮಗಳ ಅಳವಡಿಕೆ ಅಗತ್ಯ. 108 ವರ್ಷಗಳಿಂದ ಹಿಟ್ಟು ಕಾಲದಿಂದ ಅತ್ಯಾಧುನಿಕವರೆಗೂ ನಮ್ಮ ಬ್ಯಾಂಕ್‌ನಲ್ಲಿ ಸುಧಾರಣೆಗೆ ಒತ್ತು ನೀಡಲಾಗಿದೆ' ಎಂದು ವಿವರಿಸಿದರು.

ಸಹಕಾರ ಸಂಘಗಳ ಜಂಟಿ ನಿಬಂಧಕ ಪಿ. ಮಹೇಶ್, ಬ್ಯಾಂಕಿನ ಸಿಇಒ ಜೆ. ಪ್ರಕಾಶ, ಐಟಿ ಮುಖ್ಯಸ್ಥ ವಿ.ಕೆ. ಗೋಪಿನಾಥ್, ತ್ಯಾಗರಾಜ ಕೋ-ಆಪರೇಟಿವ್ ಬ್ಯಾಂಕಿನ ಅಧ್ಯಕ್ಷ ಎಂ.ಆರ್. ವೆಂಕಟೇಶ್ ಸಂವಾದದಲ್ಲಿ ಭಾಗವಹಿಸಿದ್ದರು.

ಮೈಂಡ್ ಮಿಲ್ ಸಾಫ್ಟ್‌ವೇರ್ ಲಿಮಿಟೆಡ್ ನಿರ್ದೇಶಕ ರಾಘವ್ ಗುಪ್ತಾ, 'ಇವಿಲ್‌ಸಿಸ್ ಸಾಫ್ಟ್‌ವೇರ್‌ನ ಸಿಇಒ ಪೀಯೂಷ್ ಸೋಮಾನಿ, ಯಲಮನ್ನಲಿ ಡಿಜಿಟಲ್ ಸಲ್ಯೂಷನ್ ಸಿಇಒ ರಾಮಕುಮಾರ್ ಶೇಖರ್, ಪ್ರೋಟೆಕ್ ಮೈಕ್ರೋಸಿಸ್ಟಮ್‌ನ ಐಟಿ ಸೆಕ್ಯುರಿಟೀಸ್ ನಿರ್ದೇಶಕ ಭಾರ್ಗವ್ ಪರಶುರಾಮ್ ಚರ್ಚೆ ನಡೆಸಿಕೊಟ್ಟರು.



ಭಾವಸಾರ ಕ್ಷತ್ರಿಯ ಸಹಕಾರಿ ಬ್ಯಾಂಕ್ ಆಶ್ರಯದಲ್ಲಿ ಭಾನುವಾರ ನಡೆದ ರಾಷ್ಟ್ರಮಟ್ಟದ ಪಟ್ಟಣ ಸಹಕಾರ ಬ್ಯಾಂಕ್‌ಗಳ ಸಮಾವೇಶದಲ್ಲಿ ಹೊಸ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಯಿತು

ಸುದ್ದಿ 2 ನಿಮಿಷ

ಶಿಕ್ಷಣದಿಂದ ಮಾತ್ರ ಮಕ್ಕಳಿಗೆ ಉತ್ತಮ ಭವಿಷ್ಯ: ಕೃಷ್ಣ ಬೈರೇಗೌಡ

ಬೆಂಗಳೂರು: 'ಮಕ್ಕಳ ಭವಿಷ್ಯ ಉಜ್ವಲವಾಗಿ ರೂಪುಗೊಳ್ಳಲು ಹಾಗೂ ಅವರು ದೊಡ್ಡ ಮಟ್ಟದ ಯಶಸ್ಸನ್ನು ಸಾಧಿಸಲು ಶಿಕ್ಷಣದಿಂದ ಮಾತ್ರ ಸಾಧ್ಯ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅಭಿಪ್ರಾಯಪಟ್ಟರು.

ಕುವೆಂಪು ವಾರ್ಡ್‌ನಲ್ಲಿ ಸುಜನಾ ಕಾನ್ವೆಂಟ್‌ನಲ್ಲಿ ಭಾನುವಾರ ಏರ್ಪಡಿಸಿದ್ದ 'ನಮ್ಮೂರ ಹೆಮ್ಮೆ-2024' ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ತರಗತಿಯಲ್ಲಿ ಉತ್ತಮ ಅಂಕ ಗಳಿಸಿದ 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ನೀಡಿ, ಸನ್ಮಾನಿಸಿ ಮಾತನಾಡಿದರು.

'ಪರೀಕ್ಷೆಯಲ್ಲಿ ಉತ್ತಮ ಅಂಕಗಳಿಸಲು ವಿದ್ಯಾರ್ಥಿಗಳು ಸಾಕಷ್ಟು ಶ್ರಮವಹಿಸಿರುತ್ತಾರೆ. ಅವರ ಶ್ರಮವನ್ನು ಗೌರವಿಸಬೇಕಾದರೆ ಉತ್ತೇಜನ ನೀಡುವುದಕ್ಕಾಗಿ ಈಗಿನ ಸಾರ್ವಜನಿಕರ ಸಮ್ಮುಖದಲ್ಲಿ ಕಾರ್ಯಕ್ರಮ ಮಾಡಿ ಸನ್ಮಾನಿಸಲಾಗುತ್ತಿದೆ' ಎಂದರು.

'ಉತ್ತಮ ಅಂಕ ಪಡೆಯುವ ಮಕ್ಕಳು ಮನೆಗಷ್ಟೇ ಅಲ್ಲ ಸಮಾಜಕ್ಕೆ ಹೆಮ್ಮೆಯ ವಿಚಾರ. ಅದೇ ಕಾರಣಕ್ಕಾಗಿ ಈ ಕಾರ್ಯಕ್ರಮಕ್ಕೆ 'ನಮ್ಮೂರ ಹೆಮ್ಮೆ' ಎಂದು ಹೆಸರಿಟ್ಟಿದ್ದೇವೆ' ಎಂದರು.

ಮೀನಾಕ್ಷಿ ಕೃಷ್ಣಬೈರೇಗೌಡ ಅವರು ಮಾತನಾಡಿದರು. ಕಾರ್ಯಕ್ರಮದಲ್ಲಿ ಬ್ಯಾಟರಾಯನಪುರ ಕ್ಷೇತ್ರ ಕುವೆಂಪು ನಗರ ವಾರ್ಡ್‌ನ ಕಾಂಗ್ರೆಸ್ ಸ್ಥಳೀಯ ನಾಯಕರು ಹಾಗೂ ಕಾರ್ಯಕರ್ತರು ಇದ್ದರು.



'ಮಿಯಾವಾಕಿ' ಮಾದರಿ ಕಿರು ಅರಣ್ಯ ಬಳಕೆಗೆ ಮುಕ್ತ

ಬೆಂಗಳೂರು: ಜೆ.ಪಿ. ನಗರ 9ನೇ ಹಂತದಲ್ಲಿರುವ ರಾಯಲ್ ಪಾರ್ಕ್ ರೆಸಿಡೆನ್ಸಿ ಬಡಾವಣೆಯ ಅರ್ಧ ಎಕರೆ ಪ್ರದೇಶದಲ್ಲಿ ನೆಟ್ಟ ಸಾವಿರದ ಮುನ್ನೂರು ಗಿಡಗಳ 'ಮಿಯಾವಾಕಿ' ಮಾದರಿಯ ಕಿರು ಅರಣ್ಯವನ್ನು ಭಾನುವಾರ ಬಳಕೆಗೆ ಮುಕ್ತಗೊಳಿಸಿದರು.

'ಮಿಯಾವಾಕಿ' ಕಿರು ಅರಣ್ಯದ ರೂವಾರಿ ಮತ್ತು ಬಡಾವಣೆಯ ನಿವಾಸಿ ಚಂದ್ರಶೇಖರ್ ಕಾಶಲ್ ಮಾತನಾಡಿ, 'ರಾಯಲ್ ಪಾರ್ಕ್ ಬಡಾವಣೆಯಲ್ಲಿ ನಾಲ್ಕು ವರ್ಷಗಳಲ್ಲಿ ಸುಮಾರು 4,000 ಸಸಿಗಳನ್ನು ಮಿಯಾವಾಕಿ ಮಾದರಿ ಕಿರು ಅರಣ್ಯದಲ್ಲಿ ನೆಟ್ಟು ಪೋಷಿಸುತ್ತಾ ಬಂದಿದ್ದೇವೆ. ಆ ಗಿಡಗಳು ಈಗ 20 ಅಡಿಗಿಂತಲೂ ಹೆಚ್ಚು ಎತ್ತರ ಹಾಗೂ ಒತ್ತೊತ್ತಾಗಿ ಬೆಳೆದು ಕಿರು ಅರಣ್ಯವೇ ಆಗಿದೆ' ಎಂದರು.

'ಬಡಾವಣೆಯಲ್ಲಿ ಇಲ್ಲಿವರೆಗೂ ಮೂರು ಮಿಯಾವಾಕಿ ಮಾದರಿಯ ಕಿರು ಅರಣ್ಯಗಳನ್ನು ಮಾಡಿದ್ದೇವೆ. ಇದು ನಾಲ್ಕನೇ ಕಿರು ಅರಣ್ಯವಾಗಿ ರೂಪುಗೊಳ್ಳುತ್ತಿದೆ' ಎಂದು ತಿಳಿಸಿದರು.

ಅತಿಥಿಗಳಾಗಿ ಭಾಗವಹಿಸಿದ್ದ 'ಟ್ರೀ ಡಾಕ್ಟರ್' ಖ್ಯಾತಿಯ ಪರಿಸರವಾದಿ ವಿಜಯ್ ನಿಶಾಂತ್, ತಲಘಟ್ಟಪುರ ಪೊಲೀಸ್ ಠಾಣೆಯ ಸಬ್‌ಇನ್‌ಸ್ಪೆಕ್ಟರ್ ಉಮೇಶ್ ಮಿಯಾವಾಕಿಯಲ್ಲಿ ಗಿಡಗಳನ್ನು ನೆಟ್ಟರು. ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರವಿರಾಜ್ ಬಲ್ಲಾಳ್ ಸ್ವಾಗತಿಸಿದರು. ಕಾರ್ಯದರ್ಶಿ ಬಿ.ಜಿ. ಶ್ರೀಪತಿ ವಂದಿಸಿದರು.

ಹೂಡಿಕೆ ಹೆಸರಿನಲ್ಲಿ ಎಂಜಿನಿಯರ್‌ಗೆ ₹36 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ಷೇರು ಹೂಡಿಕೆ ಹೆಸರಿನಲ್ಲಿ ನಗರದ ಕಂದವಾರ ಬಾಗಿಲಿನ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರಿಗೆ ಆನ್‌ಲೈನ್ ವಂಚಕರು ₹36.70 ಲಕ್ಷ ವಂಚಿಸಿದ್ದಾರೆ. ಈ ಬಗ್ಗೆ ಎಂಜಿನಿಯರ್ ನಗರದ ಸಿ.ಇ.ಎನ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. 'ನಾನು ಅವರು ತಿಳಿಸಿದ ಖಾತೆಗಳಿಗೆ ಹಣ ಹೂಡಿಕೆ ಮಾಡಿದೆ. ಹೂಡಿಕೆ ಮಾಡಿದರೆ ಕಮಿಷನ್ ನೀಡುವುದಾಗಿ ಹೇಳಿ ಒಟ್ಟು ₹36.70 ಲಕ್ಷವನ್ನು ಆನ್‌ಲೈನ್ ಮೂಲಕ ವರ್ಗಾಯಿಸಿಕೊಂಡು ಮೋಸ ಮಾಡಿರುವ ಮೇಲೆ ಕಾನೂನು ರೀತಿ ಕ್ರಮ ಜರುಗಿಸಬೇಕು' ಎಂದು ದೂರಿನಲ್ಲಿ ಕೋರಿದ್ದಾರೆ.

ಅಂಬಿಗರ ಚೌಡಯ್ಯ, ಹರಿಹರ ಜಯಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಕಾವ್ಯಲೋಕದ ಪಥವನ್ನೇ ಬದಲಾಯಿಸಿದ ಅಂಬಿಗರ ಚೌಡಯ್ಯ ಮತ್ತು ಕವಿ ಹರಿಹರ ನಿಜ ಬಂಡಾಯಗಾರರು ಎಂದು ಸಾಹಿತಿ ಎಚ್. ಏನಾಕ್ಷಿ ಪತಿ ತಿಳಿಸಿದರು.

ನಗರದಲ್ಲಿ ವಚನಜ್ಯೋತಿ ಬಳಗ ಆಯೋಜಿಸಿದ್ದ ಅಂಬಿಗರ ಚೌಡಯ್ಯ ಮತ್ತು ಹರಿಹರ ಅವರ ಜಯಂತಿಯಲ್ಲಿ ಅವರು ಉಪನ್ಯಾಸ ನೀಡಿದರು.

'ಅಂಬಿಗರ ಚೌಡಯ್ಯ ಇತರ ವಚನಕಾರರಿಗಿಂತ ಭಿನ್ನವಾಗಿ ತನ್ನ ಹೆಸರನ್ನೇ ಅಂಕಿತವಾಗಿಟ್ಟುಕೊಂಡು ಸಮಾಜದಲ್ಲಿ ಕಂಡುಬರುತ್ತಿದ್ದ ಅನಾಚಾರ, ಡಂಭಾಚಾರಗಳನ್ನು ನಿರ್ಭೀತಿಯಿಂದ ಕಟುವಾಗಿ ಟೀಕಿಸಿರುವ ಕ್ರಾಂತಿಕಾರಿ' ಎಂದು ವಿವರಿಸಿದರು.

'ರಗಳೆ ಕವಿ ಎಂದು ಪ್ರಖ್ಯಾತನಾಗಿರುವ ಹರಿಹರದೇವ ಕನ್ನಡ ಕಾವ್ಯಲೋಕದ ಪಥವನ್ನೇ ಬದಲಾಯಿಸಿದ ಬಂಡಾಯಗಾರ. ಅಲ್ಲಿಯವರೆಗೂ ರಾಜರ ಆಸ್ಥಾನದಲ್ಲಿ ಬಂಧಿಯಾಗಿದ್ದ ಕನ್ನಡ ಸಾರಸ್ವತವನ್ನು ಶ್ರೀಸಾಮಾನ್ಯರ ಬಳಿಗೆ ಕರೆತಂದವರು. ಅಲ್ಲಿಯವರೆಗೂ ಜನ ಸಾಮಾನ್ಯರ ಸಾಹಿತ್ಯ ತಮ್ಮ ರಾಜರಿಗೆ ಸಮೀಕರಿಸಿ ಬರೆದ ರಾಮಾಯಣ, ಮಹಾಭಾರತಗಳನ್ನು ಮಹಾಕಾವ್ಯಗಳಿಗೆ ಭಿನ್ನವಾಗಿ ಜನ ಸಾಮಾನ್ಯರನ್ನು ನಾಯಕರನ್ನಾಗಿ ಮೆರೆಸಿ ಸಾಮಾಜಿಕ ನ್ಯಾಯ ನೀಡಿದವರು ಹರಿಹರ' ಎಂದು ತಿಳಿಸಿದರು.

ಪ್ರತಿಭಾವಂತ ವಿದ್ಯಾರ್ಥಿಗಳಾದ ಹರ್ಷಿಲ್, ಬಿಂದಿಯಾ, ಮನೀಷ್, ಧ್ರುವ, ಜ್ಞಾನೇಶ್‌ಗೆ ಹಿರಿಯ ಐ.ಟಿ. ಮ್ಯಾನೇಜರ್ ಪ್ರಶಾಂತ್ ಹೊಸಮಠ ಅವರು ಪ್ರಶಂಸಾ ಪತ್ರ ನೀಡಿದರು. ನಾಗರಬಾವಿ ಬಳಗದ ಖಜಾಂಚಿ ನಂದಕುಮಾರ್ ಕಾರ್ಯಕ್ರಮ ಉದ್ಘಾಟಿಸಿದರು. ವಿದ್ಯಾಭಾರತಿ ಶಾಲೆಯ ಪ್ರಾಚಾರ್ಯ ಭ್ರಮರಾಂಬ ಅಧ್ಯಕ್ಷತೆ ವಹಿಸಿದ್ದರು.

ಹರಿಹರದೇವನ ರಗಳೆಗಳ ಕೆಲ ಪದ್ಯಗಳನ್ನು ಸರ್ವಾಣಿ ಗಮಕ ವಾಚನ ಮಾಡಿದರು. ವಚನಜ್ಯೋತಿ ಬಳಗದ ಗಾಯಕಿ ಮೀನಾಕ್ಷಿ ಮೇಟಿ, ಪ್ರಧಾನ ಕಾರ್ಯದರ್ಶಿ ಪ್ರಭು, ಸಿಇಒ ರಾಜಾ ಗುರುಪ್ರಸಾದ್, ರುದ್ರೇಶ್, ಪದ್ಮಜ ಪ್ರಸನ್ನ, ಕವಿ ಗುಂಡೀಗೆರೆ ವಿಶ್ವನಾಥ್, ಹೊರಟಾಗಾರ ನಂ. ವಿಜಯಕುಮಾರ್, ಜಾಗತಿಕ ಲಿಂಗಾಯತ ಮಹಾಸಭಾ ಬೆಳ್ಳಾರ್, ರೂಪಾ ಪ್ರಸಾದ್, ಕಾತ್ಯಾಯಿನಿ ಸುಭಾಷ್ ಪಾಲ್ಗೊಂಡಿದ್ದರು.



ವಚನಜ್ಯೋತಿ ಬಳಗ ಹಮ್ಮಿಕೊಂಡಿದ್ದ ಅಂಬಿಗರ ಚೌಡಯ್ಯ ಮತ್ತು ಹರಿಹರ ಅವರ ಜಯಂತಿಯಲ್ಲಿ ಪುಷ್ಪನಮನ ಸಲ್ಲಿಸಲಾಯಿತು

ಸುಬ್ರಮಣ್ಯೇಶ್ವರ ಬ್ಯಾಂಕ್‌ನ ಸುವರ್ಣ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಡವರ, ಮಧ್ಯಮ ವರ್ಗದವರ, ವ್ಯಾಪಾರಸ್ಥರ ಆರ್ಥಿಕ ಸ್ಥಿತಿ ಸುಧಾರಣೆ ಮಾಡುವಲ್ಲಿ ಸಹಕಾರಿ ಬ್ಯಾಂಕುಗಳ ಪಾತ್ರ ಮಹತ್ವದಾಗಿದೆ' ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಹೇಳಿದರು.

ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಸುವರ್ಣ ಮಹೋತ್ಸವ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಕಳೆದ 50 ವರ್ಷಗಳಿಂದ 'ಸೇವೆಯೇ ನಮ್ಮ ಪರಂಪರೆ' ಎಂಬ ಧ್ಯೇಯ ವಾಕ್ಯದೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. 2023-24ನೇ ಸಾಲಿನಲ್ಲಿ ಒಟ್ಟು ₹8.83 ಕೋಟಿ ನಿವ್ವಳ ಲಾಭ ಗಳಿಸಿದೆ. ಗ್ರಾಹಕರ ಆರ್ಥಿಕ ಸ್ಥಿತಿಗಳನ್ನು ಸುಧಾರಿಸುವ ಕೆಲಸ ಮಾಡುತ್ತಿದೆ' ಎಂದರು.

'ನಾನು 1990ರಲ್ಲಿ ಮಧ್ಯಪ್ರದೇಶ ಸರ್ಕಾರದಲ್ಲಿ ಸಚಿವನಾದಾಗ ಸಹಕಾರಿ ಕ್ಷೇತ್ರದಲ್ಲಿ ಸಕ್ರಿಯವಾಗಿ ಕೆಲಸ ಮಾಡಿದ್ದೇನೆ. ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳಿಂದ ಪ್ರೇರಿತರಾಗಿ ಮಧ್ಯಪ್ರದೇಶದಲ್ಲಿ ಸಹಕಾರ ಕ್ಷೇತ್ರವನ್ನು ಮುನ್ನಡೆಸಿದ್ದೇವೆ. ಗ್ರಾಹಕರಿಗೆ ಇಲ್ಲಿ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲಾಗುತ್ತದೆ. ಲಾಭಾಂಶದಲ್ಲೂ ಸದಸ್ಯರಿಗೆ ಸಮಾನವಾಗಿ ಹಂಚಿಕೆ ಮಾಡಲಾಗುತ್ತದೆ' ಎಂದು ಹೇಳಿದರು.

'ಕರ್ನಾಟಕ ಮತ್ತು ಮಹಾರಾಷ್ಟ್ರ ಕೇಂದ್ರ ಸರ್ಕಾರಕ್ಕೆ ಆದಾಯ ತೆರಿಗೆ ಸೇರಿದಂತೆ ಸಂಪನ್ಮೂಲ ಕ್ರೋಢೀಕರಣ ಅಧಿಕ ಹೆಚ್ಚಿನ ಕೊಡುಗೆ ನೀಡುತ್ತಿವೆ. ಇದರಲ್ಲಿ ಸಹಕಾರಿ ಬ್ಯಾಂಕ್‌ಗಳ ಪಾತ್ರವೂ ಇದೆ. ಆದ್ದರಿಂದ, ಈ ರಾಜ್ಯಗಳ ಆರ್ಥಿಕ ಸ್ಥಿತಿಗತಿಗಳು ಬಹಳ ಚೆನ್ನಾಗಿದೆ' ಎಂದರು.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವ ಎಚ್.ಕೆ. ಪಾಟೀಲ, 'ಪಟ್ಟಣ ಸಹಕಾರಿ ಬ್ಯಾಂಕ್‌ಗಳು ತೊಂದರೆಗೆ ಸಿಲುಕಿದರೆ ಕೇಂದ್ರ ಮತ್ತು ರಾಜ್ಯ ಸರ್ಕಾರ ನೆರವು ನೀಡುತ್ತಿಲ್ಲ. ಈ ಬ್ಯಾಂಕ್‌ಗಳಿಗೆ ಸರ್ಕಾರಗಳಿಂದ ಹೆಚ್ಚಿನ ನೆರವು, ಪ್ರೋತ್ಸಾಹದ ಅಗತ್ಯವಿದೆ' ಎಂದರು.

'ಜನಸಾಮಾನ್ಯರ ಸಾಮಾಜಿಕ, ಆರ್ಥಿಕ ಪ್ರಗತಿಗಾಗಿ ಸಹಕಾರಿ ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಉದ್ಯೋಗ ಸೃಜನೆಗೆ ಒತ್ತು ನೀಡುತ್ತಿವೆ. ರಾಜ್ಯದಲ್ಲಿ 253 ಪಟ್ಟಣ ಸಹಕಾರಿ ಬ್ಯಾಂಕ್‌ಗಳಿದ್ದು, 1,050 ಶಾಖೆಗಳನ್ನು ಒಳಗೊಂಡಿವೆ. ₹47,258 ಕೋಟಿ ಠೇವಣಿ ಹೊಂದಿದ್ದು, ₹426 ಕೋಟಿ ಲಾಭದಲ್ಲಿವೆ' ಎಂದರು.



ಸುಬ್ರಮಣ್ಯೇಶ್ವರ ಕೋ-ಆಪರೇಟಿವ್ ಬ್ಯಾಂಕ್‌ನ ಸುವರ್ಣ ಮಹೋತ್ಸವದ ಅಂಗವಾಗಿ ಬ್ಯಾಂಕ್‌ನ ಲಾಂಛನವನ್ನು ಭಾನುವಾರ ಅನಾವರಣ ಮಾಡಲಾಯಿತು. (ಎಡದಿಂದ) ಬ್ಯಾಂಕ್ ಉಪಾಧ್ಯಕ್ಷ ಡಿ.ಆರ್. ವಿಜಯಸಾರಥಿ, ಶಾಸಕ ಉದಯ್ ಬಿ. ಗರುಡಾಚಾರ್, ಸಚಿವ ಎಚ್.ಕೆ. ಪಾಟೀಲ, ಬ್ಯಾಂಕ್‌ನ ಸಂಸ್ಥಾಪಕ ಅಧ್ಯಕ್ಷ ಕೆ.ಎಂ. ರಂಗಧಾಮ ಶೆಟ್ಟಿ, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

'ನೀಟ್ ಗೊಂದಲ: ಕೇಂದ್ರದ ಆಡಳಿತ ವೈಫಲ್ಯದ ಪರಿಣಾಮ'

ಬಾಗೇಪಲ್ಲಿ: 'ನೀಟ್ ಹಾಗೂ ಪಿಜಿ ಪರೀಕ್ಷೆ ಯನ್ನು ಮುಂದೂಡಿರುವುದು ಕೇಂದ್ರ ಸರ್ಕಾರದ ಆಡಳಿತ ವೈಫಲ್ಯ' ಎಂದು ವೈದ್ಯಕೀಯ ಹಾಗೂ ಆರೋಗ್ಯ ಶಿಕ್ಷಣ ಸಚಿವ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಆರೋಪಿಸಿದರು.

ಭಾನುವಾರ ಶಾಸಕ ಎಸ್.ಎನ್. ಸುಬ್ಬಾರೆಡ್ಡಿ ಹಮ್ಮಿಕೊಂಡಿದ್ದ ಅಭಿನಂದನಾ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು. 'ನೀಟ್, ಪಿಜಿ ಪರೀಕ್ಷೆ ಭಾನುವಾರ ನಿಗದಿಪಡಿಸಲಾಗಿತ್ತು. ಕೇಂದ್ರ ಸರ್ಕಾರ ವಿನಾ ಕಾರಣ ಪರೀಕ್ಷೆ ರದ್ದುಪಡಿಸಿದೆ. ಇದರಿಂದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಗೊಂದಲ ಮೂಡಿಸಿದೆ. ಪರೀಕ್ಷೆ ತಯಾರಿ ಮಾಡಿದ ವರಿಗೆ ಸರ್ಕಾರ ಶಾಕ್ ನೀಡಿದೆ. ಇದು ಕೇಂದ್ರ ಸರ್ಕಾರದ ವೈಫಲ್ಯ' ಎಂದರು.

'ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಫಲಿತಾಂಶದಿಂದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಆಘಾತ ತರಿಸಿದೆ. ವಿದ್ಯಾರ್ಥಿಗಳಿಗೆ ಆಗಿರುವ ಅನ್ಯಾಯವನ್ನು ಕೂಡಲೇ ಕೇಂದ್ರ ಸರ್ಕಾರ ಬಗೆಹರಿಸಬೇಕು' ಎಂದು ಒತ್ತಾಯಿಸಿದರು. ರಕ್ತದಾನವಾದ ಸಾಮಾನ್ಯರಲ್ಲಿ ಇವರು ಮಾತನಾಡಿ, 'ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಬಲಿಷ್ಠ ಇದೆ ಎಂದು ಈ ಲೋಕಸಭಾ ಚುನಾವಣೆಯಲ್ಲಿ ಸಾಬೀತುಪಡಿಸಿದೆ. ಚುನಾವಣೆಯಲ್ಲಿ ನನಗೆ ಹೆಚ್ಚು ಮತಗಳಿಸಲು ಶ್ರಮಿಸಿದ ಕ್ಷೇತ್ರದ ಶಾಸಕ ಎಸ್.ಎನ್.ಸುಬ್ಬಾರೆಡ್ಡಿ, ಕಾಂಗ್ರೆಸ್ ಮುಖಂಡರಿಗೆ, ಕಾರ್ಯಕರ್ತರಿಗೆ ಅಭಾರಿಯಾಗಿದ್ದೇನೆ' ಎಂದರು.

ಶಾಸಕ ಎಸ್.ಎನ್.ಸುಬ್ಬಾರೆಡ್ಡಿ ಮಾತನಾಡಿ, 'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ರಕ್ಷಾರಾಮಯ್ಯರಿಗೆ ಹೆಚ್ಚು ಮತ ನೀಡಲು ಕ್ಷೇತ್ರದ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಶ್ರಮಿಸಿದ್ದಾರೆ. ಕ್ಷೇತ್ರದಲ್ಲಿ ಬೂತ್ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷವನ್ನು ಬಲಿಷ್ಠಗೊಳಿಸುತ್ತೇವೆ. ಸರ್ಕಾರದ ಯೋಜನೆಗಳನ್ನು ಕಟ್ಟಕಡೆಯ ಜನರಿಗೆ ತಲುಪಿಸುತ್ತೇನೆ' ಎಂದರು.

ಸಂಚಾರ ನಿಯಮ ಉಲ್ಲಂಘನೆ ಮೇಲೆ ಪೊಲೀಸರ ಹದ್ದಿನ ಕಣ್ಣು; ಐಟಿಎಂಎಸ್ ಕ್ಯಾಮೆರಾ ಅಳವಡಿಕೆ

ಬೆಂಗಳೂರು–ಮೈಸೂರು ಹೆದ್ದಾರಿ: ಅಪಘಾತ ಇಳಿಕೆ

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ–275ರಲ್ಲಿ ಪೊಲೀಸ್ ಇಲಾಖೆಯ ಕಟ್ಟುನಿಟ್ಟಿನ ಕ್ರಮದಿಂದಾಗಿ ಅಪಘಾತಗಳ ಸಂಖ್ಯೆ ಶೇ 57ರಷ್ಟು ಇಳಿಕೆಯಾಗಿದೆ.

ಪೊಲೀಸ್ ಇಲಾಖೆಯ ಅಂಕಿ–ಅಂಶದ ಪ್ರಕಾರ, 2023ರಲ್ಲಿ ಜನವರಿಯಿಂದ ಮೇವರೆಗೆ 288 ಅಪಘಾತಗಳು ಸಂಭವಿಸಿ, 100 ಮಂದಿ ಮೃತಪಟ್ಟು, 301 ಮಂದಿ ಗಾಯಗೊಂಡಿದ್ದರು. 2024ರಲ್ಲಿ ಜನವರಿಯಿಂದ ಮೇ ಅಂತ್ಯದವರೆಗೆ 125 ಅಪಘಾತಗಳು ಸಂಭವಿಸಿ, 31 ಮಂದಿ ಸಾವಿಗೀಡಾಗಿದ್ದು, 167 ಮಂದಿ ಗಾಯಗೊಂಡಿದ್ದಾರೆ.

ಮರಣ ಪ್ರಮಾಣ ಶೇ 69ರಷ್ಟು ಮತ್ತು ಗಾಯಾಳುಗಳ ಪ್ರಮಾಣ ಶೇ 45ರಷ್ಟು ಇಳಿಕೆಯಾಗಿದೆ. ಬೆಂಗಳೂರು–ಮೈಸೂರು ಹೆದ್ದಾರಿ ನಿರ್ಮಾಣವಾದ ನಂತರ ಪ್ರಯಾಣದ ಅವಧಿ 3 ಗಂಟೆಯಿಂದ 90 ನಿಮಿಷಕ್ಕೆ ಇಳಿಕೆಯಾಗಿದೆ. ಆದರೆ, ಸಂಚಾರ ನಿಯಮ ಉಲ್ಲಂಘನೆ ಮತ್ತು



ಬೆಂಗಳೂರು– ಮೈಸೂರು ಹೆದ್ದಾರಿ

ಅತಿವೇಗದ ಚಾಲನೆಯಿಂದ ಈ ಹೆದ್ದಾರಿಯು ಅಪಘಾತಗಳ ತಾಣವಾಗಿ ಮಾರ್ಪಟ್ಟಿತ್ತು.

ಡೆತ್ ಫ್ರೀ ಝೋನ್: ಬೆಂಗಳೂರು–ಮೈಸೂರು ಹೆದ್ದಾರಿಯನ್ನು 'ಡೆತ್ ಫ್ರೀ ಝೋನ್' ಆಗಿ ಮಾಡಲು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತೆ) ಅಲೋಕ್‌ಕುಮಾರ್ ಅವರು ಪೊಲೀಸ್ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಸುಗಮ ಸಂಚಾರ ಮತ್ತು ಪ್ರಯಾಣಿಕರ ಸುರಕ್ಷತೆಗಾಗಿ ಹಲವು ಕ್ರಮಗಳನ್ನು ಕೈಗೊಳ್ಳಲು ಸಲಹೆ ನೀಡಿದ್ದಾರೆ.

ಐ.ಟಿ.ಎಂ.ಎಸ್ ಅಳವಡಿಕೆ: ಬೆಂಗಳೂರು–ಮೈಸೂರು ಹೆದ್ದಾರಿಯ ಆಯ್ದ 10 ಸ್ಥಳಗಳಲ್ಲಿ ಇಂಟಲಿಜೆಂಟ್ ಟ್ರಾಫಿಕ್ ಮ್ಯಾನೇಜ್‌ಮೆಂಟ್ ಸಿಸ್ಟಂ (ಐ.ಟಿ.ಎಂ.ಎಸ್) ಕ್ಯಾಮೆರಾಗಳನ್ನು ಹಾಗೂ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ. ಐ.ಟಿ.ಎಂ.ಎಸ್ ಕ್ಯಾಮೆರಾಗಳು ಸಂಚಾರ ಉಲ್ಲಂಘನೆಯನ್ನು ಸೂಕ್ಷ್ಮವಾಗಿ ದಾಖಲಿಸುವ ಸರ್ವರ್‌ಗಳನ್ನು ಹೊಂದಿವೆ. ಕಂಟ್ರೋಲ್ ರೂಂನಲ್ಲಿ ನಿರಂತರ ಕಣ್ಗಾವಲು ವ್ಯವಸ್ಥೆ ಮಾಡಲಾಗಿದೆ.

'ಹೆದ್ದಾರಿಯಲ್ಲಿ ದೀಪಗಳ ಅಳವಡಿಕೆ, ಸಂಚಾರ ಸೂಚನಾ ಫಲಕಗಳು, ಸರ್ವಿಸ್ ರಸ್ತೆಯಿಂದ ಹೆದ್ದಾರಿಗೆ ನುಗ್ಗದಂತೆ ತಂತಿಬೇಲಿಯನ್ನು ಹಾಕಿರುವುದು ಸೇರಿದಂತೆ ಹಲವಾರು ಕ್ರಮಗಳನ್ನು ಕೈಗೊಂಡಿದ್ದೇವೆ. ಸಂಚಾರ ನಿಯಮ ಉಲ್ಲಂಘಿಸಿದ ಬಗ್ಗೆ ಸಾರ್ವಜನಿಕರು ಸಾಮಾಜಿಕ ಜಾಲತಾಣದ ಮೂಲಕ ನೀಡಿದ ದೂರು ಆಧರಿಸಿ ಕ್ರಮ ಕೈಗೊಂಡಿದ್ದೇವೆ' ಎನ್ನುತ್ತಾರೆ ಮಂಡ್ಯ ಜಿಲ್ಲೆಯ ಹೆಚ್ಚುವರಿ ಎಸ್ಪಿ ತಿಮ್ಮಯ್ಯ.

ಅಪಘಾತ ವಿವರ–2023

ತಿಂಗಳು	ಸಾವು	ಗಾಯ	ಅಪಘಾತಗಳು
ಜನವರಿ	14	53	52
ಫೆಬ್ರುವರಿ	17	56	55
ಮಾರ್ಚ್	20	58	49
ಏಪ್ರಿಲ್	20	76	61
ಮೇ	29	58	71
ಒಟ್ಟು	100	301	288

ಅಪಘಾತ ವಿವರ–2024

ತಿಂಗಳು	ಸಾವು	ಗಾಯ	ಅಪಘಾತಗಳು
ಜನವರಿ	10	42	27
ಫೆಬ್ರುವರಿ	6	18	14
ಮಾರ್ಚ್	8	33	28
ಏಪ್ರಿಲ್	4	40	31
ಮೇ	3	34	25
ಒಟ್ಟು	31	167	125

ಐಟಿಎಂಎಸ್ ಕ್ಯಾಮೆರಾ ಅಳವಡಿಸಿದ್ದು, ನಿಯಮ ಉಲ್ಲಂಘನೆಗೆ ಸಂಬಂಧಿಸಿ 22 ದಿನಗಳಲ್ಲಿ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ 2,300 ಪ್ರಕರಣ ದಾಖಲಾಗಿವೆ.

ಯತೀಶ್ ಎನ್., ಎಸ್ಪಿ, ಮಂಡ್ಯ

ವಿರುದ್ಧ ದಿಕ್ಕಿನಲ್ಲಿ ಸಂಚಾರ: ಪ್ರಕರಣ ದಾಖಲು

ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಗಣಂಗೂರು ಟೋಲ್ ಪ್ಲಾಜಾದಲ್ಲಿ ಸುಂಕ ಕಟ್ಟುವುದನ್ನು ತಪ್ಪಿಸಲು ಹೆದ್ದಾರಿಯಲ್ಲಿ ಹಿಂತಿರುಗಿ ವಿರುದ್ಧ ದಿಕ್ಕಿನಲ್ಲಿ ಸಂಚರಿಸಿ ಸಂಚಾರ ನಿಯಮ ಉಲ್ಲಂಘಿಸಿದ 3 ಸಾರಿಗೆ ಸಂಸ್ಥೆ ಬಸ್ ಮತ್ತು 17 ಖಾಸಗಿ ವಾಹನಗಳ ಚಾಲಕರ ವಿರುದ್ಧ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿವೆ.

'ರಾಮಾನುಜಾಚಾರ್ಯರು ಜಾತಿ ವ್ಯವಸ್ಥೆ ವಿರೋಧಿಯಾಗಿದ್ದರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವೈದಿಕರ ನಡುವಿನಿಂದಲೇ ಸಿಡಿದೆದ್ದ ರಾಮಾನುಜರು ಜಾತಿ ವ್ಯವಸ್ಥೆ ವಿರೋಧಿಯಾಗಿದ್ದರು. ಮನುಷ್ಯರೆಲ್ಲರೂ ಒಂದೇ ಎಂಬ ನಿಲುವು ತಾಳಿದ್ದರು' ಎಂದು ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ತಿಳಿಸಿದರು.

ಸತ್ತಿಗೆ ಪ್ರಕಾಶನ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾಯಣ್ಣಸ್ವಾಮಿ ಕಿರಂಗೂರು ಅವರ 'ಕೊಪ್ಪದ ಕಾಂತಿ', 'ಕಾಂಬೊಲ', 'ತಲಪರಿಗೆಯ ತಾರಕ ಕೆ.ಟಿ. ರಾಮಸ್ವಾಮಿ' ಹಾಗೂ 'ರೋಚನಿ' ಪುಸ್ತಕಗಳನ್ನು ಬಿಡುಗಡೆ ಮಾಡಿ, ಮಾತನಾಡಿದರು.

'12ನೇ ಶತಮಾನದಲ್ಲಿ ಶರಣ ಚಳವಳಿಯ ಮೂಲಕ ಸಾಮಾಜಿಕ ಕ್ರಾಂತಿ ನಡೆಯಿತು. ಆದರೆ, ಅದಕ್ಕೂ ಮೊದಲು ದಕ್ಷಿಣ ಕರ್ನಾಟಕದಲ್ಲಿ ರಾಮಾನುಜಾಚಾರ್ಯರಿಂದ ಸಾಮಾಜಿಕ ಕ್ರಾಂತಿ ನಡೆಯಿತು. 11ನೇ ಶತಮಾನದಲ್ಲಿ ನಡೆದ ಅವರ ಚಳವಳಿ ಇತಿಹಾಸದ ಪುಟಗಳಲ್ಲಿ ಒಂದು ದಾಖಲೆಯಾಗಿದೆ. ಅವರು ಹೊಲೆಮಾದಿಗರಿಗೂ ದೇವಸ್ಥಾನ ಪ್ರವೇಶಕ್ಕೆ ಅವಕಾಶ ಕಲ್ಪಿಸಿದರು. ದಲಿತರಿಗೆ ದೀಕ್ಷೆ ನೀಡಿ, ಬ್ರಾಹ್ಮಣ ಜಾತಿಯೊಳಗೆ ಬರಮಾಡಿಕೊಂಡರು. ಮಾಂಸಹಾರವನ್ನು ತ್ಯಜಿಸಲು ಇಚ್ಛಿಸದವರು ದಲಿತರಲ್ಲಿ ದಾಸರಾಗಿಯೇ ಉಳಿದರು. ಈಗಲೂ ಅವರು ಹಳ್ಳಿಗಳಲ್ಲಿ ಸಿಗುತ್ತಾರೆ. ಯಾವುದು ಗೌಪ್ಯವಾಗಿತ್ತೋ ಅಂತಹ ಮಂತ್ರವನ್ನು ಬಹಿರಂಗವಾಗಿ ಎಲ್ಲರಿಗೂ ಬೋಧಿಸಿದರು. ಅದೊಂದು ಬಹುದೊಡ್ಡ ಕ್ರಾಂತಿ' ಎಂದರು.

ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ, 'ಕೆಲವು ಸಾಕ್ಷಿಗಳಿಂದ ಕಥನ ಚರಿತ್ರೆ ಕಟ್ಟುವುದು ಸುಲಭವಲ್ಲ. ಸಿಕ್ಕಿರುವ ಕೆಲವು ಆಕರಗಳಿಂದ ಮಹಾತ್ಮ ಎಂಬಾರ್ ಜೀಯರ್ ಅವರ 'ಕೊಪ್ಪದ ಕಾಂತಿ' ಕೃತಿ ರಚಿಸಿದ್ದಾರೆ. ಇದು ಸವಾಲಿನ ಕೆಲಸ. ವಿಶ್ವವಿದ್ಯಾಲಯಗಳು ಮಾಡುವ ಕೆಲಸವನ್ನು ಮಾಯಣ್ಣಸ್ವಾಮಿಯವರು ಮಾಡಿದ್ದಾರೆ' ಎಂದು ಹೇಳಿದರು.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಪ್ರಧಾನ ವ್ಯವಸ್ಥಾಪಕ ಪ್ರದೀಪ್ ಕುಮಾರ್ ಸೇಠಿಯ ಕಾರ್ಯಕ್ರಮ ಉದ್ಘಾಟಿಸಿದರು. ಕವಿ ಸುಬ್ಬು ಹೊಲೆಯಾರ್, ನಿವೃತ್ತ ಉಪನ್ಯಾಸಕ ಗೋಪಾಲ ಅಯ್ಯಂಗಾರ್, ಉಪನ್ಯಾಸಕ ಹುಲಿಕುಂಟೆ ಮೂರ್ತಿ, ಲೇಖಕ ಮಾಯಣ್ಣಸ್ವಾಮಿ ಕಿರಂಗೂರು ಉಪಸ್ಥಿತರಿದ್ದರು.



ಶಿವರಾಮ ಕಾರಂತ ವೇದಿಕೆ ಬೆಂಗಳೂರಿನ ಆರ್ ಟಿ ನಗರದ ವಿನಾಯಕ ದೇವಸ್ಥಾನದ ಸಭಾಂಗಣದಲ್ಲಿ ಆಯೋಜಿಸಿದ ಪ್ರೊ.ಎಲ್‌.ಎಸ್‌. ಶೇಷಗಿರಿ ರಾವ್ ಶತಮಾನೋತ್ಸವ ಸಂಭ್ರಮದ ಪ್ರಯುಕ್ತ ಉಪನ್ಯಾಸ ಕಾರ್ಯಕ್ರಮದಲ್ಲಿ (ಎಡದಿಂದ) ಶಿವರಾಮ ಕಾರಂತ ವೇದಿಕೆ ಅಧ್ಯಕ್ಷೆ ದೀಪಾ ಫಡ್ಕೆ, ವಿಮರ್ಶಕ ಎಸ್‌.ಆರ್‌.ವಿಜಯಶಂಕರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಆದಿಚುಂಚನಗಿರಿ ವಿಶ್ವವಿದ್ಯಾಲಯ ಸಹ ಪ್ರಾಧ್ಯಾಪಕ ಟಿ.ಎನ್‌.ವಾಸುದೇವಮೂರ್ತಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ/ ಕಿಶೋರ್ ಕುಮಾರ್ ಬೋಳಾರ್

'ಶತಮಾನ ಕಂಡ ಶಾಲೆಗಳ ಪುನರುಜ್ಜೀವನಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಶತಮಾನ ಕಂಡ ಸರ್ಕಾರಿ ಶಾಲೆಗಳು ಸುಮಾರು 150 ಇವೆ. ಈ ಶಾಲೆಗಳಿಗೆ ಸರ್ಕಾರದ ಪ್ರತಿನಿಧಿಗಳು ಭೇಟಿ ನೀಡಿ, ಆ ಶಾಲೆಗಳಿಗೆ ಅಗತ್ಯವಿರುವ ಸೌಲಭ್ಯಗಳನ್ನು ಪೂರೈಸಬೇಕು' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಆಗ್ರಹಿಸಿದರು.

ಆರ್.ಟಿ ನಗರದ ಶಿವರಾಮ ಕಾರಂತ ವೇದಿಕೆ ಮತ್ತು ವಿನಾಯಕ ದೇವಸ್ಥಾನ ಸಮಿತಿ ಭಾನುವಾರ ಹಮ್ಮಿಕೊಂಡಿದ್ದ 'ಎಲ್.ಎಸ್. ಶೇಷಗಿರಿ ರಾವ್ ಶತಮಾನೋತ್ಸವ ಸಂಭ್ರಮ' ಕಾರ್ಯಕ್ರಮದಲ್ಲಿ ಅವರು ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

'ಆ ಶಾಲೆಗಳಲ್ಲಿ ಶಿಕ್ಷಕರ ಕೊರತೆ ಇದ್ದರೆ ಅದನ್ನು ನೀಗಿಸಬೇಕು. ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಅವಶ್ಯಕತೆ ಇರುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಅನುದಾನ ಒದಗಿಸಬೇಕು' ಎಂದು ಸಲಹೆ ನೀಡಿದರು.

ಕರ್ನಾಟಕದಲ್ಲಿ ಯಾವುದೇ ಊರಿನ ಹೆಸರು ವ್ಯಕ್ತಿಯ ಹೆಸರಾಗಿರಲಿಲ್ಲ. ಪ್ರಸಿದ್ಧ ರಾಜರ ಹೆಸರನ್ನು ಕೂಡ ಯಾವುದೇ ಊರಿಗೆ ಇಟ್ಟಿರಲಿಲ್ಲ. ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ವ್ಯಕ್ತಿಯ ಹೆಸರಿಡುವ ಕೆಟ್ಟ ಸಂಪ್ರದಾಯ ಆರಂಭವಾಯಿತು. ಅದಕ್ಕಾಗಿ ಊರಿನ ಹಳೇ ಹೆಸರಿನ ಫಲಕವನ್ನೇ ಅಳವಡಿಸುವ ಅಭಿಯಾನವನ್ನು ಪ್ರಾಧಿಕಾರದಿಂದ ನಡೆಸುವ ಉದ್ದೇಶವಿದೆ ಎಂದು ಹೇಳಿದರು.

'ತಮಿಳು ಕಲಿಸುವ 250ಕ್ಕೂ ಅಧಿಕ ವೆಬ್‌ಸೈಟ್‌ಗಳಿವೆ. ಹಳೇ ಭಾಷೆ ಹೀಬ್ರೂ ಭಾಷೆ ಕಲಿಕೆಗಾಗಿಯೂ ವೆಬ್‌ಸೈಟ್ ಇದೆ. ಆದರೆ, ಕನ್ನಡ ಕಲಿಸುವ ವೆಬ್‌ಸೈಟ್‌ಗಳಿಲ್ಲ. ಸುಲಭದಲ್ಲಿ ಕನ್ನಡ ಕಲಿಸುವ ವೆಬ್‌ಸೈಟ್‌ಗಳನ್ನು ಅಭಿವೃದ್ಧಿಪಡಿಸಬೇಕು' ಎಂದರು.

'ನಾನು ಜೆಎನ್‌ಯುಗೆ ಹೋದಾಗ ಎಲ್.ಎಸ್. ಶೇಷಗಿರಿರಾವ್ ಅವರು ಪತ್ರ ಬರೆದಿದ್ದರು. ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸುವ ಕೆಲಸದ ಜೊತೆಗೆ ಕನ್ನಡದ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದಿಸಿ ಎಂದು ಆ ಪತ್ರದಲ್ಲಿ ಸೂಚಿಸಿದ್ದರು. ಇದರಿಂದ ಪ್ರೇರಣೆ ಪಡೆದು ಕವಿರಾಜ ಮಾರ್ಗ, ರನ್ನನ ಗದಾಯುದ್ಧ, ಶಿವಕೋಟಿ ಆಚಾರ್ಯರ ವಡ್ಡಾರಾಧನೆ ಮುಂತಾದ ಕೃತಿಗಳನ್ನು ಇಂಗ್ಲಿಷ್‌ಗೆ ಅನುವಾದ ಮಾಡಲು ಕ್ರಮ ಕೈಗೊಂಡೆ' ಎಂದು ಹೇಳಿದರು.

ಆದಿಚುಂಚನಗಿರಿ ವಿವಿಯ ಸಹ ಪ್ರಾಧ್ಯಾಪಕ ಟಿ.ಎನ್. ವಾಸುದೇವಮೂರ್ತಿ, ವಿಮರ್ಶಕ ಎಸ್. ಆರ್. ವಿಜಯಶಂಕರ್, ಶಿವರಾಮ ಕಾರಂತ ವೇದಿಕೆಯ ದೀಪಾ ಫಡ್ಕೆ ಭಾಗವಹಿಸಿದ್ದರು.

ಕಾಂಗ್ರೆಸ್ ದೇಶದ ಕ್ಷಮೆ ಕೇಳಲಿ: ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶಕ್ಕೆ ತುರ್ತುಪರಿಸ್ಥಿತಿ ಹೇರಿದ್ದ ಕಾಂಗ್ರೆಸ್ ಪಕ್ಷವು ತಾನು ಮಾಡಿದ ತಪ್ಪಿಗೆ 49 ವರ್ಷಗಳಾದರೂ ಕ್ಷಮೆ ಕೇಳಿಲ್ಲ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಹೇಳಿದರು.

ಭಾನುವಾರ ಸುದ್ದಿಗಾರರ ಜತೆ ಮಾತನಾಡಿ, 'ತುರ್ತುಪರಿಸ್ಥಿತಿ ಹೇರುವ ಇಂಥ ಪರಿಸ್ಥಿತಿ ಯಾವತ್ತೂ ಬರಬಾರದು. ಆ ಕರಾಳ ಅಧ್ಯಾಯವನ್ನು ನೆನಪಿಸಿಕೊಳ್ಳುವ ಅವಶ್ಯಕತೆ ಇದೆ. ಕಾಂಗ್ರೆಸ್‌ಗೆ ತಾನು ಮಾಡಿದ್ದು ತಪ್ಪು ಎಂದು ಅನಿಸಿದರೆ ಸಾರ್ವಜನಿಕವಾಗಿ ಕ್ಷಮೆ ಯಾಚಿಸಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್ ಪಕ್ಷದ ಡಿಎನ್‌ಎಯಲ್ಲೇ ವ್ಯಕ್ತಿಗತ ಸ್ವಾರ್ಥಕ್ಕಾಗಿ ಏನನ್ನು ಬೇಕಾದರೂ ಮಾಡುವ ಮನಸ್ಥಿತಿ ಇದೆ. ಈ ಮನಸ್ಥಿತಿ ಪ್ರಜಾಪ್ರಭುತ್ವಕ್ಕೂ ಅಪಾಯಕಾರಿ. ಕಾಂಗ್ರೆಸ್ ಪಕ್ಷ ಇಂದಿರಾ ಗಾಂಧಿಯವರ ನೇತೃತ್ವದಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಪ್ರಜಾಪ್ರಭುತ್ವದ ಕತ್ತು ಹಿಸುಕುವ ಕೆಲಸ ಮಾಡಿತ್ತು. ಅದೊಂದು ಕರಾಳ ದಿನ ಎಂದರು.

'ಆಗ ಸಿದ್ದರಾಮಯ್ಯ ಅವರು ಕಾಂಗ್ರೆಸ್ ಜೊತೆಗಿದ್ದರೋ ಇಲ್ಲವೋ ಗೊತ್ತಿಲ್ಲ. ಆದರೆ, ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಜತೆಗಿದ್ದರು. ಇಂದಿರಾಗಾಂಧಿ ಅವರು ಡಾ. ಅಂಬೇಡ್ಕರ್ ಕೊಟ್ಟ ಸಂವಿಧಾನವನ್ನು ದಮನ ಮಾಡಿದ್ದರು ಎಂಬುದು ಖರ್ಗೆಯವರಿಗೆ ಅರ್ಥವಾಗಬೇಕಿತ್ತು' ಎಂದರು.

ಹುಸಿ ಬಾಂಬ್ ಬೆದರಿಕೆ: ವ್ಯಕ್ತಿ ಬಂಧನ

ಚೆನ್ನೈ (ಪಿಟಿಐ): ಚೆನ್ನೈ–ಮುಂಬೈ ಮಾರ್ಗದ ಇಂಡಿಗೊ ವಿಮಾನದಲ್ಲಿ ಬಾಂಬ್ ಇಟ್ಟಿರುವುದಾಗಿ ಇತ್ತೀಚೆಗೆ ಹುಸಿ ಬೆದರಿಕೆ ಸಂದೇಶ ಕಳುಹಿಸಿದ್ದ ತಮಿಳುನಾಡಿನ ತಂಜಾವೂರು ಜಿಲ್ಲೆಯ 27 ವರ್ಷದ ಯುವಕನನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿ ವಿ. ಪ್ರಸನ್ನ ಎಂಬಾತನನ್ನು ಸದ್ಯ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಜೂನ್ 18ರಂದು ಗ್ರಾಹಕರ ಸೇವಾ ಕೇಂದ್ರದ ಜೊತೆ ಸಂದೇಶದ ಮೂಲಕ ವಿಚಾರ ವಿನಿಮಯ ಮಾಡಿಕೊಳ್ಳುವಾಗ ಆರೋಪಿಯು, 'ಚೆನ್ನೈ–ಮುಂಬೈ ಮಾರ್ಗದ ಇಂಡಿಗೊ ವಿಮಾನದಲ್ಲಿ ಬಾಂಬ್ ಇರಿಸಲಾಗಿದೆ' ಎಂದು ಹೇಳಿದ್ದ. ಈ ಕುರಿತು ಪ್ರಕರಣ ದಾಖಲಾಗಿತ್ತು.

'ಕಲ್ಪನೆಯ ಅಕ್ಷಯಪಾತ್ರೆ ಎಚ್‌ಎಸ್‌ವಿ'

ಎಚ್ಚೆಸ್ವಿ ಕಾವ್ಯ ಸಂಗಮ ಕಾರ್ಯಕ್ರಮದಲ್ಲಿ ಬಿ.ಆರ್‌.ಲಕ್ಷ್ಮಣರಾವ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್ಚೆಸ್ವಿ ಕಲ್ಪನೆಯ ಅಕ್ಷಯಪಾತ್ರೆ. ಎಂದಿಗೂ ಬರಿದಾಗದ ಕಲ್ಪನಾಲೋಕ ಅವರದ್ದು' ಎಂದು ಕವಿ ಬಿ.ಆರ್. ಲಕ್ಷ್ಮಣರಾವ್ ಬಣ್ಣಿಸಿದರು.

ಉಪಾಸನಾ ಟ್ರಸ್ಟ್ ಮತ್ತು ಎಚ್ಚೆಸ್ವಿ ವಿದ್ಯಾರ್ಥಿ ಬಳಗ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿ ಅವರ 80ರ ಸಂಭ್ರಮ 'ಎಚ್ಚೆಸ್ವಿ' ಕಾವ್ಯ ಸಂಭ್ರಮ–2024 ಕಾರ್ಯಕ್ರಮದಲ್ಲಿ ಗೀತಗುಚ್ಛ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.

'ಎಲ್ಲ ಕವಿಗಳು ಕಲ್ಪನೆಯ ಮೇಲೆಯೇ ಸಾಹಿತ್ಯ ರಚನೆ ಮಾಡುತ್ತಾರೆ. ಈ ಕಲ್ಪನೆಗೆ ಮಿತಿ ಇರುತ್ತದೆ. ಹಾಗಾಗಿ ಒಂದು ಹಂತ ದಾಟಿದಾಗ ಕಲ್ಪನೆಯ ಭಂಡಾರ ಬರಿದಾಗುತ್ತದೆ. ಆದರೆ, ವೆಂಕಟೇಶಮೂರ್ತಿ ಅವರ ಕಲ್ಪನೆಯ ಭಂಡಾರ 40–50 ವರ್ಷಗಳ ಹಿಂದೆ ಇದ್ದಷ್ಟೇ ಈಗಲೂ ಇದೆ' ಎಂದು ವಿವರಿಸಿದರು.

''ಗೋಕುಲ', 'ಬೃಂದಾವನ', 'ಕೃಷ್ಣ', 'ರಾಧೆ', 'ಗೋಪಿಕಾ ಸ್ತ್ರೀಯರು' ಹೀಗೆ ಎಚ್ಚೆಸ್ವಿ ವಾಸ್ತವದಿಂದ ಹೊರ ಹೋಗಲು ಇಟ್ಟುಕೊಂಡಿರುವ ಪಾತ್ರಧಾರಿಗಳು. ಸಂದರ್ಭ ಬಂದಾಗ ಅವರೇ ಮಕ್ಕಳಾಗುತ್ತಾರೆ. ಕೆಲವೊಂದು ಸಾರಿ ಹರೆಯದ ಯುವಕ-ಯುವತಿಯರಾಗುತ್ತಾರೆ. ಅಲ್ಲಿ ತುಂಟತನವೂ ಇದೆ, ಜಾಣ್ಮೆಯು ಇದೆ. ಪ್ರೀತಿ-ಪ್ರೇಮ, ವಿರಹ, ವೇದನೆ ಎಲ್ಲವೂ ಇದೆ. ಇವೆಲ್ಲವನ್ನು ಒಳಗೊಂಡ ಅದ್ಭುತವಾದ ಭಾವಗೀತೆಗಳನ್ನು ನೀಡಿದ ಕೀರ್ತಿ ಎಚ್ಚೆಸ್ವಿಗೆ ಸಲ್ಲುತ್ತದೆ. ಅಂತಹ ಭಾವಗೀತೆಗಳ ಗುಚ್ಛ 'ಚಂದ್ರಬನ' ಎಂಬ ಹೆಸರಿನಲ್ಲಿ ಬಿಡುಗಡೆಯಾಗಿದೆ' ಎಂದು ತಿಳಿಸಿದರು.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ವೆಂಕಟಾಚಲ ಹೆಗಡೆ ಅವರು 'ಎಚ್ಚೆಸ್ವಿ ಕಾವ್ಯ ಸಂಭ್ರಮ–2024' ಕೃತಿ ಬಿಡುಗಡೆ ಮಾಡಿದರು. ಕವಿ ಎಚ್.ಎಸ್. ವೆಂಕಟೇಶಮೂರ್ತಿ, ವಿಮರ್ಶಕ ಎಚ್. ಎಸ್. ಸತ್ಯನಾರಾಯಣ, ಕವಿ ಶ್ರೀನಿವಾಸಮೂರ್ತಿ, ಸುಂದರ ಪ್ರಕಾಶನದ ಇಂದಿರಾ ಸುಂದರ್, ವಿಕ್ರಂ ಪ್ರಕಾಶನದ ಹರಿಪ್ರಸಾದ್, ಪ್ರಿಸಂ ಬುಕ್ಸ್‌ನ ಪ್ರಾಣೇಶ್ ಸಿರಿವರ, ನಟ ಶ್ರೀನಿವಾಸ ಪ್ರಭು, ಉಪಾಸನಾ ಟ್ರಸ್ಟ್‌ನ ಉಪಾಸನಾ ಮೋಹನ್ ಭಾಗವಹಿಸಿದ್ದರು.



ನಗರದಲ್ಲಿ ಭಾನುವಾರ ಉಪಾಸನಾ ಟ್ರಸ್ಟ್ ಮತ್ತು ಎಚ್‌ಎಸ್ವಿ ವಿದ್ಯಾರ್ಥಿ ಬಳಗ ಜಂಟಿಯಾಗಿ ಆಯೋಜಿಸಿದ್ದ ಡಾ. ಎಚ್‌.ಎಸ್ ವೆಂಕಟೇಶಮೂರ್ತಿ ಅವರ 80ರ ಕಾವ್ಯ ಸಂಭ್ರಮಕ್ಕೆ ಎಚ್‌ಎಸ್ವಿ ಕಾವ್ಯ ಸಂಭ್ರಮ 2024 ಕಾರ್ಯಕ್ರಮದಲ್ಲಿ ಕವಿ ಬಿ.ಆರ್ ಲಕ್ಷ್ಮಣ್ ರಾವ್ (ಮಧ್ಯದವರು) 'ಗೀತಾ ಗುಚ್ಛ' ಲೋಕಾರ್ಪಣೆಗೊಳಿಸಿದರು. (ನಿಂತವರು ಎಡದಿಂದ) ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಡಾ. ವೆಂಕಟಾಚಲ ಹೆಗಡೆ, ಸುಂದರ ಪ್ರಕಾಶನದ ಇಂದಿರಾ ಸುಂದರ್, ಗಾಯಕ ಉಪಾಸನಾ ಮೋಹನ್, ಎಚ್‌.ಎಸ್ ವೆಂಕಟೇಶಮೂರ್ತಿ, ಕವಿ ಡಾ. ಕಾ. ವೆಂ ಶ್ರೀನಿವಾಸಮೂರ್ತಿ ಮತ್ತು ವಿಕ್ರಂ ಪ್ರಕಾಶನದ ಹರಿಪ್ರಸಾದ್ ಇದ್ದರು —ಪ್ರಜಾವಾಣಿ ಚಿತ್ರ

'ಮೀಸಲಾತಿ ಕೊಟ್ಟಿದ್ದಕ್ಕೆ ಮುಸ್ಲಿಮರಿಗೆ ಕೃತಜ್ಞತೆ ಬೇಡವೇ?'

ಉಪಚುನಾವಣೆ: ಒಮ್ಮತದ ಅಭ್ಯರ್ಥಿ ಘೋಷಣೆ–ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): 'ಚನ್ನಪಟ್ಟಣದಲ್ಲಿ ನಾನು ಮತ್ತು ಸಿ.ಪಿ. ಯೋಗೇಶ್ವರ್ ಮುಂಚಿನಿಂದಲು ಹೊಡೆದಾಡಿಕೊಂಡೇ ಬಂದಿದ್ದೆವು. ಬದಲಾದ ಪರಿಸ್ಥಿತಿಯಲ್ಲಿ ನಾವೀಗ ಅಣ್ಣ–ತಮ್ಮಂದಿರಂತೆ ಇದ್ದೇವೆ. ಉಪ ಚುನಾವಣೆಗೆ ಸಂಬಂಧಿಸಿದಂತೆ ಎರಡೂ ಪಕ್ಷದವರು ಸೇರಿ ಒಮ್ಮತದ ಅಭ್ಯರ್ಥಿ ಘೋಷಿಸುತ್ತೇವೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಚುನಾವಣೆ ಇನ್ನೂ ಘೋಷಣೆಯಾಗಿಲ್ಲ. ಅಭ್ಯರ್ಥಿ ಕುರಿತು ನಿಧಾನವಾಗಿ ಹೇಳುವೆ. ಅದಕ್ಕೂ ಮುಂಚೆ, 20 ವರ್ಷಗಳಿಂದ ಸಂಘರ್ಷ ಮಾಡಿಕೊಂಡೇ ಬಂದಿರುವ ಕ್ಷೇತ್ರದ ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ನಡುವೆ ದೇಶದ ಹಿತದೃಷ್ಟಿಯಿಂದ ಹೊಂದಾಣಿಕೆ ಆಗಬೇಕಿದೆ' ಎಂದರು.

'ನನಗೆ ಕೇಂದ್ರ ಸರ್ಕಾರದಲ್ಲಿ ಸಿಕ್ಕಿರುವ ಅವಕಾಶ ಕಂಡು, ನನ್ನನ್ನು ಮುಗಿಸಲೇಬೇಕು ಎಂದು ಹೊರಟ್ಟಿದ್ದಾರೆ. ಟಿ.ವಿ. ಹಾಕಿದರೆ ಅದು ಗೊತ್ತಾಗುತ್ತದೆ. ಲಕ್ಷಾಂತರ ಕಾರ್ಯಕರ್ತರಿರುವ ಜೆಡಿಎಸ್ ಮುಗಿಸಲು ಯಾರಿಂದಲೂ ಸಾಧ್ಯವಿಲ್ಲ. ಎಲ್ಲವನ್ನೂ ದೇವರು ನೋಡಿಕೊಳ್ಳುತ್ತಾನೆ. ನಾನು ಹಾಸನದಲ್ಲಿ ಹುಟ್ಟಿದರೂ, ನನಗೆ ರಾಜಕೀಯ ಜನ್ಮದ ಕೊಟ್ಟ ರಾಮನಗರ ಜಿಲ್ಲೆಯ ಜನ, ನನ್ನ ಪಾಲಿನ ದೇವರು' ಎಂದು ಹೇಳಿದರು.

ಕೃತಜ್ಞತೆ ಬೇಡವೆ?: 'ನಾನು ರೇಷ್ಮೆ ಮಾರುಕಟ್ಟೆ ಮಾಡಲು ಹೋದಾಗ ರಾಮನಗರದಲ್ಲಿ ನನ್ನ ವಿರುದ್ಧ ದೊಡ್ಡ ಪ್ರತಿಭಟನೆ ಮಾಡಿಸಿ, ಮುಸ್ಲಿಮರ ಮತಗಳನ್ನು ಒಡೆದರು. ಮುಸ್ಲಿಮರ ಮೇಲೆ ನಾನು ಮತ್ತು ದೇವೇಗೌಡರು ತುಂಬಾ ಗೌರವ ಇಟ್ಟುಕೊಂಡಿದ್ದೇವೆ. ಆ ಸಮುದಾಯಕ್ಕೆ ಮೀಸಲಾತಿ ಕೊಟ್ಟು, ನೆರವು ನೀಡಿದ ನಾವು ಎಂದಿಗೂ ಅವರನ್ನು ಕೈ ಬಿಟ್ಟಿರಲಿಲ್ಲ. ಇಷ್ಟೆಲ್ಲಾ ಮಾಡಿದ ನಮ್ಮ ಬಗ್ಗೆ ಕೃತಜ್ಞತೆ ಬೇಡವೆ?' ಎಂದು ರಾಮನಗರದಲ್ಲಿ ಚುನಾವಣೆಯಲ್ಲಿ ತಮ್ಮ ಪುತ್ರನಿಗಾದ ಸೋಲಿಗೆ ಸಂಬಂಧಿಸಿದಂತೆ, ಮುಸ್ಲಿಮರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

'ಮುಗಿಸಲು ಯತ್ನಿಸಿದವರು ನಿದ್ದೆಗೆಟ್ಟಿದ್ದಾರೆ'

'ನಮ್ಮ ಮತ್ತು ಜೆಡಿಎಸ್ ರಾಜಕೀಯ ಮುಗಿಯಿತು ಅಂದುಕೊಂಡಿದ್ದವರು ಇಂದು ನಿದ್ದೆಗೆಟ್ಟಿದ್ದಾರೆ. ನನ್ನನ್ನು ಯಾವ ರೀತಿ ಮುಗಿಸಬೇಕು ಎಂದು ಎರಡು ತಿಂಗಳಿಂದ ಏನೇನೊ ಪ್ರಯತ್ನ ಮಾಡುತ್ತಿದ್ದಾರೆ. ಇಂತಹ ನೂರು ಜನ ಹುಟ್ಟಿ ಬಂದರೂ, ನನ್ನನ್ನು ಏನೂ ಮಾಡಲು ಸಾಧ್ಯವಿಲ್ಲ. ಇಂತಹವರಿಗೆ ಹೆದರಿಕೊಂಡು ಹೋಗದೆ, ಎದುರಿಸುವ ಶಕ್ತಿಯನ್ನು ಜನ ಕೊಟ್ಟಿದ್ದಾರೆ' ಎಂದು ಕುಮಾರಸ್ವಾಮಿ ಹೇಳಿದರು.

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

ಬೀಡಾಡಿ ದನಗಳ ಹಾವಳಿ



ರಸ್ತೆ ಮಧ್ಯೆ ಬೀಡಾಡಿ ದನಗಳು

ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗೂಡ್ಸ್ ಶೆಡ್ ರಸ್ತೆ, ಕಾಟನ್ ಪೇಟೆ ಮುಖ್ಯ ರಸ್ತೆ, ನಗರ್ತ ಪೇಟೆ ರಸ್ತೆ ಮತ್ತು ಬ್ರಿಯಾಂಡ್ ಸ್ಕೇರ್ ಮುಖ್ಯ ರಸ್ತೆಗಳಲ್ಲಿ ಬೀಡಾಡಿ ದನಗಳ ಹಾವಳಿ ವಿಪರೀತವಾಗಿದೆ. ಇದರಿಂದ ಆಗಾಗ ಟ್ರಾಫಿಕ್ ಜಾಮ್ ಆಗಿ ಸಾರ್ವಜನಿಕರು ಮತ್ತು ಶಾಲಾ ಮಕ್ಕಳು ಕಿರಿಕಿರಿ ಅನುಭವಿಸುವಂತಾಗಿದೆ. ಈ ಪ್ರದೇಶಗಳು ದಟ್ಟಣೆಯಿಂದ ಕೂಡಿದ್ದು ಈಗ ದನಗಳ ಹಾವಳಿಯೂ ಸೇರಿಕೊಂಡು, ಇನ್ನೂ ಕಿರಿಕಿರಿ ಹೆಚ್ಚಾಗುತ್ತಿದೆ. ಈ ಬಗ್ಗೆ ಪಾಲಿಕೆ ಅಧಿಕಾರಿಗಳಿಗೆ ಸಾಕಷ್ಟು ಸಲ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಸಂಬಂಧಪಟ್ಟವರು ಇತ್ತ ಗಮನ ಹರಿಸಬೇಕು.

ಎಸ್ ಪ್ರಭಾಕರ್, ಚಾಮರಾಜಪೇಟೆ

ಸಿಮೆಂಟ್ ಸ್ಲ್ಯಾಬ್‌ಗಳನ್ನು ಹಾಕಿಸಿ



ಸಿಮೆಂಟ್ ಸ್ಲ್ಯಾಬ್ ಒಡೆದಿರುವುದು


ಟಿ.ದಾಸರಹಳ್ಳಿ ವ್ಯಾಪ್ತಿಯ ಬಾಗಲಗುಂಟೆ ವಾರ್ಡ್ ನಂ.14 ರ ಸಿಡೇದಹಳ್ಳಿ, ಸಿದ್ದೇಶ್ವರ ಬಡಾವಣೆಯ ಆಂಜನೇಯಸ್ವಾಮಿ ದೇವಸ್ಥಾನದ ಎದುರಿನ ರಸ್ತೆಯ ಕಲ್ವರ್ಟ್(ಸೇತುವೆ) ಮೇಲೆ ಹಾಕಿರುವ ಒಂದು ಭಾಗದ ಕಲ್ಲು ಒಡೆದಿದೆ. ಮಕ್ಕಳು, ಹಿರಿಯ ನಾಗರಿಕರು ಈ ರಸ್ತೆಯಲ್ಲಿ ಓಡಾಡುವುದು ಕಷ್ಟವಾಗಿದೆ. ರಾತ್ರಿ ವೇಳೆ ಸಂಚರಿಸುವುದಕ್ಕೆ ಭಯವಾಗುತ್ತದೆ. ಕಲ್ವರ್ಟ್‌ನ ಉಳಿದ ಭಾಗದಲ್ಲಿರುವ ಕಲ್ಲುಗಳು ಗಟ್ಟಿಯಾಗಿಲ್ಲ. ಈ ಕುರಿತು ಬಿಬಿಎಂಪಿಗೆ ಮಾಹಿತಿ ನೀಡಿದ್ದರೂ ಸಮಸ್ಯೆ ಪರಿಹಾರವಾಗಿಲ್ಲ. ಸಂಬಂಧಪಟ್ಟ ಇಲಾಖೆಯವರು ತುರ್ತಾಗಿ, ಕಲ್ವರ್ಟ್ ಮೇಲಿನ ಕಲ್ಲುಗಳನ್ನು ತೆಗೆದು ಸಿಮೆಂಟ್ ಸ್ಲ್ಯಾಬ್‌ಗಳನ್ನು ಹಾಕಿ ಸರಿಪಡಿಸಬೇಕು.

ರಾಮಣ್ಣ, ಸಿದ್ದೇಶ್ವರ ಲೇಔಟ್

'ರಸ್ತೆಯಲ್ಲಿ ಕಸದ ರಾಶಿ'

ರಾಷ್ಟ್ರೀಯ ಹೆದ್ದಾರಿ 4ಕ್ಕೆ ಹೊಂದಿಕೊಂಡಿರುವ ಚಿಕ್ಕಬಿದರಕಲ್ಲುವಿನ ಶ್ರೀರಾಮ ಪಬ್ಲಿಕ್ ಶಾಲೆಯ ಎದುರಿಗೆ ಹಾದು ಹೋಗುವ ರಸ್ತೆಯಲ್ಲಿ ರಾಶಿಗಟ್ಟಲೇ ಕಸ ಹಾಕಲಾಗಿದೆ. ಇದರಿಂದ ಶಾಲೆಗೆ ಹೋಗುವ ಮಕ್ಕಳಿಗೆ ಮತ್ತು ಕೆಲಸಕ್ಕೆ ಹೋಗುವ ಮಹಿಳೆಯರಿಗೆ ಬಹಳ ಸಮಸ್ಯೆಯಾಗಿದೆ. ಈ ಕಿರಿದಾದ ರಸ್ತೆಯಲ್ಲಿ ದಿನನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ, ನಾಗರಿಕರು ಆತಂಕದಿಂದ ಓಡಾಡುವ ಸ್ಥಿತಿ ಎದುರಾಗಿದೆ. ಸಂಬಂಧಪಟ್ಟವರು ಇತ್ತ ಗಮನ ಹರಿಸಿ ಕಸ ತೆರವುಗೊಳಿಸಲಿ.

ಅಭಿಷೇಕ ಎಸ್. ಎಚ್, ವಿನಾಯಕ ನಗರ




ರೆಡ್ಡಿಕಟ್ಟೆಗೆ ಹೋಗುವ ರಸ್ತೆ ಬದಿಯಲ್ಲಿ ಕಸದ ರಾಶಿ

ಮರದ ಕೊಂಬೆಗಳನ್ನು ತೆರವುಗೊಳಿಸಿ

ಹತ್ತು ದಿನಗಳ ಹಿಂದೆ ಸುರಿದ ಭಾರಿ ಬಿರುಗಾಳಿ, ಮಳೆಗೆ ಕೆಂಪೇಗೌಡ ರಸ್ತೆಯ ಚೇಂಬರ್ ಆಫ್ ಕಾಮರ್ಸ್ ಮತ್ತು ಪ್ರಭಾತ್ ಕಾಂಪ್ಲೆಕ್ಸ್ ಮಧ್ಯದಲ್ಲಿರುವ ಮರದ ಕೊಂಬೆಗಳು ಮುರಿದು ಪಾದಚಾರಿ ಮಾರ್ಗದ ಮೇಲೆ ಬಿದ್ದಿವೆ. ಇಷ್ಟು ದಿನಗಳಾದರೂ, ಅವುಗಳನ್ನು ಬಿಬಿಎಂಪಿ ತೆರವುಗೊಳಿಸಿಲ್ಲ. ಇದರಿಂದ ಪಾದಚಾರಿಗಳು ನಡೆದಾಡಲು ವಾಹನ ದಟ್ಟಣೆಯಿರುವ ಮುಖ್ಯರಸ್ತೆಯನ್ನೇ ಬಳಸುವಂತಾಗಿದೆ. ಅದರಲ್ಲೂ ಶಾಲಾ- ಕಾಲೇಜು, ಅಂಗಡಿ, ಕಚೇರಿಗಳು ಆರಂಭವಾಗುವ ಮತ್ತು ಮುಗಿಯುವ ಸಮಯದಲ್ಲಿ ಇಲ್ಲಿ ದಟ್ಟಣೆ ಹೆಚ್ಚಿರುತ್ತದೆ. ಪಾಲಿಕೆ ಸಿಬ್ಬಂದಿ, ಕೂಡಲೇ ಈ ಮರದ ಕೊಂಬೆಗಳ ರಾಶಿಯನ್ನು ತೆರವುಗೊಳಿಸಿ, ಪಾದಚಾರಿಗಳ ಸುಗಮ ಸಂಚಾರಕ್ಕೆ ಅನುಕೂಲ ಕಲ್ಪಿಸಬೇಕು.

ಶಿವಪ್ರಸಾದ್ ಎಸ್. ಚಿಕ್ಕಪೇಟೆ



ಪಾದಚಾರಿ ಮಾರ್ಗದಲ್ಲಿ ಮರದ ಕೊಂಬೆಗಳ ರಾಶಿ

ನಿಧನ ವಾರ್ತೆ

ಡಿ.ಪಿ.ಪ್ರೇಮ್ ಕುಮಾರ್

ಬೆಂಗಳೂರು: ವ್ಯಂಗ್ಯಚಿತ್ರಕಾರ ಡಿ.ಪಿ. ಪ್ರೇಮ್ ಕುಮಾರ್ (87) ಅವರು ಹೃದಯಾಘಾತದಿಂದ ಶನಿವಾರ ನಿಧನರಾಗಿದ್ದಾರೆ.

ಅವರಿಗೆ ಪುತ್ರ ಹಾಗೂ ಪುತ್ರಿ ಇದ್ದಾರೆ. ಹೊಸೂರು ರಸ್ತೆಯಲ್ಲಿರುವ ಕ್ರಿಶ್ಚಿಯನ್ ಸ್ಮಶಾನದಲ್ಲಿ ಭಾನುವಾರ ಸಂಜೆ ಅವರ ಅಂತ್ಯಕ್ರಿಯೆ ನಡೆಯಿತು.



ಅವರು 'ಪ್ರಜಾವಾಣಿ'ಯ 'ಚಿನಕುರಳಿ'ಗೆ ದಶಕಗಳ ಕಾಲ ವ್ಯಂಗ್ಯಚಿತ್ರ ಬರೆದಿದ್ದರು. ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷರೂ ಆಗಿದ್ದರು. ಅವರು ಬರೆದ ವ್ಯಂಗ್ಯಚಿತ್ರಗಳು ಕನ್ನಡದ ಹಲವು ದಿನಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ.

ಭೂಮಿ ಕಂಪಿಸಿದ ಅನುಭವ

ಪಾತಪಾಳ್ಯ(ಬಾಗೇಪಲ್ಲಿ): ತಾಲ್ಲೂಕಿನ ಪಾತಪಾಳ್ಯ ಹೋಬಳಿಯ ಆಗಟ ಮಡಕ ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ಕೆಲ ಕಾಲ ಭೂಮಿ ಕಂಪನದಿಂದ ಭಾರಿ ಶಬ್ದ ಉಂಟಾಗಿದೆ.

ಮನೆಯಲ್ಲಿ ಜೋಡಿಸಿದ್ದ ಪಾತ್ರೆಗಳು, ವಸ್ತುಗಳು ಕೆಳಕ್ಕೆ ಉರುಳಿವೆ. ಭಯದ ವಾತಾವರಣ ಸೃಷ್ಟಿಯಾಗಿದ್ದರೂ, ಸಂಬಂಧಪಟ್ಟ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿಲ್ಲ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದರು.

ಸ್ವಾಯತ್ತವಾಗಿ ನೆಲೆ ಕಂಡುಕೊಳ್ಳುವ (ಆರ್‌ಎಲ್‌ವಿ ಲೆಕ್ಸ್‌3) ಉಡಾವಣಾ ವಾಹನ ಯಶಸ್ವಿ ಕಾರ್ಯಾಚರಣೆ

ಅಂತಿಮ ಪರೀಕ್ಷೆ: ‘ಪುಷ್ಪಕ್’ ಯಶಸ್ಸು

ಪ್ರಜಾವಾಣಿ ವಾರ್ತೆ

ಇಸ್ರೊ ಸಾಧನೆ

ನಾಯಕನಹಟ್ಟಿ (ಚಿತ್ರದುರ್ಗ): ‘ಪುಷ್ಪಕ್’ ಹೆಸರಿನ ಮರುಬಳಕೆ ಮಾಡಬಹುದಾದ ಉಡಾವಣಾ ವಾಹನ (ಆರ್‌ಎಲ್‌ವಿ ಲೆಕ್ಸ್‌-3) ಪರೀಕ್ಷಾರ್ಥ ಪ್ರಯೋಗವು ಭಾನುವಾರ ಇಲ್ಲಿ ಯಶಸ್ವಿಯಾಗಿ ನಡೆಯಿತು. ಈ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮತ್ತೊಂದು ಮೈಲಿಗಲ್ಲು ಸ್ಥಾಪಿಸಿತು.

ಸಮೀಪದ ಕುದಾಪುರ ಡಿಆರ್‌ಡಿಒ ಏರೋನಾಟಿಕಲ್ ಟೆಸ್ಟ್ ರೇಂಜ್‌-2ರ ಆವರಣದಲ್ಲಿ ಬೆಳಿಗ್ಗೆ 7ಕ್ಕೆ ಕೈಗೊಂಡ ‘ಪುಷ್ಪಕ್’ನ 3ನೇ ಮತ್ತು ಅಂತಿಮ ಹಂತದ ಪರೀಕ್ಷಾರ್ಥ ಹಾರಾಟ ಮತ್ತು ನೆಲೆಗೆ ಮರಳುವ ಪ್ರಯೋಗವು ಸಫಲತೆ ಕಂಡಿತು.

ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಇದು ವಿನೂತನ ಪ್ರಯೋಗವಾಗಿದೆ. ಭಾರತೀಯ ವಾಯುಪಡೆಗೆ ಸೇರಿದ ಚಿನೂಕ್ ಯುದ್ಧ ಹೆಲಿಕಾಪ್ಟರ್‌ನ ಕೆಳ ಭಾಗಕ್ಕೆ ಬೃಹತ್ ರೆಕ್ಕೆಯಿರುವ ‘ಪುಷ್ಪಕ್’ ಉಡಾವಣಾ ವಾಹನವನ್ನು ಹಗ್ಗದಲ್ಲಿ ಕಟ್ಟಿ ಭೂಮಟ್ಟದಿಂದ 4.5 ಕಿ.ಮೀ ಮೇಲಕ್ಕೆ ಹೊತ್ತೊಯ್ಯಲಾಯಿತು. ಅಲ್ಲಿಂದ ಅದನ್ನು ವಿಮುಕ್ತ ಮಾಡಲಾಯಿತು.

4 ಕಿ.ಮೀ ಎತ್ತರದಿಂದ ರನ್‌ವೇ ಕಡೆಗೆ ಗಂಟೆಗೆ 350 ಕಿ.ಮೀ ವೇಗದಲ್ಲಿ ಹಾರಾಟ ನಡೆಸಿದ ಪುಷ್ಪಕ್, ಸ್ವಯಂ ಚಲನೆ ಪಡೆದುಕೊಂಡಿತು. ಬ್ರೇಕ್ ಪ್ಯಾರಾಚೂಟ್, ಲ್ಯಾಂಡಿಂಗ್ ಬ್ರೇಕ್ ಮತ್ತು ನೋಸ್‌ವ್ಹೀಲ್ ಸ್ಟೀರಿಂಗ್ ವ್ಯವಸ್ಥೆಯಿಂದ ವೇಗವನ್ನು 100 ಕಿ.ಮೀಗೆ ತಗ್ಗಿಸಿಕೊಂಡು ರನ್‌ವೇ ಮಧ್ಯಭಾಗಕ್ಕೆ ಬರುತ್ತಿದ್ದಂತೆ ಸೇರಿದ್ದ ವಿಜ್ಞಾನಿಗಳು ಹರ್ಷೋದ್ಗಾರ ಮೊಳಗಿಸಿದರು.

ಇಸ್ರೊ ಸೇರಿದಂತೆ ವಿಶ್ವದ ವಿವಿಧ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳು ನಭಕ್ಕೆ ಉಪಗ್ರಹಗಳನ್ನು ಕಳುಹಿಸುವಾಗ ಪ್ರತಿ ಬಾರಿ ಹೊಸ ರಾಕೆಟ್‌ಗಳನ್ನು ಬಳಸುತ್ತಿವೆ. ಉದ್ದೇಶ ಈಡೇರಿದ ಬಳಿಕ ರಾಕೆಟ್ ನಭದಲ್ಲಿಯೇ ಉರಿದು ನಾಶವಾಗುತ್ತಿತ್ತು. ಇದರಿಂದ ಕೋಟ್ಯಂತರ ಹಣ ನಷ್ಟವಾಗುತ್ತಿತ್ತು. ಇದನ್ನು ತಡೆಯಲು ಮರುಬಳಕೆ ವಾಹನದ (ಆರ್‌ಎಲ್‌ವಿ) ಪರಿಕಲ್ಪನೆಯನ್ನು ದೇಶಿ ತಂತ್ರಜ್ಞಾನದ ಮೂಲಕ ಇಸ್ರೊ ಈಗ ಆವಿಷ್ಕರಿಸಿದೆ.



ಪುಷ್ಪಕ್ ರಾಕೆಟ್ (ಚಿತ್ರಕೃಪೆ: ಇಸ್ರೊ).

ಸಂಕೀರ್ಣವಾಗಿದ್ದ ‘ಪುಷ್ಪಕ್’ ಉಡಾವಣಾ ವಾಹನದ ಪರೀಕ್ಷಾರ್ಥ ಪ್ರಯೋಗದ ಯಶಸ್ಸಿಗೆ ವಿಜ್ಞಾನಿಗಳ ಪರಿಶ್ರಮ ಕಾರಣ. ಇದಕ್ಕಾಗಿ ಅವರನ್ನು ಅಭಿನಂದಿಸುವೆ
ಎಸ್.ಸೋಮನಾಥ್, ಇಸ್ರೊ ಮುಖ್ಯಸ್ಥ

‘ಪುಷ್ಪಕ್’ನ ಪ್ರಯೋಗಾರ್ಥ ಪರೀಕ್ಷೆ ಯಶಸ್ವಿಯಾಗಿ ಇಸ್ರೊದ ವಿಶ್ವಾಸ ಇಮ್ಮಡಿಯಾಗಿದೆ. ಮುಂದೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಇನ್ನಷ್ಟು ಸಾಧನೆಗೆ ಇದು ಪ್ರೇರಣೆ
ಎಸ್.ಉನ್ನಿಕೃಷ್ಣನ್ ನಾಯರ್, ನಿರ್ದೇಶಕರು, ವಿಕ್ರಂ ಸಾರಾಭಾಯ್ ಬಾಹ್ಯಾಕಾಶ ಕೇಂದ್ರ

ವಿಕ್ರಂ ಸಾರಾಭಾಯ್ ಬಾಹ್ಯಾಕಾಶ ಸಂಶೋಧನಾ ಕೇಂದ್ರ, ಭಾರತೀಯ ವಾಯುಪಡೆ, ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ (ಎಡಿಇ), ವೈಮಾನಿಕ ವಿತರಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ ಹಾಗೂ ‘ಇಸ್ರೊದ ಸ್ಯಾಕ್’, ‘ಇಸ್ಟ್ರಾಕ್’, ಸತೀಶ್ ಧವನ್ ಸ್ಪೇಸ್ ಸೆಂಟರ್ (ಎಸ್‌ಡಿಎಸ್‌ಸಿ) ಶಾರ್ ಸಂಸ್ಥೆಗಳ ಸಹಯೋಗದ ಯೋಜನೆ ಇದಾಗಿದೆ.

ನ್ಯಾಷನಲ್ ಏರೋಸ್ಪೇಸ್ ಲ್ಯಾಬೋರೇಟರೀಸ್ (ಎನ್‌ಎಎಲ್), ‘ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ರೀಜನಲ್ ಸೆಂಟರ್ ಫಾರ್ ಮಿಲಿಟರಿ ಏರ್‌ವರ್ದಿನೆಸ್ (ಆರ್‌ಸಿಎಂಎ), ‘ಇಂಡಿಯನ್ ಆಯಿಲ್ ಕಾರ್ಪೊರೇಷನ್ ಆಫ್ ಇಂಡಿಯಾ, ಏರ್‌ಪೋರ್ಟ್ ಅಥಾರಿಟಿ ಆಫ್ ಇಂಡಿಯಾ ಸೇರಿದಂತೆ ಹಲವು ಸಂಸ್ಥೆಗಳು ಈ ಯೋಜನೆಗೆ ಕೈಜೋಡಿಸಿವೆ.

‘ಇಸ್ರೊ ಮುಖ್ಯಸ್ಥ ಎಸ್.ಸೋಮನಾಥ್, ವಿಕ್ರಂ ಸಾರಾಭಾಯ್ ಬಾಹ್ಯಾಕಾಶ ಕೇಂದ್ರದ ನಿರ್ದೇಶಕ ಎಸ್.ಉನ್ನಿಕೃಷ್ಣನ್ ನಾಯರ್, ಯೋಜನೆಯ ನಿರ್ದೇಶಕರಾದ ಜೆ.ಮುತ್ತು ಪಾಂಡಿಯನ್ ಹಾಗೂ ಬಿ.ಕಾರ್ತಿಕ್ ಪರೀಕ್ಷಾರ್ಥ ಪ್ರಯೋಗದ ವೇಳೆ ಇದ್ದರು.

ಸುದ್ದಿ 2 ನಿಮಿಷ

‘ಡಿಸಿಎಂ ಹುದ್ದೆ: ಅಧಿಕಾರ ಹಂಚಿಕೆ ಆದರೆ ಎಲ್ಲ ಸಮುದಾಯಕ್ಕೂ ಅವಕಾಶ’

ಬಾಗಲಕೋಟೆ: ‘ನಾನು ಉಪ ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿ ಅಲ್ಲ. ವಿವಿಧ ಸಮುದಾಯಗಳ ಬೇಡಿಕೆಯಂತೆ ಇನ್ನಷ್ಟು ಜನರಿಗೆ ಡಿಸಿಎಂ ಹುದ್ದೆ ನೀಡಬೇಕು ಎಂದು ಹೇಳುತ್ತಿದ್ದೇನೆ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.

ಭಾನುವಾರ ಬಾಪೂಜಿ ಬ್ಯಾಂಕ್ ಪ್ರಧಾನ ಕಚೇರಿ ಉದ್ಘಾಟನಾ ಕಾರ್ಯಕ್ರಮದ ಮುನ್ನ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ಅಧಿಕಾರ ಹಂಚಿಕೆಯಾದರೆ ಎಲ್ಲ ಸಮುದಾಯಗಳಿಗೂ ಅವಕಾಶ ಸಿಗಲಿದೆ. ಪಕ್ಷದ ಮೇಲೆ ಪ್ರೀತಿ, ವಿಶ್ವಾಸ ಹೆಚ್ಚುತ್ತದೆ. ಆ ದೃಷ್ಟಿಯಿಂದ ಲಿಂಗಾಯತ, ಅಲ್ಪಸಂಖ್ಯಾತ, ಎಸ್‌ಸಿ, ಎಸ್ಟಿ ಸಮುದಾಯಗಳ ಒಬ್ಬೊಬ್ಬರನ್ನು ಡಿಸಿಎಂ ಮಾಡಬೇಕು. ಆ ದೃಷ್ಟಿಯಿಂದ ಪ್ರತಿಪಾದನೆ ಮಾಡುತ್ತಿದ್ದೇನೆ’ ಎಂದರು.

‘ಹಿಂದೆ ಬಿಜೆಪಿ ಅವಕಾಶ ನೀಡಿತ್ತು. ಡಿಸಿಎಂ ಎಂದಾಕ್ಷಣ ಹೊರತಾಗಿ ಏನು ಕೊಡಬೇಕಿಲ್ಲ. ಸಂಪುಟ ಸಚಿವರಿಗೆ ಇರುವ ಸೌಲಭ್ಯ ಮುಂದುವರಿಯುತ್ತದೆ. ಆದರೆ, ಎಲ್ಲ ವರ್ಗದವರಿಗೆ ಸರ್ಕಾರದಲ್ಲಿ ನಮಗೂ ಪ್ರಾತಿನಿಧ್ಯ ಸಿಕ್ಕಿದೆ ಎನ್ನುವ ಭಾವನೆ ಬರುತ್ತದೆ. ಅಂತಿಮವಾಗಿ ಪಕ್ಷದ ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆ ಅದಕ್ಕೆ ನಾವು ಬದ್ಧರು’ ಎಂದರು.



‘ಇನ್ನು ಮುಂದೆ ನಾನು ಚುನಾವಣೆಗೆ ಸ್ಪರ್ಧಿಸುವುದಿಲ್ಲ’ ಎಂದು ರಾಜಣ್ಣ ಹೇಳಿದರು.

ಯುವತಿಗೆ ವಂಚನೆ ಆರೋಪ ಬಿಜೆಪಿ ಮುಖಂಡನ ಸೆರೆ

ಸಾಗರ: ಮದುವೆ ಆಗುವುದಾಗಿ ನಂಬಿಸಿ, ಯುವತಿಯ ಜೊತೆ ಹಲವು ಬಾರಿ ದೈಹಿಕ ಸಂಪರ್ಕ ಬೆಳೆಸಿ ವಂಚಿಸಿದ್ದ ಆರೋಪದ ಮೇರೆಗೆ ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಘಟಕದ ಕಾರ್ಯದರ್ಶಿ ಅರುಣ್ ಕುಗ್ವೆ ಅವರನ್ನು ಶಿವಮೊಗ್ಗ ಪೊಲೀಸರು ಬಂಧಿಸಿದ್ದಾರೆ.

ಯುವತಿ ಕುಟುಂಬಕ್ಕೆ ಬೆದರಿಕೆ ಹಾಕಿದ ಆರೋಪದ ಮೇರೆಗೆ ಅರುಣ್ ಕುಗ್ವೆ ಅವರ ತಮ್ಮ ಗಣೇಶ್ ವಿರುದ್ಧವೂ ಶಿವಮೊಗ್ಗ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ‘ಅರುಣ್ ಕುಗ್ವೆ 2021ರಲ್ಲಿ ಪರಿಚಯವಾಗಿದ್ದರು. ಮದುವೆ ಆಗುವುದಾಗಿ ನಂಬಿಸಿ ಮಾತಿಗೆ ತಪ್ಪಿದ್ದರಿಂದ ಮಾರ್ಚ್‌ನಲ್ಲಿ ಆತ್ಮಹತ್ಯೆಗೆ ಯತ್ನಿಸಿದ್ದೆ. ನಂತರ ಮದುವೆ ಆಗುವುದಾಗಿ ಮತ್ತೆ ಭರವಸೆ ನೀಡಿದ್ದರು. ಈಗ ಮತ್ತೆ ಮೋಸ ಮಾಡಿದ್ದಾರೆ’ ಎಂದು ಯುವತಿ ದೂರಿನಲ್ಲಿ ತಿಳಿಸಿದ್ದಾರೆ.

‘ನನಗೆ ಗೊತ್ತಿಲ್ಲದಂತೆ ಖಾಸಗಿ ಕ್ಷಣಗಳ ದೃಶ್ಯಗಳನ್ನು ಮೊಬೈಲ್‌ನಲ್ಲಿ ಚಿತ್ರಿಸಿಕೊಂಡಿದ್ದರು. ಮದುವೆ ವಿಷಯ ಪ್ರಸ್ತಾಪಿಸಿದಾಗ ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬೆದರಿಕೆ ಹಾಕಿದ್ದರು’ ಎಂದೂ ದೂರಿನಲ್ಲಿ ವಿವರಿಸಿದ್ದಾರೆ.

ಕೊಲೆಯಾದ ಸ್ವಾಮೀಜಿ ಅಂತ್ಯಕ್ರಿಯೆ: ತನಿಖೆ ಚುರುಕು

ಮಾಲೂರು (ಕೋಲಾರ): ತಾಲ್ಲೂಕಿನ ಮೈಲಾಂಡಹಳ್ಳಿ ಬಳಿ ಆನಂದ ಮಾರ್ಗ ಆಶ್ರಮದ ಸ್ವಾಮಿಗಳಿಂದ ಹತ್ಯೆಯಾಗಿದ್ದ ಆಚಾರ್ಯ ಚಿನ್ಮಯಾನಂದ ಸ್ವಾಮೀಜಿ (70) ಅಂತ್ಯಸಂಸ್ಕಾರ ಭಾನುವಾರ ನೆರವೇರಿತು.

ಕಿತ್ತಂಡೂರು ಗ್ರಾಮದ ಆನಂದ ಮಾರ್ಗ ಆಶ್ರಮದಲ್ಲಿ ಆಶ್ರಮದ ಆವರಣದಲ್ಲಿ ಸ್ವಾಮೀಜಿಯ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಆಶ್ರಮ ಆವರಣದಲ್ಲಿ ನಡೆದ ಅಂತ್ಯ-ಕ್ರಿಯೆಲ್ಲಿ ಸುತ್ತಮುತ್ತಲಿನ ಗ್ರಾಮಸ್ಥರು, ಶಿಷ್ಯರು ಹಾಗೂ ಪಶ್ಚಿಮ ಬಂಗಾಳದಿಂದ ಬಂದಿದ್ದ ಸ್ವಾಮಿಗಳು ಪಾಲ್ಗೊಂಡಿದ್ದರು. ಅಹಿತಕರ ಘಟನೆ ನಡೆಯದಂತೆ ಆಶ್ರಮದ ಸುತ್ತಲೂ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಪೊಲೀಸರು ತನಿಖೆ ತೀವ್ರಗೊಳಿ-ಸಿದ್ದು, ಮೈಲಾಂಡಹಳ್ಳಿ ಬಳಿಯ ಆಶ್ರ-ಮದಲ್ಲಿನ ಸಿಸಿಟಿವಿ ಕ್ಯಾಮೆರಾ, ಹಾರ್ಡ್ ಡಿಸ್ಕ್ ಸೇರಿದಂತೆ ಹಲವು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಹಲವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಜಮೀನು ವಿಚಾರವಾಗಿ ಆಶ್ರಮದ ಎರಡು ಗುಂಪುಗಳ ನಡುವೆ ಸಂಘರ್ಷ ಮೂಡಿತ್ತು. ಶನಿವಾರ ಆಶ್ರಮದ ಶೌಚಾಲಯದಲ್ಲಿದ್ದ ಚಿನ್ಮಯಾನಂದ ಸ್ವಾಮೀಜಿ ಅವರನ್ನು ಹೊರಗೆಳೆದು ಹತ್ಯೆ ಮಾಡಲಾಗಿತ್ತು.

‘ನನ್ನ ಕೈಗೆ ನೀವು ಸಿಕ್ಕಿ ಹಾಕಿಕೊಳ್ಳಲ್ವೆ?’–ಚನ್ನಪಟ್ಟಣದಲ್ಲಿ ಅಧಿಕಾರಿಗಳಿಗೆ ಎಚ್‌ಡಿಕೆ ಖಡಕ್ ಎಚ್ಚರಿಕೆ

‘ಅಣ್ಣ, ತಮ್ಮಂದಿರ ಗುಲಾಮಗಿರಿ ಬಿಡಿ’


ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ‘ಅಧಿಕಾರಿಗಳು ಈ ಅಣ್ಣ, ತಮ್ಮಂದಿರ (ಡಿ.ಕೆ.ಸಹೋದರರ) ಗುಲಾಮಗಿರಿ ಮಾಡುವುದಕ್ಕೂ ಒಂದು ಮಿತಿ ಬೇಡವೆ. ಕ್ಷೇತ್ರದಲ್ಲಿ ಏನೆಲ್ಲಾ ನಡೆಯುತ್ತಿದೆ ಎಂದು ನೋಡುತ್ತಿದ್ದೇನೆ. ಗುಲಾಮಗಿರಿ ಬಿಡಿ..’

– ಇದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭಾನುವಾರ ಇಲ್ಲಿ ಅಧಿಕಾರಿಗಳಿಗೆ ನೀಡಿದ ಎಚ್ಚರಿಕೆ ಇದು,

‘ನಾನು ದುರಹಂಕಾರದಲ್ಲಿ ಈ ಮಾತು ಹೇಳುತ್ತಿದ್ದೇನೆ ಅಂದು ಕೊಂಡರೂ ಪರವಾಗಿಲ್ಲ. ನೀವೇನೂ ನನ್ನ ಕೈಗೆ ಸಿಕ್ಕಿ ಹಾಕಿಕೊಳ್ಳುವುದಿಲ್ಲವೇ? ಈಗ ನೀವು ಮಾಡುತ್ತಿರುವುದು ಮುಂದೆ ಪಶ್ಚಾತ್ತಾಪಕ್ಕೆ ಕಾರಣವಾಗಲಿದೆ’ ಎಂದು ಅವರು ಸ್ಪಷ್ಟ ಹೇಳಿದರು.

ಬೆಂಗಳೂರು ಸಹಕಾರ ಹಾಲು ಒಕ್ಕೂಟ ಭಾನುವಾರ ತಾಲ್ಲೂಕಿನ ಬೈರಾಪಟ್ಟಣದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಮಾತನಾಡಿದ ಅವರು, ಡಿ.ಕೆ. ಸಹೋದರರು ಮತ್ತು ಸರ್ಕಾರಿ ಅಧಿಕಾರಿಗಳ ಕಾರ್ಯವೈಖರಿಯ ವಿರುದ್ಧ ವಾಗ್ದಾಳಿ ನಡೆಸಿದರು.



‘ಅಧಿಕಾರಿಗಳು ಹೇಗೆ ನಡೆದು-ಕೊಳ್ಳುತ್ತಿದ್ದೀರಿ ಎಂದು ವಾರದಿಂದ ಗಮನಿಸುತ್ತಿದ್ದೇನೆ. ನಿಮ್ಮನ್ನು ಮೆಚ್ಚಿ ಮಾತನಾಡಬೇಕೇ ಅಥವಾ ಅವರು (ಡಿ.ಕೆ.ಸಹೋದರರು) ಬಯ್ಯುವಂತಹ ಪದಗಳನ್ನು ಬಳಸಬೇಕೇ? ನಾನು ನಾಳೆಯೇ ರಾಜಕೀಯದಿಂದ ನಿವೃತ್ತಿ ಆಗುವುದಿಲ್ಲ. ರಾಜ್ಯದ ಪುಣ್ಯಾತ್ಮರು ನಮ್ಮನ್ನು ಉಳಿಸುತ್ತಾರೆ. ತಾನೊಂದು ಬಗೆದರೆ ದೈವ ಬೇರೊಂದು ಬಗೆಯುತ್ತದೆ. ಹಾಗಾಗಿ, ನಿಮಗೆ ಎಚ್ಚರಿಕೆ ಕೊಡುತ್ತಿದ್ದೇನೆ’ ಎಂದರು.

‘ನಾನು ಕೆಡಿಪಿ ಸಭೆ ಮಾಡಿದಾಗ ಮಾಧ್ಯಮದವರನ್ನು ಇರಿಸಿಕೊಂಡೇ ಮಾಡಿದೆ. ಇವರಂತೆ ಕದ್ದುಮುಚ್ಚಿ ಮಾಡಲಿಲ್ಲ. ಆದರೆ, ಇವರು ಅಧಿಕಾರಿಗಳ ಮೊಬೈಲ್ ಫೋನ್ ಎತ್ತಿಟ್ಟುಕೊಂಡು ಮೀಟಿಂಗ್ ಮಾಡುತ್ತಾರೆಂದರೆ ಏನೆನ್ನಬೇಕು? ಅಧಿಕಾರಿಗಳ ಗುಲಾಮಗಿರಿಗೂ ಮಿತಿ ಇರುತ್ತದೆ ಎಂಬುದನ್ನು ಮರೆಯಬಾರದು’ ಎಂದು ಹೇಳಿದರು.

‘ಅವರಾಗಿದ್ದರೆ ಬೆಂಕಿ ಹಚ್ಚುತ್ತಿದ್ದರು...’

‘ಪ್ರಜ್ವಲ್ ಮತ್ತು ಸೂರಜ್ ರೇವಣ್ಣ ಪ್ರಕರಣಕ್ಕೆ ಸಂಬಂಧಿಸಿ ಒಂದು ಚಾನೆಲ್‌ನವರು ಇಳಿ ವಯಸ್ಸಿನ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಮತ್ತು ನನ್ನ ಬಗ್ಗೆ ಏಕವಚನದಲ್ಲಿ ಮಾತನಾಡುತ್ತಾರೆ. ಇದೇ ಪ್ರಯೋಗವನ್ನು ಚನ್ನಪಟ್ಟಣ ಉದ್ಧಾರ ಮಾಡಲು ಬಂದವರ ಬಗ್ಗೆ ಮಾತನಾಡಿದ್ದರೆ ಟಿ.ವಿ ಸ್ಟುಡಿಯೊಗೆ ಬೆಂಕಿ ಹಚ್ಚುತ್ತಿದ್ದರು’ ಎಂದು ಕುಮಾರಸ್ವಾಮಿ, ಸುದ್ದಿವಾಹಿನಿಯೊಂದರ ವಿರುದ್ಧ ಕಿಡಿಕಾರಿದರು.

‘ಎಲ್ಲರ ಕುಟುಂಬದಲ್ಲೂ ಮಕ್ಕಳಿದ್ದಾರೆ. ಹಾಗಂತ ಅವರಿಗೆ ತಪ್ಪು ದಾರಿಗೆ ಹೋಗಿ ಎಂದು ಪೋಷಕರಾದ ನಾವು ಹೇಳುತ್ತೇವಾ? ಕೆಲವು ಘಟನೆ ನಡೆದಿವೆ. ಅದಕ್ಕೂ ದೇವೇಗೌಡ ಮತ್ತು ಕುಮಾರಸ್ವಾಮಿಗೂ ಏನು ಸಂಬಂಧ? ಅಲ್ಲದೆ, ನಾನು ದೆಹಲಿಯಲ್ಲಿ ಕುಳಿತು, ಕೊಲೆ ಪ್ರಕರಣದಲ್ಲಿ ಚಿತ್ರನಟನೊಬ್ಬನನ್ನು ಅರೆಸ್ಟ್ ಮಾಡಿಸಿದ್ದೇನೆ ಎಂದು ಹೇಳುತ್ತಿದ್ದಾರೆ. ನಮ್ಮ ಸುತ್ತಮುತ್ತ ಏನೇನೊ ನಡೆಯುತ್ತಿದೆ’ ಎಂದು ಆಶ್ಚರ್ಯ ವ್ಯಕ್ತಪಡಿಸಿದರು.

‘ಪಕ್ಷ ಸೂಚಿಸಿದರೆ ಚನ್ನಪಟ್ಟಣದಿಂದ ಡಿಕೆಶಿ ಸ್ಪರ್ಧೆ’

ಮಾಗಡಿ (ರಾಮನಗರ): ‘ಪಕ್ಷ ತೀರ್ಮಾನಿಸಿದರೆ ಚನ್ನಪಟ್ಟಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪರ್ಧಿಸುವರು’ ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಭಾನುವಾರ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವರಿಷ್ಠರು ಕ್ಷೇತ್ರದಲ್ಲಿ ಸಮರ್ಥ ಅಭ್ಯರ್ಥಿಯನ್ನೇ ಕಣಕ್ಕೆ ಇಳಿಸುವರು. ಡಿ.ಕೆ.ಶಿವಕುಮಾರ್ ಇದೇ ಜಿಲ್ಲೆಯವರು ಆಗಿರುವುದರಿಂದ ಚನ್ನಪಟ್ಟಣ ಕ್ಷೇತ್ರದ ಅಭಿವೃದ್ಧಿಗೆ ಒತ್ತು ಕೊಡುತ್ತಿದ್ದಾರಷ್ಟೆ’ ಎಂದರು.

‘ಡಿ.ಕೆ.ಶಿವಕುಮಾರ್ ನನಗಾಗಿ ಕನಕಪುರ ಕ್ಷೇತ್ರ ಬಿಡುವರು ಎಂಬುದು ಮಾಧ್ಯಮದ ಸೃಷ್ಟಿ. ಯಾವುದೇ ಚುನಾವಣೆಗೆ ನಾನು ಸ್ಪರ್ಧಿಸುತ್ತಿಲ್ಲ. ಚನ್ನಪಟ್ಟಣ ಉಪ ಚುನಾವಣೆಗೆ ಸ್ಪರ್ಧಿಸುವ ವಿಚಾರ ನನ್ನ ಮುಂದೆ ಇಲ್ಲ. ಜನ ವಿಶ್ರಾಂತಿ ನೀಡಿದ್ದಾರೆ’ ಎಂದು ಹೇಳಿದರು.



‘ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಮೂಲತಃ ಚಿತ್ರ ನಟರು. ಅವರ ಹೇಳಿಕೆಗೆ ಅಷ್ಟು ಪ್ರಾಮುಖ್ಯತೆ ನೀಡುವುದಿಲ್ಲ. ಚಲನಚಿತ್ರ ನಟರು, ನಿರ್ಮಾಪಕರು, ಕತೆಗಾರರು ಅವರೇ ಆಗಿರುವುದರಿಂದ ಕಥೆ ಯಾವಾಗ ಬೇಕಾದರೂ ಬದಲಾಗುತ್ತದೆ’ ಎಂದರು.

‘ಚನ್ನಪಟ್ಟಣ ಕ್ಷೇತ್ರ ಅಭ್ಯರ್ಥಿ: 25ಕ್ಕೆ ದೆಹಲಿಯಲ್ಲಿ ಚರ್ಚೆ’

ಮೈಸೂರು: ‘ಚನ್ನಪಟ್ಟಣ ಕ್ಷೇತ್ರ ಉಪ ಚುನಾವಣೆ ಅಭ್ಯರ್ಥಿ ಆಯ್ಕೆ ಕುರಿತು ಮಂಗಳವಾರ (ಜೂನ್ 25) ನವದೆಹಲಿಗೆ ತೆರಳಿ ಹೈಕಮಾಂಡ್ ಜತೆ ಚರ್ಚಿಸುತ್ತೇನೆ’ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಇಲ್ಲಿ ಹೇಳಿದರು.

‘ಈ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಡುವ ಅಥವಾ ತೆಗೆದುಕೊಳ್ಳುವ ಬಗ್ಗೆ ತೀರ್ಮಾನವಾಗಿಲ್ಲ. ಪ್ರಾಥಮಿಕ ಚರ್ಚೆಯೂ ಆಗಿಲ್ಲ. ಎರಡು ಪಕ್ಷದವರು ಸೇರಿ ನಿರ್ಧರಿಸುತ್ತೇವೆ’ ಎಂದರು.



‘ಕಾಂಗ್ರೆಸ್‌ನಿಂದ ಯಾರಾದರೂ ಸ್ಪರ್ಧಿಸಲಿ. ಯಾರು ಎಷ್ಟೇ ಬಲಾಢ್ಯರಾದರೂ ಜನ ಮನಸ್ಸು ಮಾಡಿದರೆ ಎಂತಹ ಫಲಿತಾಂಶ ಬರುತ್ತದೆ ಎಂಬುದಕ್ಕೆ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಚುನಾವಣೆಯ ಫಲಿತಾಂಶ ಸಾಕ್ಷಿ’ ಎಂದು ಹೇಳಿದರು.

‘ಹಥಿನೀ ಕುಂಡ್ ಅಣೆಕಟ್ಟಿನ ಎಲ್ಲ ಗೇಟ್‌ಗಳೂ ಬಂದ್’

ನವದೆಹಲಿ (ಪಿಟಿಐ): ‘ಹರಿಯಾಣ ಸರ್ಕಾರವು ಹಥಿನೀ ಕುಂಡ್ ಅಣೆಕಟ್ಟಿನ ಎಲ್ಲ ಗೇಟ್‌ಗಳನ್ನು ಬಂದ್ ಮಾಡಿರುವ ಕಾರಣ, ರಾಜಧಾನಿ ದೆಹಲಿ ತನ್ನ ಪಾಲಿನ ನೀರು ಪಡೆಯಲಾಗುತ್ತಿಲ್ಲ’ ಎಂದು ದೆಹಲಿಯ ಜಲಸಂಪನ್ಮೂಲ ಸಚಿವೆ ಆತಿಶಿ ಭಾನುವಾರ ಆರೋಪಿಸಿದರು.

‘ಪಶ್ಚಿಮಘಟ್ಟ: ಸಮಗ್ರ ಅಧ್ಯಯನ ಕೇಂದ್ರ ಸ್ಥಾಪಿಸಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ವೈಜ್ಞಾನಿಕ, ಆರ್ಥಿಕ, ಸಾಮಾಜಿಕ ಅಧ್ಯಯನ ಈಗಿನ ಅಗತ್ಯ
- ವ್ಯಾಪಕ ಅರಣ್ಯ ನಾಶದಿಂದ ಹವಾಮಾನ ವೈಪರೀತ್ಯ ಏರಿಕೆ
- ದೇಶದಲ್ಲಿ ಎರಡು ದಶಕಗಳಲ್ಲಿ 23 ಲಕ್ಷ ಹೆಕ್ಟೇರ್ ಅರಣ್ಯ ನಾಶ

ಶಿರಸಿ: ‘ಪಶ್ಚಿಮಘಟ್ಟಗಳ ಸಮಗ್ರ ಅಧ್ಯಯನ ದೃಷ್ಟಿಯಿಂದ ಪಶ್ಚಿಮಘಟ್ಟ ಸಮಗ್ರ ಅಧ್ಯಯನ ಕೇಂದ್ರ ಸ್ಥಾಪನೆಗೆ ಕೇಂದ್ರ ಸರ್ಕಾರ ತಕ್ಷಣ ಕ್ರಮಕೈಗೊಳ್ಳ-ಬೇಕು’ ಎಂದು ಶಿವಮೊಗ್ಗದ ಪರಿಸರ ತಜ್ಞ ಪ್ರೊ.ಬಿ.ಎಂ.ಕುಮಾರಸ್ವಾಮಿ ಒತ್ತಾಯಿಸಿದರು.

ಶಿರಸಿಯಲ್ಲಿ ಭಾನುವಾರ ವೃಕ್ಷಲಕ್ಷ ಆಂದೋಲನದ ವತಿಯಿಂದ ಹಮ್ಮಿಕೊಂಡ ‘ಪರಿಸರ ಸಂರ-ಕ್ಷಣೆ-ಸುಸ್ಥಿರ ಅಭಿವೃದ್ಧಿ’ ರಾಜ್ಯಮಟ್ಟದ ಸಮ್ಮೇಳನದಲ್ಲಿ ಅವರು ಆಶಯ ಭಾಷಣ ಮಾಡಿದರು.

‘ವ್ಯಾಪಕ ಅರಣ್ಯ ನಾಶದಿಂದ ದಶಕಗಳಿಂದೀಚೆ ವಾತಾವರಣ ವೈಪರೀತ್ಯ ಹೆಚ್ಚಿದೆ. ದೇಶದಲ್ಲಿ ಎರಡು ದಶಕಗಳಲ್ಲಿ 23 ಲಕ್ಷ ಹೆಕ್ಟೇರ್ ಅರಣ್ಯ ನಾಶವಾಗಿದೆ. ಇದರಲ್ಲಿ ಶೇ 60ರಷ್ಟು ದಟ್ಟಾರಣ್ಯವಿದೆ. ಆದರೂ, ಅರಣ್ಯನಾಶದ ಯೋಜನೆಗಳ ಜಾರಿಗೆ ನಾಯಕರು ಮುಂದಾಗುತ್ತಿರುವುದು ಖೇದಕರ’ ಎಂದರು.

‘ಜಾಗತಿಕ ಹವಾಮಾನ ವೈಪರೀತ್ಯಗಳ ನಿಯಂತ್ರಣ ಕ್ರಮ ದೃಷ್ಟಿಯಿಂದ ಪಶ್ಚಿಮಘಟ್ಟದ ಸಮಗ್ರ ಅಧ್ಯಯನ ಆಗಿಲ್ಲ. ಹೀಗಾಗಿ ಹಲವು ರಾಜ್ಯಗಳಲ್ಲಿ ಹಬ್ಬಿರುವ ಪಶ್ಚಿಮಘಟ್ಟ ವ್ಯಾಪ್ತಿಯ ವೈಜ್ಞಾನಿಕ, ಆರ್ಥಿಕ, ಸಾಮಾಜಿಕ ಅಧ್ಯಯನ ಒಳಗೊಂಡ ಪಶ್ಚಿಮಘಟ್ಟ ಅಧ್ಯಯನ ಕೇಂದ್ರವೊಂದನ್ನು ಸ್ಥಾಪಿಸಬೇಕು. ಆ ಮೂಲಕ ಸುಸ್ಥಿರ ಪರಿಸರಕ್ಕೆ ಪೂರಕ ಕಾರ್ಯಯೋಜನೆ ಹಮ್ಮಿಕೊಳ್ಳಬೇಕು’ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪಶ್ಚಿಮಘಟ್ಟದ ಪ್ರಸಕ್ತ ಪರಿಸ್ಥಿತಿ, ಸಂಶೋಧನೆಗಳ ಕಾಣಿಕೆ, ಜನರ ಸಹಭಾಗಿತ್ವದ ಅರಣ್ಯ ಮತ್ತು ಪರಿಸರ ನಿರ್ವಹಣೆ, ಕರಾವಳಿ ಪರಿಸರ ಪರಿಸ್ಥಿತಿ, ಅರಣ್ಯಾಧಾರಿತ ಪರಿಸರಸ್ನೇಹಿ ಆರ್ಥಿಕ ಚಟುವಟಿಕೆಗಳ ಮಾದರಿಗಳು, ಗೋಮಾಳ ಹಾಗೂ ದೇವರಕಾಡುಗಳ ಸಂರಕ್ಷಣೆ, ಪರಿಸರ ಚಳವಳಿಯ ಮಹತ್ವ, ಗಿಡಮೂಲಿಕೆ ಸಂರಕ್ಷಣೆ ಹಾಗೂ ನಾಟಿ ವೈದ್ಯಕೀಯದ ಕುರಿತು ವಿವಿಧ ಕ್ಷೇತ್ರದ ತಜ್ಞರು ವಿಷಯ ಮಂಡಿಸಿದರು.



ಶಿರಸಿಯಲ್ಲಿ ನಡೆದ ಪರಿಸರ ಸಂರಕ್ಷಣೆಸುಸ್ಥಿರ ಅಭಿವೃದ್ಧಿ ರಾಜ್ಯಮಟ್ಟದ ಸಮ್ಮೇಳನದಲ್ಲಿ ಪ್ರೊ.ಬಿ.ಎಂ.ಕುಮಾರಸ್ವಾಮಿ ಮಾತನಾಡಿದರು. ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಹೆಗಡೆ ಅಶೀಸರ, ರಾಷ್ಟ್ರೀಯ ವೈದ್ಯಕೀಯ ಆಯೋಗದ ಅಧ್ಯಕ್ಷ ಬಿ.ಎನ್‌.ಗಂಗಾಧರ ಉಪಸ್ಥಿತರಿದ್ದರು.

₹ 34 ಲಕ್ಷ ಬೆಲೆಯ ಗಾಂಜಾ ಪತ್ತೆ

ದಾವಣಗೆರೆ: ಒಡಿಶಾದಿಂದ ಬೆಂಗಳೂರಿಗೆ ಸಂಚರಿಸುತ್ತಿದ್ದ ‘ಟಾಟಾ ನಗರ’ ರೈಲಿನಲ್ಲಿ ಸಾಗಣೆ ಮಾಡುತ್ತಿದ್ದ ₹ 34 ಲಕ್ಷ ಮೌಲ್ಯದ 34 ಕೆ.ಜಿ. ಗಾಂಜಾವನ್ನು ರೈಲ್ವೆ ಪೊಲೀಸರು ವಶಪ-ಡಿಸಿಕೊಂಡಿದ್ದಾರೆ.

ಚಿತ್ರದುರ್ಗದ ಸಮೀಪ ರೈಲು ಬೋಗಿ ಪರಿಶೀಲಿಸುವಾಗ 17 ಕೆ.ಜಿ. ತೂಕದ ಎರಡು ಚೀಲಗಳಲ್ಲಿ ತುಂಬಿದ್ದ ಗಾಂಜಾ ಪತ್ತೆಯಾಗಿದೆ. ಆರೋಪಿಗಳ ಪತ್ತೆಗೆ ರೈಲ್ವೆ ಪೊಲೀಸರು ತನಿಖೆ ಮುಂ-ದುವರಿಸಿದ್ದಾರೆ.

ಗಾಂಜಾವನ್ನು ಒಂದು ಬೋಗಿಯಲ್ಲಿಟ್ಟಿದ್ದ ಆರೋಪಿಗಳು ಮತ್ತೊಂದು ಬೋಗಿಯಲ್ಲಿ ಆಸೀನರಾಗಿದ್ದರು. ಪೊಲೀಸರು ಗಾಂಜಾ ಪತ್ತೆ ಮಾಡುತ್ತಿದ್ದಂತೆ ತಲೆ ಮರೆಸಿಕೊಂಡಿದ್ದಾರೆ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜ ವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

(....ಹಿಂದಿನ ಸಂಚಿಕೆಯಿಂದ)

9) ಹೂಗ್ಲಿ ನದಿ ದಂಡೆಯ ಮೇಲೆ ಸುತನುತಿ, ಕಲ್ಕತ್ತ ಮತ್ತು ....ಎಂಬ ಮೂರು ಹಳ್ಳಿಗಳನ್ನು ಇಂಗ್ಲಿಷರು ಖರೀದಿಸಿ ಫೋರ್ಟ್ ವಿಲಿಯಂ ಎಂಬ ಕೋಟೆಯನ್ನು ಕಟ್ಟಿದರು. ಇದರ ಸುತ್ತ ಕಲ್ಕತ್ತಾ ನಗರ ಬೆಳೆಯಿತು.
ಉತ್ತರ:– ಗೋವಿಂದಪುರ

10) ಡೂಪ್ಲೆಯ ಕೋರಿಕೆಯ ಮೇರೆಗೆ ಲಾಬೋರ್ಡಿನಾ ಎಂಬ ಫ್ರೆಂಚ್ ಸೇನಾ ಮುಖ್ಯಸ್ಥನು ಮಾರಿಷಸ್‌ನಿಂದ ಬಂದು ....ರಿಂದ ಮದ್ರಾಸನ್ನು ವಶಪಡಿಸಿಕೊಂಡನು.
ಉತ್ತರ:– ಬ್ರಿಟಿಷ್

11) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.
ಉತ್ತರ:– ಪಾಂಡಿಚೇರಿ

12)............................ವರ್ಷ ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.
ಉತ್ತರ:– 1664

14)...................ವರ್ಷ ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದ
ಉತ್ತರ:– 1746

15) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ....
ಉತ್ತರ:– 'ಅಸಫ್ ಜಾ'

16) .... ಒಪ್ಪಂದದೊಂದಿಗೆ ಮೊದಲ ಕಾರ್ನಾಟಿಕ್ ಯುದ್ಧ ಅಂತ್ಯವಾಯಿತು?
ಉತ್ತರ:– 'ಏಕ್ಸ್-ಲಾ-ಚಾಪೆಲ್'

17) ಅಸಫ್‌ಜಾನ ಮತ್ತೊಬ್ಬ ಮಗನಾದ ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿದವರು ....
ಉತ್ತರ:– ಫ್ರೆಂಚರು

18) ಸಲಾಬತ್ ಜಂಗನನ್ನು ಹೈದರಾಬಾದಿನ ನಿಜಾಮನಾಗಿ ಮಾಡಿ ಅವನ ರಕ್ಷಣೆಗಾಗಿ ಆಸ್ಥಾನದಲ್ಲಿ ಫ್ರೆಂಚರು ತಮ್ಮ ಸೈನ್ಯ ಸಹಿತ ....ಎಂಬ ಅಧಿಕಾರಿಯನ್ನು ನೇಮಿಸಿದ್ದರು
. ಉತ್ತರ:– 'ಬುಸ್ಸಿ'

19) ಎರಡನೆಯ ಕಾರ್ನಾಟಿಕ್ ಯುದ್ಧವು .... ಒಪ್ಪಂದದೊಂದಿಗೆ ಮುಕ್ತಾಯವಾಯಿತು.
ಉತ್ತರ:– ಪಾಂಡಿಚೇರಿ

20) ಫ್ರೆಂಚರ................ಯು 1760ರಲ್ಲಿ ವಾಂಡಿವಾಷ್ ಕೋಟೆಗೆ ಮುತ್ತಿಗೆ ಹಾಕಲು ಪ್ರಯತ್ನಿಸಿದನು.
ಉತ್ತರ:– ಕೌಂಟ್– ಡಿ– ಲಾಲಿ

21) 1763ರಲ್ಲಿ ನಡೆದ 'ಪ್ಯಾರಿಸ್ ಒಪ್ಪಂದ'ದ ಪ್ರಕಾರ ಮೂರನೆಯ ಕಾರ್ನಾಟಿಕ್ ಯುದ್ಧ ಮುಕ್ತಾಯವಾಯಿತು ಮತ್ತು ಫ್ರೆಂಚರಿಗೆ ....ಯನ್ನು ಹಿಂತಿರುಗಿಸಲಾಯಿತು
ಉತ್ತರ:– ಪಾಂಡಿಚೇರಿ

22) ಸಿರಾಜ-ಉದ್-ದೌಲ್‌ನು ಪೋರ್ಟ್ ....ಯನ್ನು ಗೆದ್ದು ಕೆಲವರನ್ನು ಸೆರೆಹಿಡಿದನು. ಸಿರಾಜನು ಆಕ್ರಮಣದಲ್ಲಿ ಸೆರೆ ಸಿಕ್ಕಿದ 146 ಬ್ರಿಟಿಷರನ್ನು ಚಿಕ್ಕ ಕೊಠಡಿಯೊಂದರಲ್ಲಿ ಬಂಧಿಸಿಟ್ಟನು. ಅವರಲ್ಲಿ 123 ಮಂದಿ ಅಸುನೀಗಿದರು
ಉತ್ತರ:– ವಿಲಿಯಂ ಕೋಟೆ

23) ಯಾವುದೇ ತೆರಿಗೆ ಇಲ್ಲದೆ, ಸರಕುಗಳ ಆಮದು ಮತ್ತು ರಫ್ತು ಮಾಡಲು ಹಾಗೂ ಸರಕುಗಳ ಸಾಗಾಣೆ ಮಾಡಲು ಬೇಕಾದ ಪರವಾನಿಗೆ ಪತ್ರವೇ.........................
ಉತ್ತರ:– ದಸ್ತಕ್

24) 1757ರ ....ವಿಜಯದಿಂದಾಗಿ ಬಂಗಾಳದ ನವಾಬನ ಮೇಲೆ ಹಿಡಿತವನ್ನು ಸಾಧಿಸಿದನು. ಇದರಿಂದ ಅಪಾರ ಸಂಪತ್ತನ್ನು ಕ್ಲೈವನು ಸಂಪಾದಿಸಿದ್ದಲ್ಲದೇ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಗೂ ಲಾಭವನ್ನು ತಂದುಕೊಟ್ಟನು
ಉತ್ತರ:– ಪ್ಲಾಸಿ ಕದನದ

25) ಸಿರಾಜನು ಕಲ್ಕತ್ತಾದ ಮೇಲೆ ನಡೆಸಿದ ಆಕ್ರಮಣಕ್ಕೆ ಯುದ್ಧ ಪರಿಹಾರವಾಗಿ ಮೀರ್ ಜಾಫರನು ಕಂಪನಿಗೆ .... ರೂಪಾಯಿಗಳನ್ನು ನೀಡಿದನು.
ಉತ್ತರ:– ಹದಿನೇಳು ಕೋಟಿ ಎಪ್ಪತ್ತು ಲಕ್ಷ

26) ಯುವ ನವಾಬನಾದ ಸಿರಾಜ್-ಉದ್-ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ....ಕದನ ನಡೆಯಿತು.
ಉತ್ತರ:– ಪ್ಲಾಸಿ

27) ದಸ್ತಕ್‌ಗಳನ್ನು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ....ತಮ್ಮ ಖಾಸಗಿ ವ್ಯಾಪಾರ-ವ್ಯವಹಾರಕ್ಕಾಗಿ ದುರುಪಯೋಗಪಡಿಸಿಕೊಳ್ಳ ತೊಡಗಿದರು
ಉತ್ತರ:– ನೌಕರರು

28) ಈಸ್ಟ್ ಇಂಡಿಯಾ ಕಂಪನಿಗೆ ಬಂಗಾಳದ ಮೇಲಿನ 'ದಿವಾನಿ' ಹಕ್ಕನ್ನು ....ನೀಡಿದನು.
ಉತ್ತರ:– ಎರಡನೇ ಷಾ ಆಲಂ

29) ಷಾ ಆಲಂ ವಾರ್ಷಿಕ ....ರೂಪಾಯಿಗಳನ್ನು ಪಡೆದು ಬಂಗಾಳದ ಮೇಲಿನ ತನ್ನ ಹಕ್ಕನ್ನೆಲ್ಲ ಬಿಟ್ಟುಕೊಡಬೇಕಾಯಿತು
ಉತ್ತರ:– 26 ಲಕ್ಷ

30) ಔದ್‌ನ ನವಾಬನಾದ ....ಕಂಪನಿಗೆ ಯುದ್ಧನಷ್ಟ ಪರಿಹಾರವಾಗಿ 50 ಲಕ್ಷ ರೂಪಾಯಿಗಳನ್ನು ಕೊಡಬೇಕಾಯಿತು.
ಉತ್ತರ:– ಷುಜಾ-ಉದ್-ದೌಲನು

31) ಮೀರ್ ಖಾಸಿಮನು ಮೊಗಲ್ ದೊರೆ ಎರಡನೇ ಷಾ ಆಲಂ ಮತ್ತು ಔದ್‌ನ ನವಾಬ ಷುಜಾ-ಉದ್-ದೌಲರೊಂದಿಗೆ ಒಪ್ಪಂದ ಮಾಡಿಕೊಂಡನು. ಹೀಗಾಗಿ ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ....ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.
ಉತ್ತರ:– 1764

32) ಬ್ರಿಟಿಷರು ಮೀರ್ ಜಾಫರ್ ಅಸಮರ್ಥನೆಂದು ಬಿಂಬಿಸಿ ಅವನನ್ನು ನವಾಬ ಸ್ಥಾನದಿಂದ ಪದಚ್ಯುತಗೊಳಿಸಿ ಅವನ ಅಳಿಯನಾದ ....ನನ್ನು ಬಂಗಾಳದ ನವಾಬನೆಂದು ನೇಮಿಸಿದರು
ಉತ್ತರ:– ಮೀರ್ ಖಾಸಿಂ

5) ಮಾರ್ತಾಂಡ ವರ್ಮನು ವೈನಾಡ್ ಸಂಸ್ಥಾನದ ಗಡಿಯನ್ನು ವಿಸ್ತರಿಸಲು .... ಸಾವಿರ ಸೈನಿಕರ ಸೈನ್ಯವನ್ನು ಕಟ್ಟಿದನು.
ಉತ್ತರ:– 50

6) ....ನು "ನಾವೆಂದೂ ಮೆಣಸಿನ ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟು ಕೊಡೆವು" ಎಂದು ಡಚ್ಚರಿಗೆ ಖಾರವಾಗಿ ಪತ್ರ ಬರೆದನು
ಉತ್ತರ:– ಮಾರ್ತಾಂಡ ವರ್ಮ

II PUC MATHS

DIFFERENTIABILITY

Answer the following:-

1. If $y=\sqrt{\dfrac{1+e^x}{1-e^x}}$,

show that $\dfrac{dx}{dy}=\dfrac{e^x}{(1-e^x)\sqrt{1-e^{2x}}}$

Soln:- (.....Contd)

$$=\frac{1}{2}\sqrt{\frac{1+e^x}{1-e^x}}\cdot\left\{\frac{(1-e^x)(0-e^x)-(1+e^x)(1-e^x)}{(1-e^x)^2}\right\}$$

$$=\frac{1}{2}\sqrt{\frac{1+e^x}{1-e^x}}\cdot\frac{e^x-e^{2x}+e^x+e^{2x}}{(1-e^x)^2}$$

$$=\frac{(2e^x)}{2\sqrt{1+e^x}(1-e^x)^{3/2}}=\frac{e^x}{\sqrt{1+e^x}(1-e^x)^{3/2}}$$

$$=\frac{e^x}{\sqrt{1+e^x}\sqrt{1-e^x}(1-e^x)}=\frac{e^x}{\sqrt{1-e^x}\sqrt{1-e^{2x}}(1-e^x)}$$

2. If $y=\sqrt{\dfrac{1-x}{1+x}}$,

Prove that $=(1-x^2)\dfrac{dy}{dx}+y=0.$

$$\text{Soln}:-\frac{d}{dx}y=\frac{d}{dx}\sqrt{\frac{1-x}{1+x}}=\frac{d}{dx}\left(\frac{1-x}{1+x}\right)^{1/2}$$

$$=\frac{1}{2}\left(\frac{1-x}{1+x}\right)^{-1/2}\cdot\frac{d}{dx}\left(\frac{1-x}{1+x}\right)$$

$$=\left(\frac{1}{2}\right)\left(\sqrt{\frac{1+x}{1-x}}\right)\left\{\frac{(1+x)\frac{d}{dx}(1-x)-(1-x)\frac{d}{dx}(1+x)}{(1+x)^2}\right\}$$

$$=\left(\frac{1}{2}\right)\left(\sqrt{\frac{1+x}{1-x}}\right)\left\{\frac{(1+x)(0-1)-(1-x)(0+1)}{(1+x)^2}\right\}$$

$$=\frac{1}{2}\sqrt{\frac{1+x}{1-x}}\left\{\frac{-1-x-1+x}{(1+x)^2}\right\}$$

$$=\frac{1}{2}\sqrt{\frac{1+x}{1-x}}\left\{\frac{-2}{(1-x)^2}\right\}$$

$$=\left\{\frac{-1}{(1+x)^2}\right\}\sqrt{\frac{1+x}{1-x}} \qquad ....(1)$$

$$\therefore \text{LHS}=(1-x)^2\frac{dy}{dx}+y$$

$$\Rightarrow(1-x)^2\left\{\frac{-1}{(1+x)^2}\right\}\frac{\sqrt{1+x}}{\sqrt{1-x}}+\frac{\sqrt{1-x}}{\sqrt{1+x}}$$

[Using (1) and value of y]

$$\Rightarrow\frac{-(1-x)(1+x)\sqrt{1+x}}{\sqrt{1-x}(1+x)^2}+\frac{\sqrt{1-x}}{\sqrt{1+x}}$$

$$\Rightarrow\frac{-\sqrt{1-x}}{\sqrt{1+x}}+\frac{\sqrt{1-x}}{\sqrt{1+x}}$$

$$\Rightarrow 0=\text{RHS}$$

3. If $y=\dfrac{\log(x+\sqrt{x^2+1})}{\sqrt{x^2+1}}$, **prove that**

$(x^2+1)\dfrac{dy}{dx}+xy=1.$

$$\text{Soln}:-\text{Given}, y=\frac{\log(x+\sqrt{x^2+1})}{\sqrt{x^2+1}}$$

$$\Rightarrow y.\sqrt{x^2+1}=\log(x+\sqrt{x^2+1})$$

Differentiate w.r.t. x both sides

$$y.\frac{d}{dx}(x^2+1)^{1/2}+\sqrt{x^2+1}\frac{d}{dx}$$

$$=\frac{d}{dx}\log(x+\sqrt{x^2+1})$$

$$\Rightarrow\left(\frac{1}{2}\right)(x^2+1)^{1/2}.\frac{d}{dx}(x^2+1)+\sqrt{x^2+1}\frac{dy}{dx}$$

$$=\frac{1}{x+\sqrt{x^2+1}}.$$

$$\frac{d}{dx}\left(x+\sqrt{x^2+1}\right)$$

$$\Rightarrow\frac{y}{(2)\sqrt{x^2+1}}(2x+0)+\sqrt{x^2+1}\frac{dy}{dx}$$

$$\Rightarrow\left\{\frac{1}{x+\sqrt{x^2+1}}\right\}\left\{1+\frac{1}{2\sqrt{x^2+1}}.2x\right\}$$

$$\Rightarrow\frac{xy}{\sqrt{x^2+1}}+\sqrt{x^2+1}\frac{dy}{dx}$$

$$=\left\{\frac{1}{x+\sqrt{x^2+1}}\right\}\left\{\frac{\sqrt{x^2+1}+x}{\sqrt{x^2+1}}\right\}$$

$$\Rightarrow\frac{xy}{\sqrt{x^2+1}}+\sqrt{x^2+1}\frac{dy}{dx}=\frac{1}{\sqrt{x^2+1}}$$

$$\Rightarrow xy+(x^2+1)\frac{dy}{dx}=1$$

$$\Rightarrow(x^2+1)\frac{dy}{dx}+xy=1.$$

Multiple Choice questions:-

1] $\dfrac{d}{dx}(10^{10^x})=$

a) $10^{10^x}\ \log x$

b) $10^{10^x}(\log 10)^2$

c) $10^{10^x}.10^x(\log 10)^2$

d) $10^{10^x}.10^x\log 10.$

Soln:–(c)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ತೆರೆದ ಪುಸ್ತಕ ಮೌಲ್ಯಾಂಕನವೆಂದರೆ...



ಬೇದ್ರೆ ಮಂಜುನಾಥ, ಮೈಸೂರು

'ಪರೀಕ್ಷೆಗಳಲ್ಲಿ ಕಾಪಿ ಹೊಡೆಸುತ್ತಾರೆ, ತನ್ಮೂಲಕ ಹೆಚ್ಚಿನ ಫಲಿತಾಂಶ ತೋರಿಸುತ್ತಾರೆ,' ಎಂಬ ಆಪಾದನೆಯನ್ನು ದೂರಮಾಡಲು ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆ ನಡೆಯುವ ಕೊಠಡಿಗಳಲ್ಲಿ ಸಿ.ಸಿ.ಟಿ.ವಿ. ಕ್ಯಾಮೆರಾ ಅಳವಡಿಸಿ, ಪರೀಕ್ಷಾ ಪ್ರಕ್ರಿಯೆ ಮುಗಿಯುವವರೆಗೂ ರೆಕಾರ್ಡ್ ಮಾಡಿಕೊಂಡದ್ದೇ ಅಲ್ಲದೆ ಅದನ್ನು ವೆಬ್‌ಕ್ಯಾಸ್ಟಿಂಗ್ ಮಾಡಿದ್ದರ ಪರಿಣಾಮ ಪರೀಕ್ಷಾ ಫಲಿತಾಂಶದಲ್ಲಿ ಶೇ 10ರಷ್ಟು ಕುಸಿತ ಕಂಡುಬಂದಿದೆ. ಗ್ರೇಸ್ ಮಾರ್ಕ್ಸ್ ನೀಡಿದ್ದರಿಂದ ಶೇ 20ರಷ್ಟು ಮಕ್ಕಳು ತೇರ್ಗಡೆಯಾಗಿದ್ದಾರೆ.

ಆಯಾ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಸಿ.ಇ.ಒ.ಗಳು ಪ್ರತಿ ಪರೀಕ್ಷಾ ಕೇಂದ್ರದ ವೆಬ್‌ಕ್ಯಾಸ್ಟಿಂಗ್ ಪರಿಶೀಲಿಸಿದ್ದರು. ಹೀಗಾಗಿ ಪರೀಕ್ಷಾ ಅಕ್ರಮಗಳಿಗೆ ಸಂಪೂರ್ಣ ಕಡಿವಾಣ ಬಿದ್ದಿದ್ದು ಇದರಿಂದ ಒಟ್ಟಾರೆ ಫಲಿತಾಂಶದಲ್ಲಿ ಭಾರೀಪ್ರಮಾಣದ ಕುಸಿತ ಉಂಟಾಗಿದೆಯಂತೆ!

ಇಂತಹ ಕಟ್ಟೆಚ್ಚರದ ಪರೀಕ್ಷೆಗಳು ನಿಜವಾಗಿಯೂ ಅಗತ್ಯವೇ? ಇದರಿಂದ ಮಕ್ಕಳ ಮನಸ್ಸಿನಲ್ಲಿ ಭಯ, ಆತಂಕ, ಒತ್ತಡ ಉಂಟಾಗಿ ಕಲಿಯುವುದಕ್ಕಿಂತ ಉರುಹೊಡೆಯುವುದು, ಗಿಳಿಪಾಠ ಒಪ್ಪಿಸುವುದು, ಬರೆದದ್ದನ್ನೇ ಮತ್ತೆ ಮತ್ತೆ ಬರೆದು ತಲೆಚಿಟ್ಟುಹಿಡಿಸಿಕೊಂಡು ಕಲಿಕೆಯೆಂದರೇನೇ ರೇಜಿಗೆಗೆ ಒಳಗಾಗುವುದು ಸಹಜ.

'ತೆರೆದ ಪುಸ್ತಕ ಮೌಲ್ಯಾಂಕನ' ಕೇಂದ್ರೀಯ ಶಿಕ್ಷಣ ಸಂಸ್ಥೆಗಳಲ್ಲಿ ಜಾರಿಯಾಗುತ್ತಿದೆ. ಪರೀಕ್ಷೆಯ ಪ್ರಶ್ನೆಗಳನ್ನು 'ಅತಿಮುಖ್ಯ (ಇಂಪಾರ್ಟೆಂಟ್)' ಎಂದು ಮೊದಲೇ ಬರೆಸಿ, ಅದಕ್ಕೆ ಉತ್ತರಗಳನ್ನು ಉರುಹೊಡೆಸಿಕೊಂಡು, ಉತ್ತರ ಬರೆಸಿ, ಉತ್ತಮ ಫಲಿತಾಂಶ ನೀಡುತ್ತಿರುವ ಹಲವು ಖಾಸಗಿ ಶಾಲೆಗಳ ಶಿಕ್ಷಕರಿಗೆ ಇದು 'ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟAತೆ,' ಆಗುತ್ತದೆ!

ಇದೇ 2024-25ರ ಶೈಕ್ಷಣಿಕ ವರ್ಷದ ನವೆಂಬರ್-ಡಿಸೆಂಬರ್‌ನಲ್ಲಿ ಸಿ.ಬಿ.ಎಸ್.ಸಿ.ಯು 9 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗಾಗಿ 'ತೆರೆದ ಪುಸ್ತಕ ಪರೀಕ್ಷೆ ನಡೆಸಲು ಪೈಲಟ್ ಪ್ರಾಜೆಕ್ಟ್ ಹಾಕಿಕೊಂಡಿದೆ. 9 ಮತ್ತು 10ನೇ ತರಗತಿಯ ಮಕ್ಕಳಿಗೆ ಇಂಗ್ಲಿಷ್, ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲೂ, 11 ಮತ್ತು 12 ನೇ ತರಗತಿಯ ಮಕ್ಕಳಿಗೆ ಗಣಿತ ಮತ್ತು ಜೀವಶಾಸ್ತ್ರ ವಿಷಯಗಳಲ್ಲೂ ಈ ಪುಸ್ತಕ ನೋಡಿ ಉತ್ತರ ಬರೆಯುವ ಪರೀಕ್ಷೆಗಳನ್ನು ಪ್ರಾಯೋಗಿಕವಾಗಿ ನಡೆಸಲಿದೆ.

ಏನಿದು ತೆರೆದ ಪುಸ್ತಕ ಪರೀಕ್ಷೆ? (Open Book Exam - OBE)

ಪರೀಕ್ಷೆಯ ಪತ್ರಿಕೆಗಳಲ್ಲಿನ ಪ್ರಶ್ನೆಗಳಿಗೆ ಪುಸ್ತಕ ಮತ್ತು ಅಧ್ಯಯನ ಸಾಮಗ್ರಿ (ನೋಟ್ಸ್) ನೋಡಿಕೊಂಡು, ಅರ್ಥಮಾಡಿಕೊಂಡು, ಸ್ವಂತ ವಾಕ್ಯಗಳಲ್ಲಿ ಉತ್ತರ ಬರೆಯಲು ಕೊಡಲಾದ ಅವಕಾಶ ಇದಾಗಿದೆ. ಇದರಲ್ಲಿ ಎರಡು ವಿಧಗಳಿವೆ:

1. **ನಿರ್ಬಂಧಿತ ತೆರೆದ ಪುಸ್ತಕ ಮೌಲ್ಯಮಾಪನ (Restricted open book assessment)**
   ಇದರಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಪ್ರಾಧಿಕಾರ ಅಂಗೀಕರಿಸಿದ ಪಠ್ಯಪುಸ್ತಕ ಅಥವಾ ಅಧ್ಯಯನ ಸಾಮಗ್ರಿ (ನೋಟ್ಸ್) ನೋಡಿ ಉತ್ತರ ಬರೆಯುವ ಅವಕಾಶವಿರುತ್ತದೆ.
2. **ಅನಿರ್ಬಂಧಿತ ತೆರೆದ ಪುಸ್ತಕ ಮೌಲ್ಯಮಾಪನ (Free type open book assessment) : ಇದರಲ್ಲಿ ವಿದ್ಯಾರ್ಥಿಗಳು ತಮಗೆ ಸೂಕ್ತಕಂಡ ಪುಸ್ತಕ ಅಥವಾ ಅಭ್ಯಾಸ ಟಿಪ್ಪಣಿಗಳನ್ನು ತಂದು, ನೋಡಿಕೊಂಡು, ಉತ್ತರಿಸಲು ಅವಕಾಶವಿರುತ್ತದೆ.**

ಇದೇನೂ ಹೊಸತಲ್ಲ ಬಿಡಿ!

ಈ ತೆರೆದ ಪುಸ್ತಕ ಮೌಲ್ಯಾಂಕನ ಅಥವಾ ಪರೀಕ್ಷೆಯ ಚಿಂತನೆ ಭಾರತಕ್ಕೆ ಹೊಸತೇನೂ ಅಲ್ಲ. 2014ರಲ್ಲಿ ಸಿ.ಬಿ.ಎಸ್.ಸಿ.ಯು 9ನೇ ತರಗತಿಯ ಹಿಂದಿ, ಇಂಗ್ಲಿಷ್, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ವಿಷಯಗಳಿಗೆ ಮತ್ತು 11ನೇ ತರಗತಿಯ ಅರ್ಥಶಾಸ್ತ್ರ, ಜೀವಶಾಸ್ತ್ರ ಮತ್ತು ಭೂಗೋಳಶಾಸ್ತ್ರ ವಿಷಯಗಳಿಗಾಗಿ 'ತೆರೆದ ಪಠ್ಯಪುಸ್ತಕ ಆಧಾರಿತ ಮೌಲ್ಯಾಂಕನ' ಜಾರಿಗೊಳಿಸಿತ್ತು. ಕಂಠಪಾಠ ಮಾಡುವುದು, ನೆನಪಿನಲ್ಲಿ ಇಟ್ಟುಕೊಂಡು ಬರೆಯುವುದು ಮಕ್ಕಳಿಗೆ ತೀವ್ರತರ ಒತ್ತಡ ಉಂಟುಮಾಡುತ್ತದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಮತ್ತು ಕೌಶಲಗಳನ್ನು ಕಲಿಯಲು ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಈ ಮೌಲ್ಯಾಂಕನವನ್ನು ಪರಿಚಯಿಸಲಾಗಿತ್ತು. ಆದರೆ ಇದು ನಿರೀಕ್ಷಿತ ಫಲಿತಾಂಶವನ್ನು ನೀಡುವಲ್ಲಿ ಅಷ್ಟೇನೂ ಯಶಸ್ವಿ ಆಗಲಿಲ್ಲ ಮತ್ತು ಸೃಜನಾತ್ಮಕ ಚಿಂತನೆ ಮತ್ತು ಕಲಿಕೆಯನ್ನು ಉತ್ತೇಜಿಸುವಲ್ಲಿ ಅಸಫಲವಾಗಿತ್ತು ಎಂಬ ಫಲಿತಾಂಶದ ಆಧಾರದಲ್ಲಿ 2017-18ನೇ ಸಾಲಿನಿಂದ ಇದನ್ನು ಹಿಂಪಡೆಯಲಾಗಿತ್ತು.

2019ರಲ್ಲಿ ಉನ್ನತ ಮಟ್ಟದ ಶೈಕ್ಷಣಿಕ ಮಂಡಳಿಯ ಶಿಫಾರಸ್ಸಿನ ಅನುಸಾರ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ತೆರೆದ ಪುಸ್ತಕ ಮೌಲ್ಯಾಂಕನವನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿತ್ತು. 2021ರಲ್ಲಿ ದೆಹಲಿ ವಿಶ್ವವಿದ್ಯಾಲಯದಲ್ಲಿ ನಡೆಸಲಾದ ತೆರೆದ ಪುಸ್ತಕ ಮೌಲ್ಯಾಂಕನ ಫಲಿತಾಂಶ ಗಮನಿಸಿದರೆ ಹೆಚ್ಚು ವಿದ್ಯಾರ್ಥಿಗಳು ತೇರ್ಗಡೆಯಾದರೂ ಕೌಶಲ್ಯಾಧಾರಿತ ಕಲಿಕೆಯಲ್ಲಿ ಹಿಂದುಳಿದರು. 2020 - 21ರ ಕೋವಿಡ್ ಸಾಂಕ್ರಾಮಿಕದ ಲಾಕ್‌ಡೌನ್ ಸಂದರ್ಭದಲ್ಲಿ ಕೆಲವು ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ, ಜಾಮಿಯಾ ಮಿಲಿಯಾ ಇಸ್ಲಾಮಿಯಾ ವಿ.ವಿ., ಜವಾಹರಲಾಲ್ ನೆಹರೂ ವಿ.ವಿ., ಅಲಿಗಡ ಮುಸ್ಲಿಂ ವಿ.ವಿ., ದೆಹಲಿ, ಇಂದೋರ್ ಮತ್ತು ಮುಂಬೈಗಳಲ್ಲಿನ ಐಐಟಿಗಳಲ್ಲಿ ಈ ತೆರೆದ ಪುಸ್ತಕ ಮೌಲ್ಯಾಂಕವನ್ನು ಜಾರಿಗೊಳಿಸಲಾಗಿತ್ತು.

ತೆರೆದ ಪುಸ್ತಕ ಮೌಲ್ಯಾಂಕನ ಅಗತ್ಯವೇ?

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಅನ್ವಯ ಕ್ರಿಯಾತ್ಮಕ ಮತ್ತು ಸೃಜನಶೀಲ ಕಲಿಕೆಯನ್ನು ಉತ್ತೇಜಿಸಲು, ಪರೀಕ್ಷಾ ಭಯ ಹೋಗಲಾಡಿಸಿ ಸಂತಸ ಕಲಿಕೆಯ ಮೂಲಕ ನಿರಂತರ ಮೌಲ್ಯಮಾಪನ ನಡೆಸಲು ಈ ತೆರೆದ ಪುಸ್ತಕ ಮೌಲ್ಯಾಂಕನವನ್ನು ಸಿ.ಬಿ.ಎಸ್.ಸಿ. ಜಾರಿಗೊಳಿಸಲಿದೆ. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಹೊಸತನ್ನು ಕಲಿಯುವ ಉತ್ಸಾಹವನ್ನು ಮಕ್ಕಳಲ್ಲಿ ಉತ್ತೇಜಿಸಲು ಈ ತೆರೆದ ಪುಸ್ತಕ ಮೌಲ್ಯಾಂಕನವನ್ನು ಜಾರಿಗೊಳಿಸಲು ತೀರ್ಮಾನಿಸಲಾಗಿದೆ.

ಬೆಂಜಮಿನ್ ಬ್ಲೂಮ್ ರೂಪಿಸಿದ 'ಬ್ಲೂಮ್ಸ್ ಟ್ಯಾಕ್ಸಾನಮಿ' ಎಂಬ ಕಲಿಕಾ ವಿಶ್ಲೇಷಣಾ ವಿಂಗಡಣಾ ವಿಧಾನದ ಅನ್ವಯ ಮಕ್ಕಳಿಗೆ ಅರ್ಥವಾಗುವಂತೆ ಬೋಧಿಸುವುದರ ಜೊತೆಗೆ ಕಲಿಕಾಂಶಗಳನ್ನು ನಿಜಜೀವನದಲ್ಲಿ ಯಶಸ್ವಿಯಾಗಿ ಅಳವಡಿಸುವುದರ ಕುರಿತು ಅರಿವು ಮೂಡಿಸಬೇಕು ಮತ್ತು ಬೌದ್ಧಿಕ ವಿಕಾಸದ ಜೊತೆ ಕ್ರಿಯಾತ್ಮಕ ಅಭಿವ್ಯಕ್ತಿಗೂ ಅವಕಾಶ ನೀಡಬೇಕು. ಇದರ ಸಾಕಾರ ತೆರೆದ ಪುಸ್ತಕ ಮೌಲ್ಯಾಂಕನದಿಂದ ಸಾಧ್ಯ. ಅದಕ್ಕಾಗಿ 1950ರ ದಶಕದಲ್ಲಿಯೇ ತಿಳಿಸಲಾಗಿದ್ದ ಈ ವಿಧಾನ ಈಗ ಜಾರಿಯಾಗುತ್ತಿದೆ!

ತೆರೆದ ಪುಸ್ತಕ ಮೌಲ್ಯಾಂಕನದ ಲಾಭಗಳೇನು?

ಪಠ್ಯಪುಸ್ತಕದಲ್ಲಿ ಮುದ್ರಿಸಿರುವುದನ್ನು ಉರುಹಚ್ಚಿ, ಗಿಳಿಪಾಠ ಒಪ್ಪಿಸುವ ವಿಧಾನವನ್ನು ಬದಲಿಸಿ ಮೂಲಾಂಶಗಳನ್ನು ಅರ್ಥಮಾಡಿಕೊಳ್ಳಲು, ಕೌಶಲಗಳನ್ನು ವರ್ಧಿಸಿಕೊಳ್ಳಲು ಮತ್ತು ಸ್ವಯಂ ಕಲಿಕೆ ಉತ್ತೇಜಿಸಲು ಈ ವಿಧಾನ ಸಹಕಾರಿ. ಪಠ್ಯಕ್ರಮದಲ್ಲಿರುವ ಅಂಶಗಳನ್ನು ನಿಜ ಜೀವನದಲ್ಲಿ ಅಳವಡಿಸಿಕೊಳ್ಳಲು ಹೇಗೆ ಸಾಧ್ಯ, ಜೀವನ ಕೌಶಲಗಳ ಕಲಿಕೆಗೆ ಪಠ್ಯಪೂರಕ ಅಂಶಗಳು ಹೇಗೆ ಸಹಕಾರಿ, ತಾರ್ಕಿಕ ಆಲೋಚನೆ, ಸೃಜನಶೀಲ ಕಲಿಕೆ, ಬೌದ್ಧಿಕ ವಿಕಸನ ಹೇಗೆ ಸಾಧ್ಯವಾಗುವುದು ಎಂಬುದನ್ನು ವಿದ್ಯಾರ್ಥಿಗಳು ಸ್ವಂತವಾಗಿ ತಿಳಿದುಕೊಳ್ಳಲು ಅವಕಾಶವಿದೆ.

ಟ್ಯೂಷನ್ ಹಾವಳಿ ತಪ್ಪಿಸಲು, ಪಠ್ಯಪುಸ್ತಕದಲ್ಲಿರುವುದನ್ನು ಮತ್ತೆ ಮತ್ತೆ ಉರುಹಚ್ಚುವುದರ ಬದಲು ಸ್ವತಂತ್ರವಾಗಿ ವಿಷಯ ಅರ್ಥಮಾಡಿಕೊಂಡು ಪರೀಕ್ಷೆಗಳನ್ನು ಯಾವುದೇ ಭಯವಿಲ್ಲದೆ ಎದುರಿಸಲು ಈ ತೆರೆದ ಪುಸ್ತಕ ಮೌಲ್ಯಾಂಕನ ಸಹಕಾರಿ. ಇದು ವಿದ್ಯಾರ್ಥಿಗಳಲ್ಲಿ ಆತಂಕವನ್ನು ಕಡಿಮೆ ಮಾಡಿ, ಆತ್ಮವಿಶ್ವಾಸದಿಂದ ತಲೆ ಎತ್ತಿ ನಿಲ್ಲಲು ಮತ್ತು ನಿರ್ವಹಣಾ ಕೌಶಲಗಳನ್ನು ಕಲಿತುಕೊಳ್ಳಲು ಅನುವು ಮಾಡಿಕೊಡುತ್ತದೆ ಎಂದು 2021ರಲ್ಲಿ ಭುವನೇಶ್ವರದಲ್ಲಿನ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ನಡೆಸಿದ ಅಧ್ಯಯನದ ವರದಿ ತಿಳಿಸಿದೆ.

2020ರಲ್ಲಿ ಕೇಂಬ್ರಿಜ್ ವಿಶ್ವವಿದ್ಯಾಲಯವು ಪ್ರಕಟಿಸಿದ ಸಂಶೋಧನಾ ವರದಿಯಲ್ಲಿ ಉಲ್ಲೇಖಿಸಿರುವಂತೆ ತೆರೆದ ಪುಸ್ತಕ ಮೌಲ್ಯಾಂಕನಕ್ಕಾಗಿ ಆಯ್ದ ವಿದ್ಯಾರ್ಥಿಗಳಲ್ಲಿ 78.6% ರಷ್ಟು ಮಂದಿ ತೇರ್ಗಡೆಯಾದರೆ 21.4% ರಷ್ಟು ಮಂದಿ ಫೇಲ್ ಆದರು. 55% ರಷ್ಟು ವಿದ್ಯಾರ್ಥಿಗಳ ಅಭಿಪ್ರಾಯದಲ್ಲಿ ಇದು ಆತಂಕವನ್ನು ಕಡಿಮೆ ಮಾಡುವುದು ಹಾಗೂ ಒತ್ತಡ ಇಲ್ಲದೆ ಸಂತೋಷವಾಗಿ ಕಲಿಯಲು ಪ್ರೇರೇಪಿಸುವಂಥ ವಿಧಾನವಾಗಿದೆ.

ಸಂಪನ್ಮೂಲ ಸಾಮಗ್ರಿ ಅಂದರೆ ಪಠ್ಯಪುಸ್ತಕ ಅಥವಾ ಪಠ್ಯಪೂರಕ ಅಧ್ಯಯನ ಸಾಮಗ್ರಿಯ (ನೋಟ್ಸ್) ಸಮರ್ಪಕ ಬಳಕೆ ಮತ್ತು ನಿರ್ವಹಣಾ ಕೌಶಲ ಕಲಿಯಲು ಈ ತೆರೆದ ಪುಸ್ತಕ ಮೌಲ್ಯಾಂಕನ ಸಹಕಾರಿಯಾಗಿದೆ. ಪಠ್ಯಪುಸ್ತಕದ ಯಾವ ಭಾಗದಲ್ಲಿ ಉತ್ತರ ಲಭ್ಯವಿದೆ ಮತ್ತು ಅದನ್ನು ಬಳಸಿಕೊಂಡು ಸ್ವಂತ ವಾಕ್ಯಗಳಲ್ಲಿ ಹೇಗೆ ಉತ್ತರಿಸಬೇಕು ಎಂಬುದನ್ನು ವಿದ್ಯಾರ್ಥಿಗಳು ಬೇಗನೇ ಅರ್ಥಮಾಡಿಕೊಂಡು ಉತ್ತರಿಸುತ್ತಾರೆ. ಪರೀಕ್ಷಾ ಭಯ ಮತ್ತು ಪರೀಕ್ಷೆಯ ಒತ್ತಡ ನಿವಾರಣೆಗೆ ಇದು ಸಿದ್ಧಸೂತ್ರ.

ವಿದ್ಯಾರ್ಥಿ ವೇತನ ಕೈಪಿಡಿ

ಎಫ್‌ಎಇಎ ಸ್ಕಾಲರ್‌ಶಿಪ್

- **ವಿವರ:** ಯಾವುದೇ ಭಾರತೀಯ ಸಂಸ್ಥೆಯಲ್ಲಿ ಕಲೆ, ವಾಣಿಜ್ಯ, ವಿಜ್ಞಾನ, ಎಂಜಿನಿಯರಿಂಗ್ ಅಥವಾ ಇತರ ತಂತ್ರಜ್ಞಾನ ಮತ್ತು ವೃತ್ತಿಪರ ಕ್ಷೇತ್ರದಲ್ಲಿ ಪದವಿ ಅಧ್ಯಯನ ಮಾಡುತ್ತಿರುವ 12ನೇ ತರಗತಿಯಲ್ಲಿ ಉತ್ತೀರ್ಣರಾಗಿರುವ ಅಥವಾ ಮೊದಲ ವರ್ಷದ ಪದವಿಪೂರ್ವ ವಿದ್ಯಾರ್ಥಿಗಳಿಗೆ ಫೌಂಡೇಷನ್ ಫಾರ್ ಅಕಾಡೆಮಿಕ್ ಎಕ್ಸಲೆನ್ಸ್ ಅಂಡ್ ಆಕ್ಸೆಸ್ (ಎಫ್‌ಎಇಎ) ನೀಡುವ ಅವಕಾಶವಾಗಿದೆ.
- **ಅರ್ಹತೆ:** ಭಾರತದ ಯಾವುದೇ ಮಾನ್ಯ ವಿಶ್ವವಿದ್ಯಾಲಯ, ಸಂಸ್ಥೆ ಅಥವಾ ಕಾಲೇಜಿನಲ್ಲಿ ಕಲೆ, ವಾಣಿಜ್ಯ, ವಿಜ್ಞಾನ, ವೈದ್ಯಕೀಯ, ಎಂಜಿನಿಯರಿಂಗ್ ಅಥವಾ ಇತರ ತಂತ್ರಜ್ಞಾನ ಮತ್ತು ವೃತ್ತಿಪರ ಕ್ಷೇತ್ರದಲ್ಲಿ 12ನೇ ತರಗತಿಯಲ್ಲಿ ಅಥವಾ ಮೊದಲ ವರ್ಷದ ಪದವಿಪೂರ್ವ ವಿದ್ಯಾರ್ಥಿಗಳಿಗೆ ಲಭ್ಯವಿದೆ. ಅಭ್ಯರ್ಥಿಗಳು ಎಸ್‌ಸಿ, ಎಸ್‌ಟಿ, ಒಬಿಸಿ ಅಥವಾ ಬಿಪಿಎಲ್ ಎಂದು ವರ್ಗೀಕರಿಸಲ್ಪಟ್ಟ ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ಸಮಾಜಕ್ಕೆ ಸೇರಿದವರಾಗಿರಬೇಕು.
- **ಆರ್ಥಿಕ ಸಹಾಯ:** ಬೋಧನಾ ಶುಲ್ಕಗಳು, ನಿರ್ವಹಣೆ ಭತ್ಯೆ ಅಥವಾ ಹಾಸ್ಟೆಲ್/ಮೆಸ್ ಶುಲ್ಕಗಳು ಮತ್ತು ಇತರ ಭತ್ಯೆಗಳು
- **ಅರ್ಜಿ ಸಲ್ಲಿಸಲು ಕೊನೆ ದಿನ:** 30-06-2024
  ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನಲ್ಲಿ ಅರ್ಜಿ ಹಾಕಿ.
- **ಹೆಚ್ಚಿನ ಮಾಹಿತಿಗೆ:**
  Short Url: www.b4s.in/praja/FAEA2



❦ ಸುಭಾಷಿತ ❦

ವಾರದಲ್ಲಿ ಮೂರು ದಿನಗಳಾದರೂ ನಗುತ್ತಾ ಇರಬೇಕು; ನಿನ್ನೆ, ಇವತ್ತು ಮತ್ತು ನಾಳೆ.

-ಬೀಚಿ

ಹಂಗಾಮಿ ಸ್ಪೀಕರ್ ಆಯ್ಕೆ: ಸದನದ ಸಂಪ್ರದಾಯ ಕಡೆಗಣಿಸುವುದು ಸರಿಯಲ್ಲ

ಹದಿನೆಂಟನೇ ಲೋಕಸಭೆಯ ಮೊದಲ ಅಧಿವೇಶನವೇ ಸಂಘರ್ಷಾತ್ಮಕವಾಗಿ ಇರಬಹುದು ಎಂಬುದರ ಸುಳಿವು ಹೊರಬಿದ್ದಿದೆ. ಹಂಗಾಮಿ ಸ್ಪೀಕರ್ ಆಗಿ ಕಾಂಗ್ರೆಸ್ ಪಕ್ಷದ ಕೊಡಿಕುನ್ನಿಲ್ ಸುರೇಶ್ ಅವರ ಬದಲಿಗೆ ಬಿಜೆಪಿಯ ಭರ್ತೃಹರಿ ಮಹತಾಬ್ ಅವರನ್ನು ನೇಮಿಸಿರುವುದಕ್ಕೆ ಆಕ್ಷೇಪ ವ್ಯಕ್ತವಾಗಿದೆ. ಸುರೇಶ್ ಅವರು ಲೋಕಸಭೆಯ ಅತ್ಯಂತ ಹಿರಿಯ ಸದಸ್ಯ. ಅವರು ಎಂಟನೇ ಅವಧಿಗೆ ಸದಸ್ಯರಾಗಿದ್ದಾರೆ. ಮಹತಾಬ್ ಅವರದ್ದು ಇದು ಏಳನೇ ಅವಧಿ. ಯಾವುದೇ ಪಕ್ಷದವರು ಆಗಿರಲಿ, ಅತ್ಯಂತ ಹಿರಿಯ ಸದಸ್ಯರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸುವುದು ಸಂಪ್ರದಾಯ. ಸಂಸದರಿಗೆ ಪ್ರತಿಜ್ಞಾವಿಧಿ ಬೋಧಿಸುವುದು ಮತ್ತು ಸ್ಪೀಕರ್ ಆಯ್ಕೆ ಪ್ರಕ್ರಿಯೆಯನ್ನು ನಡೆಸಿಕೊಡುವುದು ಹಂಗಾಮಿ ಸ್ಪೀಕರ್ ಅವರ ಹೊಣೆಗಾರಿಕೆ. ಹಂಗಾಮಿ ಸ್ಪೀಕರ್ ಎಂಬುದು ತಾತ್ಕಾಲಿಕ ಹುದ್ದೆ ಮತ್ತು ಸಾಮಾನ್ಯವಾಗಿ ಅವರ ಅಧಿಕಾರಾವಧಿಯು ಮೂರು ದಿನಕ್ಕೆ ಮುಗಿದುಹೋಗುತ್ತದೆ. ಅತ್ಯಂತ ಹಿರಿಯ ಸದಸ್ಯರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸುವುದು ಔಚಿತ್ಯಪೂರ್ಣ. ಯಾವುದೇ ವಿವಾದಾತ್ಮಕ ತೀರ್ಮಾನಗಳನ್ನು ಕೈಗೊಳ್ಳುವ ಅಥವಾ ಆದೇಶ ನೀಡುವ ಅವಕಾಶ ಹಂಗಾಮಿ ಸ್ಪೀಕರ್‌ಗೆ ಇಲ್ಲ. ಹೊಸ ಸ್ಪೀಕರ್ ಆಯ್ಕೆಯೊಂದಿಗೆ ಹಂಗಾಮಿ ಸ್ಪೀಕರ್ ಅಧಿಕಾರ ಕೊನೆಗೊಳ್ಳುತ್ತದೆ.

ಸರ್ಕಾರವು ವಿಚಿತ್ರ ಮತ್ತು ಸ್ವೀಕಾರಾರ್ಹವಲ್ಲದ ಸಮರ್ಥನೆಯನ್ನು ಮುಂದಿಟ್ಟು ಮಹತಾಬ್ ಅವರ ನೇಮಕವನ್ನು ಸಮರ್ಥಿಸಿಕೊಂಡಿದೆ. ಮಹತಾಬ್ ಅವರು ಸತತ ಏಳು ಅವಧಿಗೆ ಸಂಸದರಾಗಿದ್ದಾರೆ. ಆದರೆ, ಸುರೇಶ್ ಅವರು ನಿರಂತರವಾಗಿ ಎಂಟು ಅವಧಿಗೆ ಸಂಸದರಾಗಿರಲಿಲ್ಲ, ಮಧ್ಯದಲ್ಲಿ ಎರಡು ಬಾರಿ ಅವರು ಸಂಸದರಾಗಿ ಇರಲಿಲ್ಲ ಎಂಬುದು ಸರ್ಕಾರದ ಸಮರ್ಥನೆಯಾಗಿದೆ. ಈ ಸಮರ್ಥನೆಯಲ್ಲಿ ಹುರುಳಿಲ್ಲ. ಏಕೆಂದರೆ, ಅತಿ ದೀರ್ಘಕಾಲ ಸಂಸದರಾಗಿ ಅನುಭವ ಹೊಂದಿರುವ ಸದಸ್ಯರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸುವುದು ಪದ್ಧತಿಯಾಗಿದೆ. ಮೇನಕಾ ಗಾಂಧಿ ಅವರ ಹೆಸರನ್ನು ಹಂಗಾಮಿ ಸ್ಪೀಕರ್ ಹುದ್ದೆಗೆ 2019ರಲ್ಲಿ ಬಿಜೆಪಿ ಪ್ರಸ್ತಾಪಿಸಿತ್ತು. ಅವರು ಕೂಡ ನಿರಂತರವಾಗಿ ಸಂಸದೆಯಾಗಿ ಇದ್ದವರಲ್ಲ. ಮಹತಾಬ್ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸಿರುವುದು ಪ್ರಜ್ಞಾಪೂರ್ವಕವಾದ ನಿರ್ಧಾರ ಎಂಬುದರಲ್ಲಿ ಸಂದೇಹ ಇಲ್ಲ. ಈ ಬಾರಿ ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಪ್ರಾಬಲ್ಯ ಹೆಚ್ಚಾಗಿದೆ. ಹಾಗಿದ್ದರೂ ವಿರೋಧ ಪಕ್ಷಗಳಿಗೆ ಯಾವುದೇ ಮನ್ನಣೆ ಕೊಡುವ ಮನಸ್ಥಿತಿಯಲ್ಲಿ ಸರ್ಕಾರ ಇಲ್ಲ ಎಂಬುದನ್ನು ತೋರಿಸುವುದು ಈ ನಿರ್ಧಾರದ ಹಿಂದಿನ ಉದ್ದೇಶ. ಇದು ಒಂದು ರಾಜಕೀಯ ಸಂದೇಶ. ಸುರೇಶ್ ಅವರು ದಲಿತ ಎಂಬ ಕಾರಣಕ್ಕೆ ಅವರಿಗೆ ಈ ಅವಕಾಶವನ್ನು ನಿರಾಕರಿಸಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಇದು ಕೂಡ ರಾಜಕೀಯವಾದ ಆರೋಪವೇ ಆಗಿದೆ.



ವಿರೋಧ ಪಕ್ಷಗಳಿಗೆ ಯಾವುದೇ ಮನ್ನಣೆ ಕೊಡುವ ಮನಸ್ಥಿತಿಯಲ್ಲಿ ತಾನು ಇಲ್ಲ ಎಂಬುದನ್ನು ತೋರಿಸುವುದು ಸರ್ಕಾರದ ಉದ್ದೇಶವಾಗಿದೆ

ಟೀಕಾಕಾರರು, ಭಿನ್ನಮತೀಯರು ಮತ್ತು ವಿರೋಧ ಪಕ್ಷಗಳ ನಾಯಕರ ಕುರಿತು ತನ್ನ ಕಠಿಣ ನಿಲುವು ಮುಂದುವರಿಯಲಿದೆ ಎಂಬ ಸಂದೇಶವನ್ನು ಸರ್ಕಾರ ನೀಡಿದೆ. ಲೇಖಕಿ ಅರುಂಧತಿ ರಾಯ್ ಅವರ ವಿರುದ್ಧ ವಿಚಾರಣೆಗೆ ನೀಡಿದ ಅನುಮತಿ, ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಜಾಮೀನಿಗೆ ಜಾರಿ ನಿರ್ದೇಶನಾಲಯವು ಒಡ್ಡಿದ ವಿರೋಧ ಈ ಅಂಶವನ್ನು ದೃಢಪಡಿಸುತ್ತವೆ. ಸಂಸತ್ತಿನಲ್ಲಿ ಕೂಡ ವಿರೋಧ ಪಕ್ಷಗಳ ಕುರಿತು ಹಗೆತನದ ನೀತಿಯನ್ನು ಸರ್ಕಾರ ಅನುಸರಿಸುತ್ತಿರುವುದು ದುರದೃಷ್ಟಕರ. 17ನೇ ಲೋಕಸಭೆಯಲ್ಲಿ ವಿರೋಧ ಪಕ್ಷಗಳ ಸದಸ್ಯರ ಅಮಾನತು, ಉಚ್ಚಾಟನೆ ಮತ್ತು ಅನರ್ಹತೆ ಎಲ್ಲದರ ನಡೆದಿತ್ತು. ಆಡಳಿತ ಪಕ್ಷ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ತೀವ್ರವಾದ ವಾಗ್ವಾದಗಳು ನಡೆದಿದ್ದವು. ಸರ್ಕಾರದ ಬಿಗಿ ಹಿಡಿತದಿಂದಾಗಿ ಫಲಪ್ರದವಾದ ಸಂವಾದ ನಡೆದಿರಲಿಲ್ಲ. ಶಾಸನ ರೂಪಿಸುವಿಕೆಯೂ ಪರಿಣಾಮಕಾರಿಯಾಗಿ ನಡೆಯಲಿಲ್ಲ. ಲೋಕಸಭೆಯಲ್ಲಿ ಉಪ ಸ್ಪೀಕರ್ ಇರಬೇಕು ಎಂಬುದು ಸಾಂವಿಧಾನಿಕ ಅಗತ್ಯ. ಆದರೆ, ಕಳೆದ ಲೋಕಸಭೆಯಲ್ಲಿ ಉಪ ಸ್ಪೀಕರ್ ಆಯ್ಕೆಯನ್ನೇ ಮಾಡಲಿಲ್ಲ. ಈ ಬಾರಿಯ ಲೋಕಸಭೆ ಹೆಚ್ಚು ಫಲಪ್ರದವಾದ ಕೆಲಸ ಮಾಡಬಹುದು ಎಂಬ ಭರವಸೆ ಇದೆ. ಹಂಗಾಮಿ ಸ್ಪೀಕರ್‌ಗೆ ನೆರವಾಗಲು ರೂಪಿಸಲಾದ ಸಹಾಯಕರ ಸಮಿತಿಯಲ್ಲಿರುವ ವಿರೋಧ ಪಕ್ಷದ ಸದಸ್ಯರು ತಮ್ಮ ಕರ್ತವ್ಯವನ್ನು ನಿರ್ವಹಿಸದಿರಲು ನಿರ್ಧರಿಸಿದ್ದಾರೆ. ಸುರೇಶ್ ಅವರನ್ನು ಕಡೆಗಣಿಸಿರುವುದಕ್ಕೆ ಇದು ಪ್ರತಿಭಟನೆ. ಪರಿಸ್ಥಿತಿ ಇನ್ನಷ್ಟು ತೀಕ್ಷ್ಣಗೊಳ್ಳುವ ಸುಳಿವುಗಳು ಕಾಣಿಸಿಕೊಂಡಿವೆ.

ದಿನದ ಟ್ವೀಟ್

ಶಿಕ್ಷಣವೋ ವ್ಯಾಪಾರವೋ?


ಭಾರತದಲ್ಲಿ ಶಿಕ್ಷಣ ಎಂಬುದು ವ್ಯಾಪಾರವಾಗಿದೆ; ಸರ್ಕಾರ ಕೂಡ ಇದರ ಮೇಲೆ ಶೇಕಡ 18ರಷ್ಟು ಜಿಎಸ್‌ಟಿ ವಿಧಿಸುತ್ತಿದೆ.



ರವಿ ಪಟೇಲ್, ಎ.ಐ.ಸಿ. ಪರಿಷತ್

ಕಿಡಿನುಡಿ

ವಿದ್ಯಾರ್ಥಿಗಳ ಜೀವನದೊಂದಿಗೆ ಪೋಕರ್ ಆಟ ಆಡುವುದನ್ನು ನಿಲ್ಲಿಸಿ: ಜೂನ್ 4: ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ; ಜೂನ್ 19: ಯುಜಿಸಿ–ನೆಟ್ ರದ್ದು; ಜೂನ್ 21– ಜಂಟಿ ಸಿಎಸ್‌ಐಆರ್–ಯುಜಿಸಿ–ನೆಟ್ ಮುಂದೂಡಿಕೆ; ಜೂನ್ 22– ನೀಟ್–ಪಿಜಿ ಮುಂದೂಡಿಕೆ



ಕಪಿಲ್ ಸಿಬಲ್, ವಕೀಲ, ರಾಜ್ಯಸಭಾ ಸದಸ್ಯ

25 ವರ್ಷಗಳ ಹಿಂದೆ

ಗುರುವಾರ, 24-6-1999

● **ಯುದ್ಧ ಸ್ಥಿತಿ ಎದುರಿಸಲು ಭಾರತ ಸಿದ್ಧ**

ನವದೆಹಲಿ, ಜೂನ್ 23– ಯುದ್ಧ ಮಾಡಲೇಬೇಕೆನ್ನುವ ಪರಿಸ್ಥಿತಿ ಎದುರಾದರೆ, ನಾವು ಅದಕ್ಕೆ ಸಿದ್ಧರಾಗಿದ್ದೇವೆ ಎಂದು ಸೇನಾಪಡೆಯ ಮುಖ್ಯಸ್ಥ ಜನರಲ್ ವಿ.ಪಿ. ಮಲ್ಲಿಕ್ ಇಂದು ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದರು.

ಭಾರತದ ಹಿತಾಸಕ್ತಿಯನ್ನು ಕಾಪಾಡುವ ಪ್ರಶ್ನೆ ಬಂದಾಗ ಮತ್ತು ಕಾರ್ಗಿಲ್‌ನಲ್ಲಿ ಪಾಕಿಸ್ತಾನ ಸೈನಿಕರು ಹಾಗೂ ಅತಿಕ್ರಮಣಕಾರರನ್ನು ಹಿಮ್ಮೆಟ್ಟಿಸುವಾಗ ಭಾರತದ ಸೇನೆಯು ಗಡಿ ನಿಯಂತ್ರಣ ರೇಖೆಯನ್ನು ಉಲ್ಲಂಘಿಸಬೇಕಾದ ಪರಿಸ್ಥಿತಿಯ ಬಗೆಗೆ ಕೇಂದ್ರ ಸಂಪುಟವು ಪರಿಶೀಲಿಸಲಿದೆ ಎಂದು ಅವರು ಹೇಳಿದರು.

● **ಕಾಯ್ದೆ ತಿದ್ದುಪಡಿ: ಸಹಕಾರ ಸಚಿವರ ರಾಜೀನಾಮೆಗೆ ಆಗ್ರಹಿಸಿ ಪ್ರತಿಪಕ್ಷ ಸಭಾತ್ಯಾಗ**

ಬೆಂಗಳೂರು, ಜೂನ್ 23– ರಾಜಕೀಯ ಲಾಭಕ್ಕಾಗಿ ಸಹಕಾರ ಸಂಘಗಳಿಗೆ ನಾಮಕರಣ ಮಾಡಲು ಸಹಕಾರಿ ಕಾಯ್ದೆಗೆ ಸುಗ್ರೀವಾಜ್ಞೆ ಮುಖಾಂತರ ತಿದ್ದುಪಡಿ ತಂದಿರುವುದರಿಂದ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕೆಂಬ ವಿರೋಧ ಪಕ್ಷಗಳ ಒತ್ತಾಯಕ್ಕೆ ಸಹಕಾರ ಸಚಿವರು ಮಣಿಯದಿದ್ದಾಗ, ಅದನ್ನು ಪ್ರತಿಭಟಿಸಿ ವಿರೋಧ ಪಕ್ಷಗಳ ಸದಸ್ಯರು ವಿಧಾನಸಭೆಯಲ್ಲಿ ಇಂದು ಸಭಾತ್ಯಾಗ ಮಾಡಿದರು.

ಸಹಕಾರ ತತ್ವ, ಸಿದ್ಧಾಂತಗಳಿಗೆ ಬದ್ಧರಾಗಿರುವ ತಾವು ಸಹಕಾರ ಸಂಘಗಳಿಗೆ ನಾಮಕರಣ ಮಾಡುವುದಕ್ಕೆ ವಿರೋಧ ಎಂದು ಹೇಳಿಕೊಳ್ಳುತ್ತಾ ಬಂದ ಹಿರಿಯ ಸಹಕಾರಿ ಧುರೀಣರಾದ ಸಹಕಾರ ಸಚಿವ ಎಸ್.ಎಸ್. ಪಾಟೀಲ ಅವರು ತಮ್ಮ ಪಕ್ಷಕ್ಕೆ ಬೇಕಾದವರನ್ನು ನಾಮಕರಣ ಮಾಡಲು ಸುಗ್ರೀವಾಜ್ಞೆ ಮುಖಾಂತರ ಕಾಯ್ದೆಗೆ ತಿದ್ದುಪಡಿ ತಂದಿರುವುದಕ್ಕೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡ ವಿರೋಧ ಪಕ್ಷಗಳ ಸದಸ್ಯರು, ನಿಲುವಳಿ ಸೂಚನೆ ಮಂಡನೆಯ ಪೂರ್ವಭಾವಿ ಪ್ರಸ್ತಾವದ ಮೂಲಕ ಸಚಿವರ ರಾಜೀನಾಮೆಗೆ ಒತ್ತಾಯಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 24-6-1974

● **ವ್ಯಾಧಿಗ್ರಸ್ತ ಭ್ರೂಣದ ಘಟ್ಟದಲ್ಲೇ ಶಸ್ತ್ರಚಿಕಿತ್ಸೆ**

ನ್ಯೂಯೋರ್ಕ್‌ಸಿಟಿ, ಕ್ಯಾಲಿಫೋರ್ನಿಯಾ, ಜೂನ್ 23– ತಾಯಿಯ ಗರ್ಭದಲ್ಲಿರುವ ಭ್ರೂಣದ ಹದನೇ ತಿಂಗಳ ಬೆಳವಣಿಗೆಯನ್ನು ವೈದ್ಯರು ಪರೀಕ್ಷಿಸಿ, ಭ್ರೂಣದಲ್ಲಿರುವ ರೋಗ, ದೋಷಗಳನ್ನು ಪತ್ತೆ ಹಚ್ಚಿ, ಮಗು ಹುಟ್ಟುವುದಕ್ಕೆ ಮೊದಲೇ ಶಸ್ತ್ರಚಿಕಿತ್ಸೆ ಮೂಲಕ ಈ ರೋಗಗಳನ್ನು ವಾಸಿ ಮಾಡುವರು!

ಇದು ಹಾಲಿವುಡ್‌ನ ಕಾಲ್ಪನಿಕ ವಿಜ್ಞಾನ ಕಾದಂಬರಿಕಾರರ ಊಹಾಪೋಹದಂತೆ ಕಾಣಿಸಬಹುದು. ಆದರೆ ಬಾಲ್ಟಿಮೋರ್‌ನಲ್ಲಿರುವ ಹಾರ್ವರ್ ಜನರಲ್ ಆಸ್ಪತ್ರೆಯಲ್ಲಿನ ವೈದ್ಯಕೀಯ ಚಲನಶಾಸ್ತ್ರ ವಿಭಾಗದ ಅಸೋಸಿಯೇಟ್ ಚೀಫ್ ಆಗಿರುವ ಡಾ. ಮೈಕೇಲ್‌ಕಾಬ್ಯಾಕ್ ಅವರ ಪ್ರಕಾರ, ಇದು ಸಾಧ್ಯವಾಗುವಂತೆ ಮಾಡುವ ಸಂಶೋಧನಾ ಕಾರ್ಯ ಈಗ ನಡೆಯುತ್ತಿದೆ.

● **ರಾಜ್ಯ ಮೆಡಿಕಲ್ ಕಾಲೇಜುಗಳ ಮುಖ್ಯ ಪರಿಶೀಲನೆಗೆ ತಜ್ಞರ ತಂಡ**

ಬೆಂಗಳೂರು, ಜೂನ್ 23– ಕರ್ನಾಟಕ ಮತ್ತು ಆಂಧ್ರದಲ್ಲಿ ಹಲವು ಮೆಡಿಕಲ್ ಕಾಲೇಜುಗಳ ಮಾನ್ಯತೆ ರದ್ದುಪಡಿಸಬೇಕೆಂದು ಇಂಡಿಯನ್ ಮೆಡಿಕಲ್ ಕೌನ್ಸಿಲ್ ಮಾಡಿದ್ದ ಶಿಫಾರಸನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿಲ್ಲ.

ಸಂಬಂಧಿಸಿದ ಕಾಲೇಜುಗಳಲ್ಲಿ ಇರುವ ಸೌಲಭ್ಯಗಳನ್ನು ಪರಿಶೀಲನೆ ಮಾಡಲು ಎರಡು ರಾಜ್ಯಗಳಿಗೂ ಪ್ರತ್ಯೇಕ ತಜ್ಞರ ತಂಡ ರಚಿಸಲಾಗಿದೆ. ತಂಡಗಳು ಒಂದು ವಾರದಲ್ಲಿ ಕರ್ನಾಟಕ ಮತ್ತು ಆಂಧ್ರದ ಕಾಲೇಜುಗಳಿಗೆ ಭೇಟಿ ನೀಡಿ ಬೇಗನೆ ವರದಿ ಸಲ್ಲಿಸಲಿವೆ.

ಕನ್ನಡದ ಮಕ್ಕಳಿಗೆ ಕರ್ನಾಟಕದಲ್ಲೇ ಕಡಿಮೆಯಾಗುತ್ತಿದೆ ಅವಕಾಶ

ನೀಟ್ ವ್ಯವಸ್ಥೆ: ರಾಜ್ಯಕ್ಕೆ ಬೇಕೆ?



ವಿಶ್ಲೇಷಣೆ

ವಸಂತ ಶೆಟ್ಟಿ

ಒಂದು ದೇಶ- ಒಂದು ಪರೀಕ್ಷೆ ಹೆಸರಿನಲ್ಲಿ ವೈದ್ಯಕೀಯ ಸೀಟುಗಳ ಪ್ರವೇಶಾತಿಗಾಗಿ ಪರಿಚಯಿಸಲಾದ 'ನೀಟ್' ಪರೀಕ್ಷೆ ವರ್ಷವೂ ಒಂದಲ್ಲ ಒಂದು ವಿವಾದಗಳಲ್ಲಿದ್ದು, ಈ ವರ್ಷ ಭಾರಿ ಪ್ರಮಾಣದ ಅಕ್ರಮದಲ್ಲಿ ಸಿಲುಕಿ ದೇಶದಾದ್ಯಂತ ತಲ್ಲಣಕ್ಕೆ ಕಾರಣವಾಗಿದೆ. ದೇಶಕ್ಕೆ ಮಾದರಿ ಅನ್ನುವಂತಹ ಸೀಟು ವ್ಯವಸ್ಥೆಯನ್ನು ಹೊಂದಿದ್ದ ಕರ್ನಾಟಕದಂತಹ ರಾಜ್ಯಗಳು ಈ ಹೊತ್ತಿನಲ್ಲಿ ನೀಟ್ ಥರದ ಪರೀಕ್ಷಾ ವ್ಯವಸ್ಥೆಯಲ್ಲಿ ಮುಂದುವರಿಯಬೇಕೆ ಅನ್ನುವ ಬಗ್ಗೆ ಗಂಭೀರವಾಗಿ ಅವಲೋಕಿಸಬೇಕಾದ ತುರ್ತಿದೆ.

ಈ ವರ್ಷದ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳ ಸೋರಿಕೆ, 1500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಗ್ರೇಸ್ ಅಂಕ, ಒಂದು ಪ್ರಶ್ನೆಗೆ ಎರಡು ಸರಿ ಉತ್ತರದ ಅಂಕ, ಘೋಷಿತ ಫಲಿತಾಂಶದ ದಿನಾಂಕಕ್ಕಿಂತ ಹತ್ತು ದಿನ ಮೊದಲೇ ಫಲಿತಾಂಶದ ಘೋಷಣೆ, ಹಿಂದೆಂದೂ ಕಾಣದ ರೀತಿಯಲ್ಲಿ 67 ಮಕ್ಕಳು 720ಕ್ಕೆ 720 ಅಂಕ ಪಡೆದುಕೊಂಡಿದ್ದು, ಒಂದೇ ಪರೀಕ್ಷಾ ಕೇಂದ್ರದ 8 ಮಕ್ಕಳು ಈ ಪಟ್ಟಿಯಲ್ಲಿ ಇದ್ದದ್ದು, ಹೀಗೆ ಸಾಲು ಸಾಲು ಎಡವಟ್ಟುಗಳಿಂದ ವಿದ್ಯಾರ್ಥಿಗಳು ಮತ್ತು ಪಾಲಕರ ನಂಬಿಕೆ ಕಳೆದು ಕೊಳ್ಳುವುದಕ್ಕೆ ಕಾರಣವಾಯಿತು.

ಭಾರತದಂತಹ ಹಲವು ಭಾಷಿಕರ ನಾಡಿನಲ್ಲಿ ವಿಕೇಂದ್ರೀಕೃತವಾದ ವ್ಯವಸ್ಥೆಯನ್ನು ಕೈಬಿಟ್ಟು, ಕೇಂದ್ರೀಕರಿಸುವ ಇಂತಹ ಪರೀಕ್ಷಾ ಏರ್ಪಾಡುಗಳು ದೇಶಕ್ಕೆ ಅನುಕೂಲಕ್ಕಿಂತ ತೊಂದರೆಯನ್ನೇ ಹೆಚ್ಚು ಉಂಟುಮಾಡುತ್ತಿವೆಯೇ? ಒಕ್ಕೂಟ ವ್ಯವಸ್ಥೆ, ಸಾಮಾಜಿಕ ನ್ಯಾಯ, ನಗರ ಮತ್ತು ಹಳ್ಳಿಗಳ ನಡುವಿನ ಕಂದರ... ಹೀಗೆ ಹಲವು ಆಯಾಮಗಳಲ್ಲಿ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವ ಅಗತ್ಯವಿದೆ.

ಭಾರತದ ಶಕ್ತಿ ವಿವಿಧತೆಯಲ್ಲಿ ಏಕತೆ. ಈ ಹಲತನ ಬ್ರಿಟಿಷರಿಂದ ಹುಟ್ಟಿದ್ದಲ್ಲ. ಸಾವಿರಾರು ವರ್ಷಗಳಿಂದ ಸಹಜವಾಗಿ ರೂಪುಗೊಂಡದ್ದು. ಸಂವಿಧಾನ ರಚಿಸುವವರು ಅದನ್ನು ಮನಗಂಡಿದ್ದರಿಂದಲೇ ಭಾಷಾವಾರು ರಾಜ್ಯಗಳು ಸ್ಥಾಪನೆಯಾಗಿದ್ದು ಮತ್ತು ಆಯಾ ರಾಜ್ಯದಲ್ಲಿ ಅಲ್ಲಿನ ಸಾಮಾಜಿಕ, ಆರ್ಥಿಕ ಸ್ಥಿತಿಗತಿಯ ಮೇಲೆ ಮಕ್ಕಳ ಕಲಿಕೆಯ ಏರ್ಪಾಡು ಹೇಗಿರಬೇಕು ಅನ್ನುವ ನಿರ್ಧಾರ ಕೈಗೊಳ್ಳುವ ಬಹುಪಾಲು ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಕೊಟ್ಟಿದ್ದು. ನೀಟ್ ಥರದ ಪರೀಕ್ಷೆಯು ರಾಜ್ಯಗಳಿಗಿರುವ ಇಂತಹ ಸ್ವಾಯತ್ತತೆಯನ್ನು ಕಸಿದುಕೊಂಡಿದೆ.

ಕರ್ನಾಟಕದಲ್ಲಿ ಅತ್ಯಂತ ಪಾರದರ್ಶಕವಾದ ಸೀಟು ವ್ಯವಸ್ಥೆಯನ್ನು ಜಾರಿಗೆ ತರಲಾಗಿದ್ದು, ಸಾಮಾನ್ಯದಲ್ಲಿ ಸಾಮಾನ್ಯರು, ಹಳ್ಳಿಗಾಡಿನ ಮಕ್ಕಳು ಕೂಡ ಡಾಕ್ಟರ್, ಎಂಜಿನಿಯರ್ ಆಗುವ ಕನಸನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನನಸಾಗಿಸಿದೆ. ಪಿಯುಸಿ ಮತ್ತು ಸಿಇಟಿಯ ಅಂಕಗಳೆರಡನ್ನೂ ಪರಿಗಣಿಸಿ ನೀಡಲಾಗುತ್ತಿದ್ದ ರ್‍ಯಾಂಕ್ ವ್ಯವಸ್ಥೆಯು ರಾಜ್ಯ ಸರ್ಕಾರಿ ಪಠ್ಯಕ್ರಮದ ಕಾಲೇಜುಗಳಲ್ಲಿ ಓದಿ ಬರುತ್ತಿದ್ದ ಮಕ್ಕಳಿಗೂ ಸಮಾನವಾದ ಅವಕಾಶ ಕಲ್ಪಿಸಿತ್ತು. ನೀಟ್ ಶುರುವಾಗುವವರೆಗೆ ನಡೆದ ಈ ವ್ಯವಸ್ಥೆಯಲ್ಲಿ ಅತ್ಯುತ್ತಮ ಗುಣಮಟ್ಟದ ಸಾವಿರಾರು ವೈದ್ಯರನ್ನು ಕರ್ನಾಟಕ ಹೊರತಂದಿದೆ. ಇಂದು ಬೆಂಗಳೂರಿನಂತಹ ಊರಿನಲ್ಲಿ ವೈದ್ಯಕೀಯ ಕ್ಷೇತ್ರ ಬಹುತೇಕ ಕನ್ನಡಿಗ ವೈದ್ಯರ ಕೈಯಲ್ಲೇ ಇದೆ ಅಂದರೆ ಅದಕ್ಕೆ ಕರ್ನಾಟಕದ ಸೀಟು ವ್ಯವಸ್ಥೆಯೂ ದೊಡ್ಡ ಕೊಡುಗೆ ನೀಡಿದೆ.

ನೀಟ್ ಬರುತ್ತಲೇ ಕೆಲವು ಬದಲಾವಣೆಗಳು ಆದವು. ಈ ಪರೀಕ್ಷೆ ಸಿಬಿಎಸ್‌ಇ ಪಠ್ಯಕ್ರಮದ ಮೇಲೆ ರೂಪುಗೊಂಡ ಕಾರಣಕ್ಕೆ ಪಿಯುಸಿಯಲ್ಲಿ ರಾಜ್ಯ ಪಠ್ಯಕ್ರಮದ ಕಾಲೇಜುಗಳು ಕಡಿಮೆಯಾಗತೊಡಗಿದವು. ಅದರ ಬೆನ್ನಲ್ಲೇ ರಾಜ್ಯ ಪಠ್ಯಕ್ರಮದ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ತೀವ್ರವಾಗಿ ಕುಸಿಯಲು ಆರಂಭಿಸಿತು. ರಾಜ್ಯ ಪಠ್ಯಕ್ರಮವನ್ನು ಸಿಬಿಎಸ್‌ಇ ಪಠ್ಯಕ್ರಮದ ಮಟ್ಟಕ್ಕೆ ಏರಿಸಿದ್ದೇವೆ ಎಂದು ಸರ್ಕಾರ ಹೇಳಿದರೂ ಜನಸಾಮಾನ್ಯರು ಅದನ್ನು ನಂಬದ ಸ್ಥಿತಿ ಉಂಟಾಯಿತು. ಇಂದು ರಾಜ್ಯ ಪಠ್ಯಕ್ರಮದ ಶಾಲೆಗಳು ನಗರ ಪ್ರದೇಶಗಳಲ್ಲಿ ದುರ್ಬೀನು ಹಾಕಿಕೊಂಡು ಹುಡುಕುವ ಹಂತಕ್ಕೆ ಹೋಗಿವೆ. ಹೀಗೆ ಮೇಲ್ಪದರದಲ್ಲಿ ತಂದ ಒಂದು ಬದಲಾವಣೆ, ರಾಜ್ಯದ ಕಲಿಕಾ ವ್ಯವಸ್ಥೆಯನ್ನು ಬೇರು ಸಮೇತ ಅಲುಗಾಡಿಸಿದೆ ಕಿತ್ತುಹಾಕುವ ಮಟ್ಟಕ್ಕೆ ಬೆಳೆಸಿದೆ.

ಇದರ ಜೊತೆಯಲ್ಲಿ ಹಲವು ಅಳ್ಳುಗಳ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಇಂತಹ ಪರೀಕ್ಷೆಗೆ ತರಬೇತಿ ಕೊಡುವ ಕೋಚಿಂಗ್ ಕೇಂದ್ರಗಳು ನಗರ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ಹಬ್ಬಿ, ಈ ಬಗೆಯ ಅನುಕೂಲವಿಲ್ಲದ ಹಳ್ಳಿಗಾಡಿನ ಬಡ ಮಕ್ಕಳನ್ನು ವ್ಯವಸ್ಥೆಯಾಗಿ ಹಿಂದಕ್ಕೆ ಉಳಿಸಿ, ನಗರ ಪ್ರದೇಶದ, ಕೋಚಿಂಗ್ ಸವಲತ್ತು ಇರುವ ಸಿರಿವಂತ ಮಕ್ಕಳು ಈ ಪರೀಕ್ಷೆಯಲ್ಲಿ ಹೆಚ್ಚೆಚ್ಚು ಅಂಕಗಳನ್ನು ಪಡೆದು ವೈದ್ಯಕೀಯ ಸೀಟುಗಳನ್ನು ಪಡೆಯುವಂತಹ ಬೆಳವಣಿಗೆಗೂ ಕಾರಣವಾಯಿತು. ಹಿಂದಿನ ಹತ್ತು ವರ್ಷಗಳ ನೀಟ್ ಫಲಿತಾಂಶದಲ್ಲಿ ಕೋಚಿಂಗ್ ಮೂಲಕ ಬಂದ ನಗರಪ್ರದೇಶಗಳ ಮಕ್ಕಳೇ ಹೆಚ್ಚುವರಿಯನ್ನು ಅಂಕಿಅಂಶಗಳೇ ಹೇಳುತ್ತಿವೆ.

ಒಂದೇ ಬಾರಿ ನೀಟ್‌ನಲ್ಲಿ ಯಶಸ್ವಿಯಾಗದವರು ಮತ್ತೆ ಮತ್ತೆ ಪ್ರಯತ್ನಿಸಿ ಒಳ್ಳೆಯ ರ್‍ಯಾಂಕ್ ಪಡೆಯುತ್ತಿರುವ ಪ್ರಮಾಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ ಅನ್ನುವ ಮಾಹಿತಿಯಿದೆ. ಇಂತಹ ಮರುಪ್ರಯತ್ನಕ್ಕೆ ಬೇಕಾದ ಸಾಮಾಜಿಕ ಬೆಂಬಲ ಮತ್ತು ಆರ್ಥಿಕ ಚೈತನ್ಯ ಸಹಜವಾಗಿಯೇ ನಗರ ಪ್ರದೇಶದ ಮೇಲ್ವರ್ಗದ ವರ್ಗದ ಮಕ್ಕಳಲ್ಲಿ ಹೆಚ್ಚಿದೆ ಅನ್ನುವುದನ್ನು ಇಲ್ಲಿ ಮನಗಾಣಬೇಕಿದೆ. ಈಗಿರುವ ವ್ಯವಸ್ಥೆ ಹೀಗೇ ಮುಂದುವರಿದರೆ ಮುಂದಿನ 25 ವರ್ಷಗಳಲ್ಲಿ ಕರ್ನಾಟಕದಿಂದ ಹೆಚ್ಚೆಚ್ಚು ನಗರ ಪ್ರದೇಶದ ಮಕ್ಕಳೇ ವೈದ್ಯರಾಗುವ ಸಾಧ್ಯತೆ ಇದ್ದು, ವೈದ್ಯರ ಕೊರತೆ ಹೆಚ್ಚಿರುವ ಹಳ್ಳಿ-ಪಟ್ಟಣಗಳಲ್ಲಿನ ಸ್ಥಿತಿ ಹಾಗೆಯೇ ಉಳಿಯಬಹುದು.


ಎಲ್ಲರೂ ನಗರಗಳತ್ತ ಹೊರಟಿರುವಾಗ ನಗರ ಪ್ರದೇಶಗಳಲ್ಲಿ ಓದಿ, ಬೆಳೆದ ಮಕ್ಕಳು ವೈದ್ಯರಾಗಿ ಹಳ್ಳಿಗಳಲ್ಲಿ ಸೇವೆಗೆ ಬರುವ ಸಾಧ್ಯತೆ ಎಷ್ಟಿದೆ? ಅದಲ್ಲದೆ ಅಣಬೆಯಂತೆ ಸಿಬಿಎಸ್‌ಇ ಶಾಲೆಗಳೇ ಸರಿಯೇನೋ! ಇದಲ್ಲದೆ ದೊಡ್ಡ ಮಟ್ಟದಲ್ಲಿ ವಲಸೆ ಎದುರಿಸುತ್ತಿರುವ ನಮ್ಮ ನಗರ ಪ್ರದೇಶಗಳಲ್ಲಿ ದಿನೇದಿನೇ ಕನ್ನಡೇತರ ಪ್ರಮಾಣವೂ ಹೆಚ್ಚುತ್ತಿದೆ. ಹೀಗೆ ನೆಲಸಿರುವವರ ಮಕ್ಕಳು ಕಾಲಕ್ರಮೇಣ ಈ ವ್ಯವಸ್ಥೆಯಲ್ಲಿ ರಾಜ್ಯದ ಕೋಟಾದಡಿಯಲ್ಲೇ ಸೀಟು ಪಡೆಯುತ್ತ ಕರ್ನಾಟಕದಲ್ಲೇ ಕನ್ನಡದ ಮಕ್ಕಳಿಗೆ ಇರುವ ಅವಕಾಶಗಳು ಕಡಿಮೆಯಾಗುತ್ತಿರುವುದು ಈ ವ್ಯವಸ್ಥೆಯ ಇನ್ನೂ ಒಂದು ವ್ಯಂಗ್ಯದ ಮುಖ.

ಅಮೆರಿಕದ ನಾಸಿಮ್ ನಿಕೋಲಸ್ ತಾಲೆಬ್ ಈ ಹೊತ್ತಿನ ಪ್ರಮುಖ ಚಿಂತಕರಲ್ಲಿ ಒಬ್ಬರು. ಅವರು ತಮ್ಮ 'ಆಂಟಿಫ್ರ್ಯಾಜೈಲ್' ಎಂಬ ಪುಸ್ತಕದಲ್ಲಿ ಹೇಳುವಂತೆ, ವ್ಯವಸ್ಥೆಯೊಂದು ಎಷ್ಟು ವಿಕೇಂದ್ರೀಕೃತವಾಗಿ ಇರುತ್ತದೋ ಅಷ್ಟೇ ಅದು ಬದಲಾವಣೆಗೆ ತೆರೆದುಕೊಂಡಿರುತ್ತದೆ ಮತ್ತು ವಿಕೇಂದ್ರೀಕೃತ ವ್ಯವಸ್ಥೆಯಲ್ಲಿ ಎದುರಾಗುವ ಯಾವುದೇ ತೊಂದರೆಯು ಒಂದು ಸಣ್ಣ ಭಾಗವನ್ನೊಂದನ್ನಷ್ಟೇ ಪ್ರಭಾವಿಸುವುದರಿಂದ, ಇಡೀ ವ್ಯವಸ್ಥೆಯೇ ಕುಸಿದು ಬೀಳುವಂತಹ ಸಾಧ್ಯತೆಯನ್ನು ಕಡಿಮೆಮಾಡುತ್ತದೆ.

ನೀಟ್‌ನಲ್ಲಿ ನಡೆದಿರುವ ಅಕ್ರಮ ಇಡೀ ದೇಶದ 25 ಲಕ್ಷಕ್ಕೂ ಹೆಚ್ಚು ಮಕ್ಕಳ ಮೇಲೆ ಬೀರಿರುವ ಪರಿಣಾಮವನ್ನು ಗಮನಿಸಿದಾಗ, ವಿಕೇಂದ್ರೀಕೃತವಾದ ವ್ಯವಸ್ಥೆ ಎಷ್ಟು ಮುಖ್ಯ ಅನ್ನುವುದು ಅರಿವಾಗಬಹುದು. ಒಂದು ದೇಶ- ಒಂದು ವ್ಯವಸ್ಥೆ ಅನ್ನುವುದು ಅತ್ಯಂತ ಸರಳೀಕರಿಸಿದ ವಾದವಾಗಿ ಕೇಳುವುದರಿಂದ ಕಿವಿಗೇನೋ ಇಂಪಾಗಿಯೇ ಕೇಳಿಸುತ್ತದೆ. ಆದರೆ ಈ ವರ್ಷ ನಡೆದಂತಹ ಪ್ರಕರಣಗಳು ಇಂತಹ ವಾದಗಳಲ್ಲಿರುವ ಮಿತಿಯನ್ನು ತೋರಿಸುತ್ತವೆ.

ರಾಜ್ಯ ಸರ್ಕಾರ ಈ ದಿಸೆಯಲ್ಲಿ ಏನು ಮಾಡಬಹುದು? ನೀಟ್ ಥರದ ಪರೀಕ್ಷೆಯ ತೊಡಕುಗಳ ಕುರಿತು ಕರ್ನಾಟಕದ ಮೂರೂ ಪ್ರಮುಖ ಪಕ್ಷಗಳ ನಾಯಕರು ಬೇರೆ ಬೇರೆ ಸಂದರ್ಭಗಳಲ್ಲಿ ಮಾತನಾಡಿದ್ದಾರೆ. ಈಗ ಅದರತ್ತ ಒಂದು ಸ್ಪಷ್ಟವಾದ ನಿಲುವು ಕೈಗೊಳ್ಳುವ ಅವಕಾಶ ಅವರೆದುರು ಇದೆ. ಸಂವಿಧಾನದ ರಾಜ್ಯ ಪಟ್ಟಿಯಲ್ಲಿ ಶೆಡ್ಯೂಲ್ 7ರ ಅಡಿ 32ನೇ ಅಂಶದ ಅನ್ವಯ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸುವುದು, ನಡೆಸುವುದು, ಮುಚ್ಚುವುದು ಎಲ್ಲವೂ ಆಯಾ ರಾಜ್ಯ ಸರ್ಕಾರದ ಕೈಯಲ್ಲಿದೆ. ಪ್ರವೇಶ ಪರೀಕ್ಷೆ ಮತ್ತು ಪದವಿ ನೀಡುವ ವಿಷಯದಲ್ಲೂ ನಿಯಂತ್ರಣವೂ ಇದರಲ್ಲಿ ಸೇರಿದೆ. ಇದನ್ನು ಬಳಸಿಕೊಂಡು ರಾಜ್ಯ ಸರ್ಕಾರಿ ಮೆಡಿಕಲ್ ಕಾಲೇಜುಗಳಲ್ಲಿನ ಪ್ರವೇಶಾತಿಯನ್ನು ನೀಟ್ ವ್ಯವಸ್ಥೆಯ ಹೊರಗಿರಿಸುವ ಆಯ್ಕೆ ರಾಜ್ಯ ಸರ್ಕಾರಕ್ಕಿದೆ.

ರಾಜ್ಯ ಸರ್ಕಾರ ಬಯಸಿದರೆ, ವೈದ್ಯಕೀಯ ಶಿಕ್ಷಣದ ಪ್ರವೇಶಾತಿಯ ವಿಷಯದಲ್ಲಿ ಕಳೆದುಕೊಂಡಿರುವ ತನ್ನ ಸ್ವಾಯತ್ತತೆಯನ್ನು ಇದರ ಮೂಲಕವೇ ಮರಳಿ ಪಡೆಯುವ ಪ್ರಯತ್ನ ಶುರು ಮಾಡಬಹುದು.



ಚುರುಮುರಿ



ಮೈತ್ರಿಗೆ ಮೂಲ

● ಸುಮಂಗಲಾ

ಪೇಪರು ಹಿಡಿದಿದ್ದ ಬೆಕ್ಕಣ್ಣ 'ಅಸೆಯೇ ದುಃಖಕ್ಕೆ ಮೂಲ' ಎಂದು ಜೋರಾಗಿ ಓದಿತು.

'ರುಡಬಾಯ್... ಬೆಳಬೆಳಗ್ಗೆ ಹಿಂಗೆ ಬುದ್ಧನ ಸುಭಾಷಿತ ನೆನಪಿಸಿಕೊಂಡಿರಾಲ!' ಎಂದೆ.

'ಪೂರಾ ಕೇಳು, ಆಸೆಯೇ ದುಃಖಕ್ಕೆ ಮೂಲ, ಗ್ಯಾರಂಟಿಯೇ ಬೆಲೆಯೇರಿಕೆಗೆ ಮೂಲ ಅಂತ ನಮ್ ಕುಮಾರಣ್ಣ ಹೇಳ್ಯಾರೆ. ಸಿದ್ದು ಅಂಕಲ್ಲು ಪೆಟ್ರೋಲು, ಡೀಸೆಲ್ ಬೆಲೆ ಕಂಡಾಪಟ್ಟೆ ಏರಿಸಿದ್ದು ಅದಕ್ಕೆ' ಎಂದಿತು.

'ನಿಮ್ ಮೋದಿಮಾಮಾನೂ ಚುನಾವಣೆ ಪ್ರಣಾಳಿಕೆಯಾಗೆ ಮೋದಿ ಕೀ ಗ್ಯಾರಂಟಿ ಅಂತ ವಾಗ್ದಾನ ಮಾಡಿದ್ದರಲ್ಲ... ಮತ್ತೆ ಮೋದಿ ಮಾಮಾನ ಗ್ಯಾರಂಟಿಗಳೂ ಜಾರಿಯಾದರೆ ಬೆಲೆಯೇರಿಕೆ ಇನ್ನಾ ನಾಕು ಪಟ್ಟು ಆಗಬೌದು' ಎಂದೆ.

'ಮೋದಿಮಾಮಾನ ಗ್ಯಾರಂಟಿ ಕೇಂದ್ರದ್ದು, ಅದ್ರಿಂದ ಬೆಲೆಯೇರಿಕೆ ಆಗಂಗಿಲ್ಲಾ. ಈ ಕಾಂಗಿಗಳು ಸುಮ್ ಸುಮ್ನೆ ಕಂಡೋರಿಗೆಲ್ಲ ಕೈತುಂಬ ಗ್ಯಾರಂಟಿ ಕೊಡುವಂತಿಲ್ಲ, ಹಿಂದುಮುಂದಿಲ್ಲದೇ ಗ್ಯಾರಂಟಿ ಕೊಟ್ಟು, ಇಡೀ ರಾಜ್ಯನೇ ಹಾಳು ಮಾಡ್ಯಾರೆ' ಎಂದು ವಟಗುಟ್ಟಿತು.

'ಗ್ಯಾರಂಟಿಗಳಿಗೆ ದುಡ್ಡ ಹೊಂದಿಸಾಕೆ ಹಂಗ ಅಂತ ಸಲಹೆ ಕೊಡಾಕೆ ಸರ್ಕಾರದವ್ರು ಬೇಲ್ಸನ್ ಕನ್ಸಲ್ಟಿಗ ನೇಮಕ ಮಾಡಿಕೊಂಡಾರಂತೆ, ಚಿಂತಿ ಮಾಡಬ್ಯಾಡ' ಎಂದು ಸಮಾಧಾನಿಸಿದೆ.

'ನಮ್ಮ ರಾಜ್ಯದಾಗ ಆರ್ಥಿಕ ಸಲಹೆ ಕೊಡೋರೇನು ಕಡಿಮಿ ಇದ್ದಾರೇನು' ಎಂದ ಬೆಕ್ಕಣ್ಣ, 'ಹೋಗ್ಲಿಬಿಡು, ನೋಡಿಲ್ಲಿ, ಯಡ್ಯೂರಪ್ಪಜ್ಜಾ ಜೋಡಿ ನಮ್ ಕುಮಾರಣ್ಣ ಎಷ್ಟ್ ಚಂದ ಕುಂತಾರೆ' ಎಂದು ಸಂತಸ ಸಂಸದರ ಸನ್ಮಾನ ಸಮಾರಂಭದ ಫೋಟೊ ತೋರಿಸಿತು.

'ಕುಮಾರಣ್ಣ ಹಗಲ ಮ್ಯಾಲೆ ತೆಗೆಸಿಕ್ಕರ ಟವೆಲ್ ಬದಲು ಕಮಲದ ಹೂವಿನ ಶಾಲು ಹಾಕ್ಕೊಂಡಾನಲ್ಲ' ಎಂದೆ. 'ಬದಲಾವಣೆಯೇ ಜಗದ ನಿಯಮ!' ಎಂದು ಉದ್ಘರಿಸಿತು ಬೆಕ್ಕಣ್ಣ.

'ರಾಗಿತೆನೆ-ಕಮಲದಳದ ಸಖ್ಯ ಆಪ್ರರ ಫಲಿತಾಂಶದಲ್ಲಿದೆ, ಸರ್ಕಾರ ರಚಿಸಬೇಕು ಅಂದಾನ ನಿಮ್ಮ ಕುಮಾರಣ್ಣ ಎಷ್ಟು ಉಗಿದಿರ ಹಿಂದಿನ ಜನ, ದ್ವೇಷ ಎಲ್ಲಾ ಮರೆತುಬಿಟ್ಟಾರ!'

'ಹೌದು ಮತ್ತೆ... ಅಧಿಕಾರದಾಸೆಯೇ ಮೈತ್ರಿಗೆ ಮೂಲ!' ಎಂದು ಬೆಕ್ಕಣ್ಣ ಮುಸಿಮುಸಿ ನಕ್ಕಿತು.

ಸಂಗತ

ಸ್ವಾಯತ್ತ ಸಂಸ್ಥೆ ಮತ್ತು ಹಂಗಿನ ಅರಮನೆ

ರಾಜಕೀಯ ಪಕ್ಷದ ಕಾರ್ಯಕರ್ತನಂತೆ ವರ್ತಿಸುವ ಸಾಹಿತ್ಯ ಸಂಸ್ಥೆಯ ಅಧ್ಯಕ್ಷ ಆ ಪಕ್ಷದ ಮೆಚ್ಚುಗೆ ಗಳಿಸಬಹುದೇ ವಿನಾ ಬರಹಗಾರರ ಮೆಚ್ಚುಗೆಯನ್ನಲ್ಲ

● ಆರ್.ಲಕ್ಷ್ಮೀನಾರಾಯಣ

'ಸಾಹಿತಿ, ಕಲಾವಿದರು, ಸಂಸ್ಕೃತಿ ಚಿಂತಕರನ್ನು ಯಾವುದೇ ಪಕ್ಷದ ಅಧಿಯಾಳುಗಳಂತೆ ಕಾಣುವುದು ಸರಿಯಾದ ನಡವಳಿಕೆ ಅಲ್ಲ. ಇಂತಹ ಸಾಂಸ್ಕೃತಿಕ ಚಿಂತಕರಾಸರಿಕೆಯನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಕೆಲವು ಲೇಖಕರು ಹೇಳಿದ್ದಾರೆ (ಪ್ರಜಾ., ಜೂನ್ 21). 'ಸಾಹಿತಿಗಳು ರಾಜಕಾರಣಿಗಳಲ್ಲ' ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಯನ್ನು ವಿರೋಧಿಸಿ ನೀಡಿರುವ ಈ ಹೇಳಿಕೆ ಅತ್ಯಂತ ಸಮಂಜಸವಾದುದೇ ಆಗಿದೆ. ಆದರೆ ಉಪಮುಖ್ಯಮಂತ್ರಿ ಹೇಳಿಕೆಯನ್ನು ಸಮರ್ಥಿಸುತ್ತ ಕೆಪಿಸಿಸಿ ಮಾಧ್ಯಮ ವಿಭಾಗದ ಮುಖ್ಯಸ್ಥ ರಮೇಶ್ ಬಾಬು ಅವರು 'ಕೆಲವು ಸಾಹಿತಿ ಮತ್ತು ಚಿಂತಕರ ಟೀಕೆ ಅವರ ಅವಕಾಶವಾದದ ಪ್ರತೀಕ. ಉಪಮುಖ್ಯಮಂತ್ರಿ ಯವರನ್ನು ಟೀಕಿಸುವ ನೈತಿಕತೆಯನ್ನು ಈ ಲೇಖಕರು ಮತ್ತು ಸಾಹಿತಿಗಳು ಕಳೆದುಕೊಂಡಿದ್ದಾರೆ' ಎಂದಿರುವುದು ಅತ್ಯಂತ ಧಾರ್ಷ್ಟ್ಯದ ಹೇಳಿಕೆಯಾಗಿದೆ.

ಉಪಮುಖ್ಯಮಂತ್ರಿ ಮತ್ತು ಮಾಧ್ಯಮ ವಿಭಾಗದ ಮುಖ್ಯಸ್ಥರ ಹೀಗೆ ಹೇಳುವ ಧಾರ್ಷ್ಟ್ಯ ಬರಲು ತಾವೂ ಕಾರಣರಲ್ಲವೇ ಎಂಬ ಬಗ್ಗೆ ಲೇಖಕರು ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಂದರ್ಭ ವನ್ನಂತೂ ಇದು ಸೃಷ್ಟಿಸಿದೆ.

ಅಕಾಡೆಮಿಗಳು ಮತ್ತು ಪ್ರಾಧಿಕಾರಗಳನ್ನು ಸರ್ಕಾರ ಸ್ಥಾಪಿಸಿರುವುದು ಸಾಹಿತ್ಯ, ಕಲೆ, ಸಂಸ್ಕೃತಿಯ ಪುರೋಭಿವೃದ್ಧಿಗೆ. ಅವು ಇಲ್ಲದಿದ್ದರೂ ಸಾಹಿತ್ಯ, ಕಲೆಯನ್ನು ಸೃಷ್ಟಿಸುವವರು ತಮ್ಮ ಕೆಲಸ ಮಾಡುತ್ತಲೇ ಇರುತ್ತಾರೆ. ಮೊದಲಿಗೆ, ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳ ಅಧ್ಯಕ್ಷರ ಕ್ರಮವಾಗಿ ಪ್ರಧಾನಿ ಮತ್ತು ಶಿಕ್ಷಣ ಸಚಿವರೇ ಆಗಿದ್ದರು. ಜವಾಹರಲಾಲ್ ನೆಹರೂ ಅವರು ಲೇಖಕರೂ ಆಗಿದ್ದರಿಂದ ಅವರು ಅಧ್ಯಕ್ಷರಾಗಿದ್ದುದಕ್ಕೆ ಸಹಮತ 'ಇರಲು ಸಾಧ್ಯ. ನಂತರದಲ್ಲಿ ಲೇಖಕರೇ ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗುವ ರೂಢಿಗೆ ಬಂತು. ಆದರೆ ನಮ್ಮ ರಾಜ್ಯದ ಶಿಕ್ಷಣ ಸಚಿವರು ರಾಜ್ಯ ಸಾಹಿತ್ಯ ಅಕಾಡೆಮಿಗೆ ಅಧ್ಯಕ್ಷರಾದುದಕ್ಕೆ ಏನೂ ಸಮರ್ಥನೆ ಇರಲಿಲ್ಲ. ಆಮೇಲೆ ಅದು ಸುತ್ತವಲಯವೆಂದು ತಿಳಿದು, ಕಲಾಕಾರರ ಮೇಲೆ ಅವನ್ನು ಅವರನ್ನು ಅಧ್ಯಕ್ಷರಾಗಿರಲು ಸರ್ಕಾರ ಕೇಳಿಕೊಂಡಿತು. ಅನಂತ ತರ್ಮಗೆ ಸಾಧ್ಯವಿಲ್ಲ ಎಂದು ಹೇಳಿದ್ದರಿಂದ ರಾಜಕಾರಣಿಯನ್ನು ಅಧ್ಯಕ್ಷರನ್ನಾಗಿರಲು ಕೇಳಿಕೊಳ್ಳಲಾಯಿತು. ಹಾಗೆ ಸರ್ಕಾರ ಕೇಳಿಕೊಂಡು ಅಧ್ಯಕ್ಷರನ್ನಾಗಿ ಮಾಡುತ್ತಿದ್ದ ಕಾಲವೂ ಒಂದಿತ್ತು.

ಕುವೆಂಪು ಹಾಗೂ ಸರ್ ಬ್ರಜೇಂದ್ರನಾಥ್ ಸೀಲ್ ಅವರನ್ನು ಹೀಗೆ ಕೇಳಿಕೊಂಡೇ ಮೈಸೂರು ವಿಶ್ವ ವಿದ್ಯಾಲಯದ ಕುಲಪತಿಗಳನ್ನಾಗಿ ನೇಮಿಸಲಾಗಿತ್ತು. ಅಕಾಡೆಮಿ, ಪ್ರಾಧಿಕಾರಗಳಿಗೆ ಸೂಕ್ತ ವ್ಯಕ್ತಿಗಳನ್ನು ಕೇಳಿಕೊಂಡು ನೇಮಿಸುವುದು ಸರ್ಕಾರದ ಜವಾಬ್ದಾರಿ. ಹಾಗೆ ಕಾಯಿಸಿಗಳಿಸುವುದು ಒಂದು ಜವಾಬ್ದಾರಿ ಅಷ್ಟೇ ಎಂದು ತಿಳಿಯುವುದು ಹೋಗಿ, ಅವು ಇಂದ್ರ ಪದವಿಯೆಂದೂ ಅಲ್ಲಿ ವಿರಾಜಮಾನರಾದರೆ ಮಾತ್ರ ತಮ್ಮ ಘನತೆ ಹೆಚ್ಚುತ್ತದೆಂದೂ ಕೆಲವರು ಭ್ರಮಿಸ ತೊಡಗುವ ಕಾಲ ಬಂದಾಗ, ಅದಕ್ಕೆ ಸರ್ಕಾರದ ಮಂತ್ರಿಮಹೋದಯರನ್ನು ಓಲೈಸುತ್ತ, ಅವರ ಸುತ್ತ ಸದಾ ಅಡಿಯುತ್ತಾ ಭಟ್ಟಂಗಿಗಳಂತೆ ನಡೆದುಕೊಳ್ಳತೊಡಗಿದ ಮೇಲೆ, ಅವು ಎಷ್ಟರಮಟ್ಟಿಗೆ ಸ್ವಾಯತ್ತ ಸಂಸ್ಥೆಗಳು ಉಳಿದಿರುವುದೋ ತಿಳಿಯದು. ಆದರೆ ಈಗ ಅವು ಹಂಗಿನ ಅರಮನೆಗಳಾಗಿ ಆಗಿರುವುದಂತೂ ನಿಜ. ಅವು ಮಾತ್ರವಲ್ಲ, ಸಾಹಿತಿ, ಕಲಾವಿದರಿಗೆ ಮೀಸಲಾದ ವಿಧಾನಪರಿಷತ್ತಿನ ಸ್ಥಾನಗಳಿಗೂ ಓಲೈಸುವುದು ಆರಂಭವಾಗಿದೆ. ಸಾಹಿತಿಗಳು ಅಲಂಕರಿಸುತ್ತಿದ್ದ ಸ್ಥಾನಗಳಿಗೆ ಸಾಹಿತಿಸಾಮರ್ಥ್ಯದಾಧಾರದ ರಾಜಕಾರಣಿಗಳು ನಾಮಕರಣಗೊಳ್ಳತೊಡಗಿರುವುದಕ್ಕೆ ಇದೂ ಒಂದು ಕಾರಣ. ಹೀಗಾಗಿ ಅವೂ ಹಂಗಿನ ಅರಮನೆಗಳೇ ಆಗಲಾರಂಭಿಸಿವೆ.

ಈಗ್ಗೆ ಹಲವಾರು ವರ್ಷಗಳಿಂದ ಕೆಲವು ಅಪವಾದಗಳನ್ನು ಹೊರತುಪಡಿಸಿದರೆ, ಲಾಬಿ ಮಾಡದೆ, ಮಂತ್ರಿಮಹೋದಯರನ್ನು ಓಲೈಸದೆ ಇಂಥ ಸ್ಥಾನಗಳನ್ನು ಪಡೆದುಕೊಂಡವರು ಇದ್ದಾರೆ ಎಂದು ಎನ್ನುವುದು ಕಷ್ಟ. ಇದು ರಾಜಕೀಯಸ್ಥರಿಗೆ ಚೆನ್ನಾಗಿ ತಿಳಿದಿರುವ ದರಿಂದಲೇ ಈಗಿನಂತೆ ಲೇಖಕರ ಬಗ್ಗೆ ಕೇವಲವಾಗಿ ಮಾತನಾಡುವಂತಹ ಧಾರ್ಷ್ಟ್ಯ ಬಂದಿರುವುದು ಎಂಬುದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಬುದ್ಧಿವಂತಿಕೆಯೇನೂ ಬೇಕಿಲ್ಲ.



ರಾಜಕೀಯ ಪಕ್ಷವೊಂದರ ಬಗ್ಗೆ ಬರಹಗಾರನಿಗೆ ಒಲವಿರುವುದೇನೂ ತಪ್ಪಲ್ಲ. ಆದರೆ ಸಾಹಿತ್ಯ ಸಂಸ್ಥೆಯೊಂದರ ಅಧ್ಯಕ್ಷನಾಗಿ ಇದ್ದುಕೊಂಡು ಪಕ್ಷವೊಂದರ ಕಾರ್ಯಕರ್ತನಂತೆ ಚುನಾವಣಾ ಪ್ರಚಾರದಲ್ಲಿ ಪಾಲ್ಗೊಳ್ಳುವಷ್ಟು ಉತ್ಸಾಹವಿರುವ ಯಾರೇ ಆದರೂ ಪಕ್ಷದ ಮೆಚ್ಚುಗೆ ಗಳಿಸಬಹುದೇ ವಿನಾ ಬರಹಗಾರರ ಮೆಚ್ಚುಗೆ ಗಳಿಸಲಾರರು. ಅವರು ಆ ಅವಧಿಯುದ್ದಕ್ಕೂ ಪಕ್ಷಾತೀತ ವ್ಯಕ್ತಿಯಾಗಿರಬೇಕಾಗುತ್ತದೆ. ಇಲ್ಲವಾದರೆ ಆ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿ ಉಳಿಯದೆ ಹಂಗಿನ ಅರಮನೆಗಳಾಗುತ್ತವೆ. ಆಗ ಅಂಥ ಹಂಗಿನ ಅರಮನೆಯಲ್ಲಿ ಇರುವುದಕ್ಕಿಂತಲೂ ವಿಂಗಡದ ಗುಡಿ ಲೇಸೆಂದೇ ನಿರ್ವಾದ ಸಾಹಿತಿಯೊಬ್ಬ ಭಾವಿಸುತ್ತಾನೆ.

ತಮ್ಮ ಸ್ವಾಭಿಮಾನವನ್ನು ಕಾಪಾಡಿಕೊಳ್ಳುವುದು ಬರಹಗಾರರ ಕೈಯಲ್ಲೇ ಇದೆ. ಅಕಾಡೆಮಿ, ಪ್ರಾಧಿಕಾರದ ಅಧ್ಯಕ್ಷ ಸ್ಥಾನಗಳ ಬಗ್ಗೆ ಕುವೆಂಪು ಮಾತಿನಲ್ಲಿ ಹೇಳುವುದಾದರೆ 'ದಿವ್ಯ ನಿರ್ಲಕ್ಷ್ಯ' ತೋರಿ, ತಾನಾಗಿ ಒಲಿದು ಬಂದಾಗ ಸ್ವೀಕರಿಸುವ ಮನೋಭಾವ ತಳೆದರೆ ಮಾತ್ರ ಸಾಹಿತಿಯನ್ನು ರಾಜಕಾರಣಿಗಳು ಧಾರ್ಷ್ಟ್ಯದಿಂದ ಕೇವಲವಾಗಿ ಅಪಮಾನ ಮಾಡಬಹುದಂಥ ಸಂದರ್ಭ ಬರುವುದಿಲ್ಲ ಮತ್ತು ಅವನದಿಂದ ಸ್ವಾಭಿಮಾನಕ್ಕೆ ಎರವಾಗಬೇಕಾಗುವುದಿಲ್ಲ.

ವಾಚಕರ ವಾಣಿ

ಗಣಿಗಾರಿಕೆ: ಸಮನ್ವಯ ಇಲ್ಲದ ನಡೆ

ದೇವದಾರು ಅರಣ್ಯ ಭೂಮಿಯನ್ನು ಗಣಿಗಾರಿಕೆಗಾಗಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ (ಕೆಐಒಸಿಎಲ್) ಹಸ್ತಾಂತರಿಸುವ ರಾಜ್ಯ ಅರಣ್ಯ ಸಚಿವರ ಅರಣ್ಯ ಇಲಾಖೆಗೆ ಸೂಚಿಸಿರುವ ವರದಿ (ಪ್ರಜಾ., ಜೂನ್ 23) ಹಾಗೂ ಹಿನ್ನೆಲೆ (ಪ್ರಜಾ., ಜೂನ್ 12, 16, 19) ಗಮನಿಸಿದರೆ, ಈ ವಿಷಯದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನಡುವೆ ಸಮನ್ವಯವೇ ಇಲ್ಲ ಎನಿಸುತ್ತದೆ. ಇದು ಮೊದಲು ಅರಣ್ಯ, ಪರಿಸರಕ್ಕೆ ಸಂಬಂಧಿಸಿದ್ದು, ಖನಿಜ, ಗಣಿಗಾರಿಕೆ ಆಮೇಲೆ ಬರುತ್ತದೆ. ಈಗ ಕೇಂದ್ರ ಸಚಿವರಾಗಿರುವ ಎಚ್.ಡಿ.ಕುಮಾರಸ್ವಾಮಿ ಅವರು ಕುದುರೆಮುಖ ಕಂಪನಿ ಅಧಿಕಾರಿಗಳೊಂದಿಗೆ ಚರ್ಚಿಸಿದ್ದಾರೆ. ಹಾಗೆಯೇ ಕರ್ನಾಟಕ ಸರ್ಕಾರದ ಸಂಬಂಧಿತ ಸಚಿವರು ಹಾಗೂ ಉನ್ನತಾಧಿಕಾರಿಗಳೊಂದಿಗೂ ಮಾತನಾಡಬಹುದಿತ್ತು.

ಬಳ್ಳಾರಿ ಹಾಗೂ ಕುದುರೆಮುಖ ಗಣಿಗಾರಿಕೆಗಳ ಬಗೆಗಿನ ಹೋರಾಟ ಮರೆತುಬಿಡುವಂಥದ್ದಲ್ಲ. ನ್ಯಾಯಾಲಯಗಳು ತೀರ್ಪು, ನಿರ್ದೇಶನಗಳನ್ನು ನೀಡಿವೆ. ಖನಿಜ ಇರುವಿಕೆ ಬಗ್ಗೆ ಮ್ಯಾಪಿಂಗ್ ನಡೆಯಬೇಕು. ಅದು ಅರಣ್ಯ ಪ್ರದೇಶದಲ್ಲಿ ಆದಾಗ ಮರಗಳಿಗೆ ಹಾನಿ ಆಗಬಾರದು. ರಿಸರ್ವ್ ಫಾರೆಸ್ಟ್ ಹಾಗೂ ಕರಡಿಧಾಮಕ್ಕೆ ಹತ್ತಿರ ಎಂದಾದಾಗ ಬೇರೆ ಹೊಸ ವಿಧಾನ ಅನುಸರಿಸಬೇಕೆ? ಅರಣ್ಯ ಇಲಾಖೆ ಆಕ್ಷೇಪ ವ್ಯಕ್ತಪಡಿಸಿದಾಗ ಕರ್ನಾಟಕ ಸರ್ಕಾರದ ಉನ್ನತ ಮಟ್ಟದಲ್ಲಿ ನಿರ್ಧಾರ ಕೈಗೊಂಡು, ಕೇಂದ್ರಕ್ಕೆ ರವಾನಿಸಿದವರು ಯಾರು ಎಂಬುದು ಸ್ಪಷ್ಟವಾಗಬೇಕು. ಒಂದು ರೀತಿಯಲ್ಲಿ ಮುಖ್ಯಮಂತ್ರಿಯವರ ಗಮನ ಹರಿಸಬೇಕಾದ ವಿಷಯವಿದು. 'ಎಲ್ಲ ಮೊದಲೇ ಆಗಿದೆ, ನನ್ನ ಪಾತ್ರವೇನೂ ಇಲ್ಲ' ಎಂಬ ಕುಮಾರಸ್ವಾಮಿ ಅವರ ಮಾತು ನುಣುಚಿಕೊಳ್ಳುವ ಧೋರಣೆಯದು. ತಮ್ಮ ಸಹಿಗೆ ತಾವೇ ಹೊಣೆಗಾರ. ಒಟ್ಟಿನಲ್ಲಿ, ಸಾರ್ವಜನಿಕರಿಗೆ ಸರಿಯಾದ ಮಾಹಿತಿ ಸಿಗಬೇಕು.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಸಮಯಪಾಲನೆಯಿಂದ ಸಮಸ್ಯೆಗೆ ಪರಿಹಾರ

ಕೇಂದ್ರ ಸರ್ಕಾರಿ ನೌಕರರು ಹಾಜರಾತಿ ನಿಯಮಕ್ಕಿಂತ ಹೆಚ್ಚು ತಡವಾಗಿ ಕಚೇರಿಗೆ ಬಂದರೆ ಅವರ ಅರ್ಧ ದಿನದ ರಜೆಯನ್ನು ಕಡಿತಗೊಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿರುವುದು ಸರಿಯಾಗಿಯೇ ಇದೆ. ಗ್ರಾಹಕರು, ಸಾರ್ವಜನಿಕರಿಗೆ ಸೇವೆ ನೀಡಲೆಂದು ಇರುವ ಸಂಸ್ಥೆಗಳೆಲ್ಲವೂ ಹೀಗೆ ಸಮಯಕ್ಕೆ ಸರಿಯಾಗಿ ತೆರೆದು, ಎಲ್ಲ ಸಿಬ್ಬಂದಿ ತಮ್ಮ ತಮ್ಮ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಿದರೆ, ನಮ್ಮ ಹಲವಾರು ಸಮಸ್ಯೆಗಳು ತನ್ನಿಂದ ತಾನೇ ಬಗೆಹರಿಯುತ್ತವೆ.

ಬಸ್ಸು, ರೈಲು, ವಿಮಾನಗಳೆಲ್ಲ ಸಮಯಕ್ಕೆ ಸರಿಯಾಗಿ ಸಂಚರಿಸಬೇಕು ಎಂದು ನಾವೆಲ್ಲ ಬಯಸುತ್ತೇವೆ. ಆದರೆ ನಾವು ಮಾತ್ರ ಸಮಯ ಪರಿಪಾಲನೆಯಲ್ಲಿ ಹಿಂದೆ ಉಳಿಯುತ್ತೇವೆ!

ಬಿ.ಎನ್.ಭರತ್, ಬೆಂಗಳೂರು

ಜೀವನಾಂಶ ನೀಡಿಕೆ ನ್ಯಾಯ ಸಂಗತ ಆಧರಿಸಲಿ

ತರೀಕೆರೆ ತಾಲ್ಲೂಕಿನ ಲಕ್ಕವಳ್ಳಿ ಹೋಬಳಿಯ ಬಸವರಾಜಪ್ಪ ಎಂಬುವರಿಗೆ ತಿಂಗಳಿಗೆ ತಲಾ ₹ 3 ಸಾವಿರ ಜೀವನಾಂಶ ಕೊಡಬೇಕೆಂಬ ಉಪವಿಭಾಗಾಧಿಕಾರಿ ಆದೇಶವನ್ನು ಪ್ರಶ್ನಿಸಿ ಅವರ ಇಬ್ಬರು ಮಕ್ಕಳು ಜಿಲ್ಲಾಧಿಕಾರಿ ನ್ಯಾಯಾಲಯದ ಮೆಟ್ಟಿಲೇರಿದ್ದು, ಅದು ಕೂಡ ಈ ಮೊದಲಿನ ಆದೇಶವನ್ನು ಎತ್ತಿ ಹಿಡಿದಿರುವುದು ವರದಿಯಾಗಿದೆ (ಪ್ರಜಾ., ಜೂನ್ 21). ಇದನ್ನು ಓದಿದವರಿಗೆ ಈ ಮಕ್ಕಳು ಕೆಟ್ಟವರಂತೆ ಕಾಣಿಸುತ್ತಾರೆ. ಆದರೆ ಎಲ್ಲ ಪ್ರಕರಣಗಳಲ್ಲೂ ಏಕಪಕ್ಷೀಯವಾಗಿ ಮಕ್ಕಳನ್ನು ದೂಷಿಸುವುದರಲ್ಲಿ ಅರ್ಥವಿಲ್ಲ. ಮಕ್ಕಳನ್ನು ಪ್ರೀತಿಸುವ, ಅವರ ಒಳಿತಿಗಾಗಿ ಸದಾ ಯೋಚಿಸುವ, ಮಕ್ಕಳ ಸುಖವೇ ತನ್ನ ಸುಖ ಎಂದು ತಿಳಿಯುವ ತಂದೆಯನ್ನು ಮಕ್ಕಳು ಖಂಡಿತ ಚೆನ್ನಾಗಿಯೇ ನೋಡಿಕೊಳ್ಳುತ್ತಾರೆ, ಜೀವನಾಂಶವನ್ನೂ ಕೊಡುತ್ತಾರೆ.

ರಿತ್ತೀಗೆ ಇಬ್ಬರ ಪ್ರಶಾಂತವಾಗಿ ಸಾಹಿತಿಗಳ ಆತ್ಮಕಥನವನ್ನು ಓದಿದೆ. ಆ ಸಾಹಿತಿಗಳ ತಂದೆಯಂದಿರು ಬೇಜವಾಬ್ದಾರಿಯವರಾಗಿದ್ದರೆ ಹೋಗಿದ್ದರೆ, ಅವರು ಶಿಸ್ತಿನ ಜೀವನವನ್ನು ಅಳವಡಿಸಿಕೊಂಡಿದ್ದರೆ ಆ ಇಬ್ಬರೂ ಸಾಹಿತಿಗಳ ಬಾಲ್ಯದಲ್ಲಿ ತುತ್ತು ಅನ್ನಕ್ಕಾಗಿ ಪರಿತಪಿಸುವ ಸನ್ನಿವೇಶವೇ ಸೃಷ್ಟಿಯಾಗುತ್ತಿರಲಿಲ್ಲ. ವಾರಾನ್ನ ಮಾಡಿ, ಅಲ್ಲಿ ಇಲ್ಲಿ ಕೂಲಿ ಮಾಡಿ ಗಳಿಸಿ ಓದಬೇಕಾಗಿರಲಿಲ್ಲ. ಮಕ್ಕಳ ಶಿಕ್ಷಣದ ಬಗ್ಗೆ, ಬೇಕು ಬೇಡಗಳ ಬಗ್ಗೆ, ಉದ್ಯೋಗದ ಬಗ್ಗೆ ಯಾವ ತಂದೆ ಕಾಳಜಿ ವಹಿಸುವುದಿಲ್ಲವೋ ಅಂಥ ತಂದೆಗೆ ಮಕ್ಕಳು ಜೀವನಾಂಶ ಕೊಡದಿದ್ದರೆ ನೈತಿಕವಾಗಿ ಅದು ಅಪರಾಧವಲ್ಲ. ಅಂಥ ಮಕ್ಕಳು ಕೆಟ್ಟವರೂ ಅಲ್ಲ. ಮಕ್ಕಳು ತಂದೆಗೆ ಜೀವನಾಂಶವನ್ನು ಕೊಡುವ ವಿಷಯ ಬರೀ ಭಾವನಾತ್ಮಕವಾಗಿರದೆ, ನ್ಯಾಯ ಸಂಗತೆಗಳನ್ನು ಆಧರಿಸಿರಬೇಕು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ನಿರೀಕ್ಷೆಯಂತೆಯೇ ಶುರು ದರ ಏರಿಕೆ ಪರ್ವ!

ಚುನಾವಣೆ ಪರ್ವ ಮುಗಿದ ನಂತರ ದರ ಏರಿಕೆ ಪರ್ವ ಆರಂಭವಾಗುತ್ತದೆ ಎನ್ನುತ್ತಿದ್ದ ಜನಸಾಮಾನ್ಯರ ನಿರೀಕ್ಷೆ ಸುಳ್ಳಾಗಿಲ್ಲ. ಲೋಕಸಭಾ ಚುನಾವಣೆ ಮುಗಿದ ಮೂರೇ ದಿವಸಕ್ಕೆ ಕೇಂದ್ರದ ಹೆದ್ದಾರಿ ಶುಲ್ಕ (ಉದಾ: ಮೈಸೂರು-ಬೆಂಗಳೂರು) ಏರಿಕೆಯಾಯಿತು. ಇದರ ಬೆನ್ನಿಗೆ ರಾಜ್ಯ ಸರ್ಕಾರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆಯಾಯಿತು. ಇದರ ಬೆನ್ನಿಗೆ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ವೈದ್ಯರಿಗಿರುವಂತೆಯೇ ನೀರು ಮತ್ತು ಬಸ್ ಪ್ರಯಾಣ ದರ ಏರಿಕೆಯ ಮಾತು ಕೇಳಿಬರುತ್ತಿದೆ. ಹಾಗೆಯೇ ಎಟಿಎಂ ಸೇವಾ ಶುಲ್ಕ ಕೂಡ ಏರಬಹುದು ಎನ್ನುವ ಮಾತು ಬ್ಯಾಂಕಿಂಗ್ ವಲಯದಲ್ಲಿ ಕೇಳಿಬರುತ್ತಿದೆ.

ಅಂತೂ ಇಂತೂ ಕುಂತ ಮಕ್ಕಳಿಗೆ ರಾಜ್ಯವಿಲ್ಲ ಎನ್ನುವಂತೆ ಜನಸಾಮಾನ್ಯರಿಗೆ ಬೆಲೆ ಏರಿಕೆಯಿಂದ ಬಿಡುಗಡೆ ಇಲ್ಲ. ರಾಜಕಾರಣಿಗಳು ಎಂದಿನಂತೆ ತಾವು ವಿರೋಧ ಪಕ್ಷದಲ್ಲಿದ್ದಾಗ ಆಡಳಿತ ಪಕ್ಷದವರೇ ಎನ್ನುವುದನ್ನು ನೋಡಿಕೊಂಡು ಈ ಬೆಲೆ ಏರಿಕೆಗೆ ಪ್ರತಿಕ್ರಿಯಿಸುತ್ತಿದ್ದಾರೆ!

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ವಿವಿಧ ನೇಮಕಾತಿ ಮತ್ತು ಅರ್ಹತಾ ಪ್ರಕ್ರಿಯೆ

ಎಂಟು ವರ್ಷಗಳಲ್ಲಿ 48 ಪರೀಕ್ಷೆಗಳು ರದ್ದು, ತಡೆ

ಕೇಂದ್ರ ಸರ್ಕಾರದ ಅಧೀನ ಸಂಸ್ಥೆ ಎನ್‌ಟಿಎ (ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ) ನಡೆಸಿದ 2024ನೇ ಸಾಲಿನ ನೀಟ್‌–ಯುಜಿ ಪರೀಕ್ಷೆ ಕುರಿತು ಆಕ್ರೋಶ ವ್ಯಕ್ತವಾಗಿದೆ. ಅದರ ಬೆನ್ನಲ್ಲೇ ನೀಟ್‌–ಪಿಜಿ ಪರೀಕ್ಷೆಯನ್ನು ಎನ್‌ಟಿಎ ಮುಂದೂಡಿದೆ. ಜತೆಗೆ ನೆಟ್‌–ಜೆಆರ್‌ಎಫ್‌, ಸಿಎಸ್‌ಐಆರ್‌–ನೆಟ್‌–ಜೆಆರ್‌ಎಫ್‌ ಪರೀಕ್ಷೆಗಳೂ ರದ್ದಾಗಿವೆ. ಇವೆಲ್ಲದರ ವಿರುದ್ಧ ದೇಶದಾದ್ಯಂತ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದಾರೆ. ಕೇಂದ್ರ ಸರ್ಕಾರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸುವಲ್ಲಿ ವಿಫಲವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಆದರೆ ಹಿಂದಿನ ಎಂಟು ವರ್ಷಗಳಲ್ಲಿ ಹೀಗೆ 45ಕ್ಕೂ ಹೆಚ್ಚು ಪರೀಕ್ಷೆಗಳು ರದ್ದಾಗಿವೆ ಮತ್ತು ಸರಿಸುಮಾರು 2 ಕೋಟಿಯಷ್ಟು ಅಭ್ಯರ್ಥಿಗಳ ಶ್ರಮ ವ್ಯರ್ಥವಾಗಿದೆ

● ಜಯಸಿಂಹ ಆರ್‌.

ಕೇಂದ್ರ ಸರ್ಕಾರದ ವಿವಿಧ ನೇಮಕಾತಿ ಸಂಸ್ಥೆಗಳು, ವಿವಿಧ ಸಚಿವಾಲಯಗಳಿಗೆ ನೇಮಕಾತಿ ಪರೀಕ್ಷೆಯನ್ನು ನಡೆಸುತ್ತವೆ. ಅಂತೆಯೇ ವೃತ್ತಿಪರ ಕೋರ್ಸ್‌ ಮತ್ತು ಸಂಶೋಧನಾ ಕೋರ್ಸ್‌ಗಳಿಗೆ ಅರ್ಹತಾ–ಪ್ರವೇಶ ಪರೀಕ್ಷೆಯನ್ನೂ ನಡೆಸುತ್ತವೆ. ರಾಜ್ಯ ಸರ್ಕಾರಗಳ ಮಟ್ಟದಲ್ಲೂ ಈ ರೀತಿಯ ಪರೀಕ್ಷೆಗಳು ನಡೆಯುತ್ತವೆ. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಪರೀಕ್ಷಾ ಅಕ್ರಮದ ಕಾರಣಕ್ಕೆ ಪರೀಕ್ಷೆಯನ್ನೇ ರದ್ದುಗೊಳಿಸಿದ ಹಲವು ನಿದರ್ಶನಗಳಿವೆ. 2017ರಿಂದ 2024ರ ಜೂನ್‌ ನಡುವೆ ಈ ರೀತಿ ದೇಶದಾದ್ಯಂತ 48 ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ ಇಲ್ಲವೇ ಫಲಿತಾಂಶವನ್ನು ತಡೆಹಿಡಿಯಲಾಗಿದೆ. ಇವುಗಳಲ್ಲಿ ಕೇವಲ 14 ಪರೀಕ್ಷೆಗಳಲ್ಲೇ 1.97 ಕೋಟಿ ಅಭ್ಯರ್ಥಿಗಳು ಪಾಲ್ಗೊಂಡಿದ್ದರು (ಉಳಿದ 34 ನೇಮಕಾತಿ ಪರೀಕ್ಷೆಗಳಲ್ಲಿ ಎಷ್ಟು ಮಂದಿ ಪಾಲ್ಗೊಂಡಿದ್ದರು ಎಂಬ ಮಾಹಿತಿ ಲಭ್ಯವಿಲ್ಲ). ಪರೀಕ್ಷೆ ರದ್ದಾದ ಇಲ್ಲವೇ ಫಲಿತಾಂಶ ತಡೆಹಿಡಿದ ಕಾರಣಕ್ಕೆ ಅವರ ಶ್ರಮ ವ್ಯರ್ಥವಾದಂತೆ ಆಗಿದೆ.


1.97 ಕೋಟಿ — 2018–2024ರ ನಡುವೆ ದೇಶದಾದ್ಯಂತ ನಡೆದ/ನಡೆಯಬೇಕಿದ್ದ 14 ಪರೀಕ್ಷೆಗಳಲ್ಲಿ ಭಾಗಿಯಾಗಿದ್ದ/ಭಾಗಿಯಾಗಬೇಕಿದ್ದ ಅಭ್ಯರ್ಥಿಗಳ ಸಂಖ್ಯೆ

ಈ ಅವಧಿಯಲ್ಲಿ ಕೇಂದ್ರ ಸರ್ಕಾರದ ವಿವಿಧ ಸಂಸ್ಥೆಗಳು ಆಯೋಜಿಸಿದ್ದ 9 ಪರೀಕ್ಷೆಗಳು ರದ್ದಾಗಿವೆ. ಒಂದು ಪರೀಕ್ಷೆಯ ಪ್ರಕ್ರಿಯೆ ಇನ್ನೂ ನಡೆಯುತ್ತಿದೆ. ಈ ಪರೀಕ್ಷೆಗಳ ಪೈಕಿ ಐದರಲ್ಲಿ 72.76 ಲಕ್ಷ ಮಂದಿ, ಪರೀಕ್ಷೆ ಬರೆದಿದ್ದರು ಅಥವಾ ತಯಾರಿ ನಡೆಸಿದ್ದರು. ಕೇಂದ್ರ ಸರ್ಕಾರದ ಅಧೀನ ಸಂಸ್ಥೆಗಳಾದ ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ ಮತ್ತು ಸ್ಟಾಫ್‌ ಸೆಲೆಕ್ಷನ್‌ ಕಮಿಷನ್‌ ನಡೆಸಿದ ಹಲವು ಪರೀಕ್ಷೆಗಳು ಈಚಿನ ವರ್ಷಗಳಲ್ಲಿ ರದ್ದಾಗಿವೆ. 2023ರ ಡಿಸೆಂಬರ್‌ನಲ್ಲಿ ರಾಜ್ಯಸಭೆಗೆ ಕೇಂದ್ರ ಸರ್ಕಾರವು ನೀಡಿದ್ದ ಲಿಖಿತ ಉತ್ತರದಲ್ಲಿ, ಯಾವುದೇ ಪರೀಕ್ಷಾ ಅಕ್ರಮ ನಡೆದಿಲ್ಲ ಎಂದು ಹೇಳಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಪರೀಕ್ಷಾ ಅಕ್ರಮಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವೇ ಸಿಬಿಐಗೆ ಹಲವು ಪ್ರಕರಣಗಳನ್ನು ನೀಡಿದೆ.

72.76 ಲಕ್ಷ — 2018–2024ರ ನಡುವೆ ಕೇಂದ್ರ ಸರ್ಕಾರವು ನಡೆಸಿದ/ನಡೆಸಬೇಕಿದ್ದ ಐದು ಪರೀಕ್ಷೆಗಳಲ್ಲಿ ಭಾಗಿಯಾಗಿದ್ದ/ಭಾಗಿಯಾಗಬೇಕಿದ್ದ ಅಭ್ಯರ್ಥಿಗಳ ಸಂಖ್ಯೆ

ರಾಜ್ಯಮಟ್ಟದಲ್ಲಿ ನಡೆದ ಪರೀಕ್ಷೆಗಳಲ್ಲಿ ಅತಿಹೆಚ್ಚು ಪರೀಕ್ಷೆಗಳು ರದ್ದಾಗಿದ್ದು ಗುಜರಾತ್‌ ಮತ್ತು ಉತ್ತರ ಪ್ರದೇಶದಲ್ಲಿ. ಈ ಎರಡೂ ರಾಜ್ಯಗಳಲ್ಲಿ ತಲಾ ಆರು ಪರೀಕ್ಷೆಗಳನ್ನು ರದ್ದುಪಡಿಸಲಾಗಿದೆ. ಈ ಎರಡು ರಾಜ್ಯಗಳಿಂದಲೇ 1 ಕೋಟಿಗೂ ಹೆಚ್ಚು ಅಭ್ಯರ್ಥಿಗಳು ತೊಂದರೆಗೆ ಸಿಲುಕಿದ್ದಾರೆ.

ಬಿಜೆಪಿ ಅಧಿಕಾರದ ರಾಜ್ಯಗಳಲ್ಲೇ ಹೆಚ್ಚು ಅಕ್ರಮ



ಆಧಾರ: ಪಿಟಿಐ

ರಾಜಸ್ಥಾನ
- 2020ರ ಜನವರಿಯಲ್ಲಿ ನಡೆಯಬೇಕಿದ್ದ ಗ್ರಂಥಪಾಲಕರ ನೇಮಕಾತಿ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದ್ದವು. ಹೀಗಾಗಿ ಪರೀಕ್ಷೆ ರದ್ದು
- 2021ರ ಸೆಪ್ಟೆಂಬರ್‌ನಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆಯನ್ನು ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ 2022ರ ಜನವರಿಯಲ್ಲಿ ಪರೀಕ್ಷೆಯನ್ನು ರದ್ದುಪಡಿಸಲಾಗಿತ್ತು
- 2022ರ ನವೆಂಬರ್‌ 12ರಂದು ಅರಣ್ಯ ಪಾಲಕರ ಹುದ್ದೆಗೆ ನೇಮಕಾತಿ ಪರೀಕ್ಷೆ ಆಯೋಜಿಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷೆ ರದ್ದು
- 2022ರ ಡಿಸೆಂಬರ್‌ನಲ್ಲಿ ಶಿಕ್ಷಕರ ನೇಮಕಾತಿ ಪರೀಕ್ಷೆಗಳನ್ನು ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ, ಇನ್ನೂ ಹಲವು ಪತ್ರಿಕೆಗಳ ಪರೀಕ್ಷೆ ಬಾಕಿಯಿದ್ದರೂ ಪರೀಕ್ಷೆ ರದ್ದು

ಹರಿಯಾಣ
- 2017ರ ಜುಲೈ 17ರಂದು ಹರಿಯಾಣ ನ್ಯಾಯಾಂಗ ಇಲಾಖೆಯ ವಿವಿಧ ಹುದ್ದೆಗಳಿಗೆ ಪ್ರಾಥಮಿಕ ಹಂತದ ಲಿಖಿತ ಪರೀಕ್ಷೆ ಆಯೋಜಿಸಲಾಗಿತ್ತು. ಆದರೆ, ಪ್ರಶ್ನೆ ಪತ್ರಿಕೆ ಸೋರಿಕೆಯ ಕಾರಣದಿಂದ ಪರೀಕ್ಷೆ ರದ್ದು
- 2021ರ ಆಗಸ್ಟ್‌7ರಂದು ರಾಜ್ಯ 'ಸ್ಟಾಫ್‌ ಸೆಲೆಕ್ಷನ್‌ ಕಮಿಷನ್‌' ಪೊಲೀಸ್‌ ಕಾನ್‌ಸ್ಟೆಬಲ್‌ ಹುದ್ದೆಗಳಿಗೆ ಪರೀಕ್ಷೆ ಆಯೋಜಿಸಿತ್ತು. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದ ಕಾರಣ, ಪರೀಕ್ಷೆಯ ದಿನವೇ ರದ್ದು

ಹಿಮಾಚಲ ಪ್ರದೇಶ
- 2022ರ ಡಿಸೆಂಬರ್‌ 25ರ 'ಕಿರಿಯ ಕಚೇರಿ ಸಹಾಯಕ' ಹುದ್ದೆಯ ಪರೀಕ್ಷೆಯನ್ನು, ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ರದ್ದು

ಜಮ್ಮು–ಕಾಶ್ಮೀರ
- 2022ರ ಅಕ್ಟೋಬರ್‌–ನವೆಂಬರ್‌ನಲ್ಲಿ ಜಮ್ಮು–ಕಾಶ್ಮೀರ ಪೊಲೀಸ್‌ ಇಲಾಖೆಯಲ್ಲಿ 1,200 ವಿವಿಧ ಹುದ್ದೆಗಳಿಗೆ ಪರೀಕ್ಷೆ ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಫಲಿತಾಂಶಕ್ಕೆ ತಡೆ
- 2023ರ ಫೆಬ್ರುವರಿಯಲ್ಲಿ ವಿವಿಧ ಹುದ್ದೆಗಳಿಗೆ ಪರೀಕ್ಷೆ ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ನೇಮಕಾತಿ ಪ್ರಕ್ರಿಯೆಗೆ ತಡೆ

ಉತ್ತರಾಖಂಡ
- 2021ರ ಮೇನಲ್ಲಿ, ಜುಲೈನಲ್ಲಿ ಮತ್ತು ಸೆಪ್ಟೆಂಬರ್‌ನಲ್ಲಿವಿವಿಧ ಇಲಾಖೆಗಳ ವಿವಿಧ ಹುದ್ದೆಗಳಿಗೆ ನಡೆದಿದ್ದ ಮೂರು ಪರೀಕ್ಷೆಗಳು, ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ರದ್ದು

ಅರುಣಾಚಲ ಪ್ರದೇಶ
- 2022ರ ಅಕ್ಟೋಬರ್‌ನಲ್ಲಿ ನಡೆದಿದ್ದ ಪೊಲೀಸ್‌ ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದ್ದವು. ಪ್ರಕರಣವನ್ನು ದಾಖಲಿಸಿಕೊಂಡು, ಹಲವರನ್ನು ಬಂಧಿಸಲಾಗಿತ್ತು. ಪ್ರಕರಣದ ತನಿಖೆ ಇನ್ನೂ ನಡೆಯುತ್ತಿದೆ

ಅಸ್ಸಾಂ
- 2020ರ ಸೆಪ್ಟೆಂಬರ್‌ 3ರಂದು ಅಸ್ಸಾಂ ಪೊಲೀಸ್‌ ಇಲಾಖೆಯು ಸಬ್‌ ಇನ್‌ಸ್ಪೆಕ್ಟರ್‌ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ನಡೆಸಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆಯಾದ ಕಾರಣ, ಪರೀಕ್ಷೆ ಆರಂಭವಾಗಿ ಕೆಲವೇ ನಿಮಿಷಗಳಲ್ಲಿ ಅದನ್ನು ರದ್ದುಪಡಿಸಲಾಗಿತ್ತು

ಗುಜರಾತ್‌: ಅತಿಹೆಚ್ಚು ಪರೀಕ್ಷೆಗಳು ರದ್ದು
- 2018ರ ಡಿಸೆಂಬರ್‌ 2ರಂದು 2,440 ಪೊಲೀಸ್‌ ಕಾನ್‌ಸ್ಟೆಬಲ್‌ ಹುದ್ದೆಗಳಿಗೆ ಲಿಖಿತ ಪರೀಕ್ಷೆ ನಡೆಯಬೇಕಿತ್ತು. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆಯಾದ ಕಾರಣ ಪರೀಕ್ಷೆಯನ್ನು ರದ್ದುಪಡಿಸಲಾಗಿತ್ತು. 8.75 ಲಕ್ಷ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಿಂದ ವಾಪಸ್‌ ತೆರಳಿದ್ದರು
- 2019ರ ಅಕ್ಟೋಬರ್‌ನಲ್ಲಿ 3,500 ಕ್ಲರ್ಕ್‌ ಹುದ್ದೆಗೆ ಪರೀಕ್ಷೆ ಆಯೋಜಿಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಪರೀಕ್ಷೆ ರದ್ದು
- 2019ರ ನವೆಂಬರ್‌ 17ರಂದು 3,500 ಗುಜರಾತ್‌ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕ್ಲರ್ಕ್‌ ಹುದ್ದೆ ಭರ್ತಿಗೆ ಪರೀಕ್ಷೆ ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಪರೀಕ್ಷೆ ರದ್ದು
- 2021ರ ಡಿಸೆಂಬರ್‌ 12ರಂದು 186 ಕ್ಲರ್ಕ್‌ ಹುದ್ದೆಗಳಿಗೆ ಗುಜರಾತ್‌ ಸೇವಾ ನೇಮಕಾತಿ ಆಯೋಗ ಪರೀಕ್ಷೆ ನಡೆಸಿತ್ತು. 88,000 ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಆದರೆ ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಫಲಿತಾಂಶಕ್ಕೆ ತಡೆ
- 2022ರ ಫೆಬ್ರುವರಿಯಲ್ಲಿ 3,500 ಕ್ಲರ್ಕ್‌ ಹುದ್ದೆಗಳಿಗೆ ಮೂರನೇ ಬಾರಿಗೆ ಪರೀಕ್ಷೆ ಆಯೋಜಿಸಲಾಗಿತ್ತು. ಒಟ್ಟು 8 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯಬೇಕಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ, ಮೀಸಲಾತಿ ವಿವಾದ ಸೇರಿ ಹಲವು ಕಾರಣಗಳನ್ನು ನೀಡಿ ಪರೀಕ್ಷೆಯನ್ನು ರದ್ದುಪಡಿಸಲಾಯಿತು. ಈ ಪರೀಕ್ಷೆ ಹೀಗೆ ರದ್ದಾಗಿದ್ದು ಮೂರನೇ ಬಾರಿ
- 2023ರ ಜನವರಿ 29ರಂದು 1,181 ಕ್ಲರ್ಕ್‌ ಹುದ್ದೆಗಳಿಗೆ ಪರೀಕ್ಷೆ ಆಯೋಜಿಸಲಾಗಿತ್ತು. 9.50 ಲಕ್ಷ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಗಳಲ್ಲಿ ಹಾಜರಿದ್ದರು. ಪ್ರಶ್ನೆ ಪತ್ರಿಕೆ ಸೋರಿಕೆಯ ಕಾರಣದಿಂದ ಪರೀಕ್ಷೆ ರದ್ದು

6 — 2018ರಿಂದ 2024ರವರೆಗೆ ರದ್ದಾದ ನೇಮಕಾತಿ ಪರೀಕ್ಷೆಗಳ ಸಂಖ್ಯೆ

27.13 ಲಕ್ಷ — ಈ ಪರೀಕ್ಷೆಗಳಿಗೆ ಹಾಜರಾಗಿದ್ದ ಮತ್ತು ಹಾಜರಾಗಬೇಕಿದ್ದ ಅಭ್ಯರ್ಥಿಗಳ ಸಂಖ್ಯೆ

ಮಹಾರಾಷ್ಟ್ರ
- 2020ರ ಜನವರಿಯಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪದಲ್ಲಿ ಫಲಿತಾಂಶಕ್ಕೆ ತಡೆ
- 2021ರ ನವೆಂಬರ್‌:ವಿವಿಧ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ನಡೆಸಲಾಗಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣ ಫಲಿತಾಂಶಕ್ಕೆ ತಡೆ

ಕರ್ನಾಟಕ
- 2019–20ರಲ್ಲಿ ಎಫ್‌ಡಿಎ ಪರೀಕ್ಷೆ ಮುಂದೂಡಿಕೆ
- 2021–22ನೇ ಸಾಲಿನಲ್ಲಿ ಪಿಎಸ್‌ಐ ನೇಮಕಾತಿಯಲ್ಲಿ ಅಕ್ರಮ ಸಂಬಂಧ, ನೇಮಕಾತಿ ಪ್ರಕ್ರಿಯೆ ರದ್ದು

ಬಿಹಾರ
- 2019ರ ಡಿಸೆಂಬರ್‌ 22: ಸಬ್‌ ಇನ್‌ಸ್ಪೆಕ್ಟರ್‌ ನೇಮಕಾತಿ ಪರೀಕ್ಷೆ ಪ್ರಶ್ನೆ ಪತ್ರಿಕೆಗಳು ಸೋರಿಕೆ
- 2022ರ ಮೇ: ಪೊಲೀಸ್‌ ಕಾನ್‌ಸ್ಟೆಬಲ್‌ ಹುದ್ದೆಗೆ ಪರೀಕ್ಷೆ. 6.65 ಲಕ್ಷ ಅಭ್ಯರ್ಥಿಗಳು ಭಾಗಿ. ಪ್ರಶ್ನೆ ಪತ್ರಿಕೆ ಸೋರಿಕೆ, ಪರೀಕ್ಷೆ ರದ್ದು
- 2022ರ ಡಿಸೆಂಬರ್‌ 24–25: ಎಫ್‌ಡಿಎ ಪರೀಕ್ಷೆ. ಪ್ರಶ್ನೆ ಪತ್ರಿಕೆ ಸೋರಿಕೆ, ನೇಮಕಾತಿ ಪ್ರಕ್ರಿಯೆ ರದ್ದು
- 2024ರ ಮಾರ್ಚ್‌ 14–15: ಶಿಕ್ಷಕರ ನೇಮಕಾತಿ ಪರೀಕ್ಷೆ. ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಪ್ರಕರಣ ದಾಖಲು

ಉತ್ತರ ಪ್ರದೇಶ: ಅತಿಹೆಚ್ಚು ಅಭ್ಯರ್ಥಿಗಳಿಗೆ ತೊಂದರೆ
- 2018ರ ಸೆಪ್ಟೆಂಬರ್‌ನಲ್ಲಿ ಕೊಳವೆಬಾವಿ ಆಪರೇಟರ್‌ ಹುದ್ದೆಗಳಿಗೆ ನಡೆಸಿದ್ದ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆ, ಪರೀಕ್ಷೆ ರದ್ದು
- 2019ರ ಜನವರಿ 6ರಂದು 69,000 ಶಿಕ್ಷಕರ ನೇಮಕಾತಿ ಪರೀಕ್ಷೆ. 20 ಲಕ್ಷಕ್ಕೂ ಹೆಚ್ಚು ಮಂದಿ ಭಾಗಿ. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಫಲಿತಾಂಶವನ್ನು ಮೂರು ವರ್ಷ ತಡೆಹಿಡಿಯಲಾಗಿತ್ತು. ಇನ್ನೂ ಎಲ್ಲಾ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ದೊರೆತಿಲ್ಲ
- 2021ರ ಜನವರಿ 28: ಶಿಕ್ಷಕರ ಅರ್ಹತಾ ಪರೀಕ್ಷೆ, 20 ಲಕ್ಷ ಮಂದಿ ಭಾಗಿ. ಪ್ರಶ್ನೆ ಪತ್ರಿಕೆ ಸೋರಿಕೆಯ ಕಾರಣದಿಂದ ಪರೀಕ್ಷೆಯ ದಿನವೇ ರದ್ದು
- 2022ರ ಜುಲೈ ಮೂರನೇ ವಾರದಲ್ಲಿ ಲೇಖಪಾಲ ಹುದ್ದೆಗೆ ಪರೀಕ್ಷೆ. 2.50 ಲಕ್ಷ ಮಂದಿ ಭಾಗಿ. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಫಲಿತಾಂಶಕ್ಕೆ ತಡೆ. ಪ್ರಕರಣದ ತನಿಖೆ ಇನ್ನೂ ನಡೆಯುತ್ತಿದೆ
- 2024ರ ಫೆಬ್ರುವರಿ 17–18ರಂದು ಪೊಲೀಸ್‌ ಇಲಾಖೆಯ ವಿವಿಧ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ. 48 ಲಕ್ಷ ಮಂದಿ ಭಾಗಿ. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಪರೀಕ್ಷೆ ರದ್ದು.
- 2024ರ ಫೆಬ್ರುವರಿ 11ರಂದು ವಿವಿಧ ಹುದ್ದೆಗಳಿಗೆ ಪರೀಕ್ಷೆ. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಪರೀಕ್ಷೆ ರದ್ದು

90.50+ ಲಕ್ಷ — ಈ ಪರೀಕ್ಷೆಗಳಲ್ಲಿಗೆ ಹಾಜರಾಗಿದ್ದ ಅಭ್ಯರ್ಥಿಗಳ ಸಂಖ್ಯೆ

ಜಾರ್ಖಂಡ್‌
- 2024ರ ಫೆಬ್ರುವರಿ: ವಿವಿಧ ಹುದ್ದೆಗಳಿಗೆ ಪರೀಕ್ಷೆ. ಪ್ರಶ್ನೆ ಪತ್ರಿಕೆ ಸೋರಿಕೆ ಸಂಬಂಧ ಪ್ರಕರಣ

ಮಧ್ಯಪ್ರದೇಶ
- 2022ರ ಏಪ್ರಿಲ್‌ನಲ್ಲಿ ಶಿಕ್ಷಕರ ಅರ್ಹತಾ ಪರೀಕ್ಷೆ, ಪ್ರಶ್ನೆ ಪತ್ರಿಕೆ ಸೋರಿಕೆಯಿಂದ ಮುಂದೂಡಿಕೆ

ತೆಲಂಗಾಣ
- 2023ರ ಮಾರ್ಚ್‌: ಹಲವು ಹುದ್ದೆಗಳಿಗೆ ಪರೀಕ್ಷೆ. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ಮುಂದೂಡಿಕೆ

ಒಡಿಶಾ
- 2023ರ ಜುಲೈ 13: ಕಿರಿಯ ಎಂಜಿನಿಯರ್‌ ಹುದ್ದೆಗೆ ಪರೀಕ್ಷೆ. ಪ್ರಶ್ನೆ ಪತ್ರಿಕೆ ಸೋರಿಕೆ ಕಾರಣದಿಂದ ರದ್ದು

ಕೇಂದ್ರದ ಪರೀಕ್ಷೆಗಳಲ್ಲೂ ಅಕ್ರಮ
- 2017ರಲ್ಲಿ 'ಸ್ಟಾಫ್‌ ಸೆಲೆಕ್ಷನ್‌ ಕಮಿಟಿ' ನೇಮಕಾತಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾದ ಕಾರಣ, ಪರೀಕ್ಷೆ ರದ್ದು
- 2018ರ ಫೆಬ್ರುವರಿ 17ರಂದು 'ಸ್ಟಾಫ್‌ ಸೆಲೆಕ್ಷನ್‌ ಕಮಿಟಿ' ಆಯೋಜಿಸಿದ್ದ 'ಗ್ರಾಜುಯೇಟ್‌ ಲೆವೆಲ್‌ ಆಫೀಸರ್ಸ್‌' ಹುದ್ದೆಗಳ ಲಿಖಿತ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆ
- 2018ನೇ ಸಾಲಿನ ನೀಟ್‌ ಪರೀಕ್ಷೆಯು ಮೇ 6ರಂದು ನಡೆದಿತ್ತು. 13.26 ಲಕ್ಷ ವಿದ್ಯಾರ್ಥಿಗಳು ಪಾಲ್ಗೊಂಡಿದ್ದ ಈ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆ
- 2021ರ ಜನವರಿ 3ರಂದು ರೈಲ್ವೆಯ ವಿವಿಧ ಹುದ್ದೆಗಳಿಗೆ ನೇಮಕಾತಿ ಪರೀಕ್ಷೆ ನಡೆದಿತ್ತು. ಪರೀಕ್ಷಾ ಅಕ್ರಮದ ಕಾರಣದಿಂದ ನೇಮಕಾತಿ ಪ್ರಕ್ರಿಯೆಗೆ ತಡೆ
- 2021ರ ಫೆಬ್ರುವರಿಯಲ್ಲಿ ಸೇನೆಯು 'ಜನರಲ್‌ ಡ್ಯೂಟಿ ಆಫೀಸರ್ಸ್‌' ಹುದ್ದೆಗೆ ಲಿಖಿತ ಪರೀಕ್ಷೆ ಆಯೋಜಿಸಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆಯಾದ ಕಾರಣ, ಪರೀಕ್ಷೆಯನ್ನು ರದ್ದುಪಡಿಸಿತ್ತು
- 2021ನೇ ಸಾಲಿನ ಜೆಇಇ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾಗಿದ್ದವು. 22 ಲಕ್ಷ ವಿದ್ಯಾರ್ಥಿಗಳು ಈ ಪರೀಕ್ಷೆಯಲ್ಲಿ ಭಾಗಿಯಾಗಿದ್ದರು. ಪ್ರಶ್ನೆ ಪತ್ರಿಕೆ ಸೋರಿಕೆಯ ಕಾರಣದಿಂದ ಫಲಿತಾಂಶಕ್ಕೆ ತಡೆ. ಸಿಬಿಐ ಪ್ರಕರಣ ದಾಖಲಿಸಿಕೊಂಡಿತ್ತು
- 2024ರ ನೀಟ್‌–ಯುಜಿ ಪರೀಕ್ಷೆ: ಗ್ರೇಸ್‌ ಅಂಕ ನೀಡಿಕೆ ಮತ್ತು ಪರೀಕ್ಷಾ ಅವ್ಯವಸ್ಥೆಯ ಕಾರಣದಿಂದ ವಿವಾದದಲ್ಲಿದೆ. 24 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು
- 2024ರ ನೀಟ್‌–ಪಿಜಿ ಪರೀಕ್ಷೆ ಮುಂದೂಡಿಕೆ. 2.28 ಲಕ್ಷ ಮಂದಿ ಪರೀಕ್ಷೆ ಬರೆಯಬೇಕಿತ್ತು
- 2024ರ ನೆಟ್‌–ಜೆಆರ್‌ಎಫ್‌ ಪರೀಕ್ಷೆ ಪ್ರಶ್ನೆ ಪತ್ರಿಕೆ ಸೋರಿಕೆ ಶಂಕೆಯಲ್ಲಿ ರದ್ದು. 11.22 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು
- 2024ರ ಸಿಎಸ್‌ಐಆರ್‌–ನೆಟ್‌–ಜೆಆರ್‌ಎಫ್‌ ಪರೀಕ್ಷೆ ನಡೆಯಬೇಕಿತ್ತು. ಪ್ರಶ್ನೆ ಪತ್ರಿಕೆ ಸೋರಿಕೆ ಶಂಕೆಯಲ್ಲಿ ರದ್ದು

ಸಿನಿ ಬಿಟ್ಸ್‌

ಜುಲೈ 13ಕ್ಕೆ 'ಏಕಂ' ವೆಬ್‌ಸರಣಿ ಬಿಡುಗಡೆ



ನಟ ರಕ್ಷಿತ್‌ ಶೆಟ್ಟಿ ಅವರ ಪರಂವಃ ಸ್ಟುಡಿಯೋಸ್‌ ಹಾಗು ಜರ್ನಿಮ್ಯಾನ್‌ ಫಿಲಂಸ್‌ ಜಂಟಿಯಾಗಿ ನಿರ್ಮಾಣ ಮಾಡಿರುವ ಕನ್ನಡ ವೆಬ್‌ಸರಣಿ 'ಏಕಂ' ಜುಲೈ 13ರಂದು ಬಿಡುಗಡೆಯಾಗಲಿದೆ.

ಪ್ರಕಾಶ್‌ ರಾಜ್‌ ಹಾಗೂ ರಾಜ್‌ ಬಿ.ಶೆಟ್ಟಿ ಮುಖ್ಯಭೂಮಿಕೆಯಲ್ಲಿರುವ ಈ ಸರಣಿಯು 'ekamtheseries.com'ನಲ್ಲಿ ಲಭ್ಯವಾಗಲಿದೆ. 'ಎಲ್ಲ ಒಟಿಟಿ ವೇದಿಕೆಗಳಿಂದ ನಾವು ತಿರಸ್ಕರಿಸಲ್ಪಟ್ಟೆವು. ಏಕೆಂದರೆ 'ಏಕಂ' ಒಂದು ಕನ್ನಡ ವೆಬ್‌ಸರಣಿಯಾಗಿದೆ. ನಮ್ಮ ನಾಡಿನ ಸೊಗಡು ಇರುವ ಕಥೆಗಳನ್ನು ಹೇಳಬೇಕು, ಅದೇ ಕಥೆಗಳು ನಮ್ಮ ನಾಡಿನ ಹೊರಗಿರುವ ಜನರಿಗೂ ತಲುಪಬೇಕು ಎನ್ನುವ ಉದ್ದೇಶದಿಂದ ತಮ್ಮದೇ ವೇದಿಕೆ ಸೃಷ್ಟಿಸಿಕೊಂಡೆವು' ಎನ್ನುತ್ತಾರೆ ಸರಣಿಯ ಕರ್ತೃಗಳಲ್ಲಿ ಒಬ್ಬರಾದ ಸುಮಂತ್‌ ಭಟ್‌. 149 ರೂ. ನೀಡಿ ಈ ಸರಣಿಯ ಎಲ್ಲ ಸಂಚಿಕೆಗಳನ್ನು ಜನರು ವೀಕ್ಷಿಸಬಹುದು.

2020ರಲ್ಲಿ ಪಯಣ ಆರಂಭ: ಈ ವೆಬ್‌ಸರಣಿ ಕುರಿತು 'ಎಕ್ಸ್‌'ನಲ್ಲಿ ಪೋಸ್ಟ್‌ ಮಾಡಿರುವ ರಕ್ಷಿತ್‌ ಶೆಟ್ಟಿ, '2020 ಜನವರಿ ಅಥವಾ ಫೆಬ್ರುವರಿ. ನೆನಪು ಮಬ್ಬಾಗಿದೆ! ಏನೋ ಹೊಸತೊಂದನ್ನು ಮಾಡುವ ಉತ್ಸಾಹ ನಮ್ಮಲ್ಲಿ. ಕನ್ನಡದಲ್ಲೊಂದು ವೆಬ್‌ ಸರಣಿ ಹೊರ ಬರಲು ಇದೇ ಸೂಕ್ತ ಸಮಯ ಎಂದೆನಿಸಿತ್ತು. ಆದರೆ ಅದೇ ಸಮಯಕ್ಕೆ ಕೋವಿಡ್‌ ಬಂತು. ಆದರೂ ಹಿಂದೆ ಸರಿಯದೆ ಮುನ್ನುಗ್ಗಿದೆವು. ಏಕಂ' ಅನ್ನು ಹೊರತರಲು ಪಟ್ಟ ಶ್ರಮ ಅಷ್ಟಿಷ್ಟಲ್ಲ. ಎಲ್ಲೆಡೆ ನಿರಾಸೆ. ಅದೇ ನೆಪ. ಯಾವುದೇ ಕೃತಿಯ ಅರ್ಹತೆಯನ್ನು ನಿರ್ಧರಿಸುವ ಅವಕಾಶ ಹಾಗೂ ಹಕ್ಕು, ಪ್ರೇಕ್ಷಕರಿಗಿರಬೇಕು. ಹಾಗಾಗಿ, 'ಏಕಂ' ಅನ್ನು ನಾವು ನಮ್ಮದೇ ಆದ ವೇದಿಕೆಯಲ್ಲಿ ನಿಮ್ಮ ಮುಂದೆ ತರಲು ನಿಶ್ಚಯಿಸಿದ್ದೇವೆ' ಎಂದಿದ್ದಾರೆ.

'ಟೆಡ್ಡಿ ಬೇರ್‌' ಟ್ರೇಲರ್‌ ಬಿಡುಗಡೆ

ಬಹುತೇಕ ಹೊಸಬರಿಂದಲೇ ಕೂಡಿರುವ 'ಟೆಡ್ಡಿ ಬೇರ್‌' ಚಿತ್ರದ ಟ್ರೇಲರ್‌ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಜನಪ್ರಿಯ ನಿರ್ದೇಶಕ ಪುರಿಜಗನ್ನಾಥ್‌ ಅವರ ಬಳಿ ಕೆಲಸ ಮಾಡಿದ್ದ ಲೋಕೇಶ್‌.ಬಿ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಆದ್ಯಲಕ್ಷೀ ಪ್ರೊಡಕ್ಷನ್‌ ಅಡಿಯಲ್ಲಿ ಜ್ಯೋತಿತಾರಕೇಶ್‌, ಭರತ್‌ ಮತ್ತು ನವೀನ್‌ ಜಂಟಿಯಾಗಿ ಬಂಡವಾಳ ಹೂಡಿದ್ದಾರೆ.

'ಈಗಾಗಲೇ ಮೂರು ಸಿನಿಮಾಗಳನ್ನು ನಿರ್ದೇಶಿಸಿದ್ದೇನೆ. ಅವೆಲ್ಲಕ್ಕಿಂತ ಮೊದಲು ಪ್ರಾರಂಭಿಸಿದ ಸಿನಿಮಾವಿದು. ಆತ್ಮ ಯಾವ ರೀತಿ ಗೊಂಬೆಯೊಳಗೆ ಸೇರಿಕೊಳ್ಳುತ್ತದೆ ಎಂಬ ಕಥೆಯನ್ನು ಹೊಂದಿದೆ. ಬೆಂಗಳೂರು, ಮಂಗಳೂರಿನಲ್ಲಿ ಚಿತ್ರೀಕರಣ ನಡೆಸಲಾಗಿದೆ' ಎಂದರು ನಿರ್ದೇಶಕರು.

ಭಾರ್ಗವ್‌ ಈ ಚಿತ್ರದ ನಾಯಕ. ಶೈಲಜಸಿಂಹ, ದೀನಪೂಜಾರಿ ನಾಯಕಿಯರು. ಇವರೊಂದಿಗೆ ಸ್ವರ್ಶರೇಖಾ, ದಿಶಾಪೂವಯ್ಯ, ಕಿಟ್ಟಿತಾಳಿಕೋಟೆ, ಮುತ್ತು ಮುಂತಾದವರು ಅಭಿನಯಿಸಿದ್ದಾರೆ.

ವಿವೇಕ್‌ ಜಂಗ್ಲಿ ಸಂಗೀತ, ದೀಪು-ಬೆನಕರಾಜ್‌ ಛಾಯಾಚಿತ್ರಗ್ರಹಣ, ಸಂತೋಷ್‌ ಸಂಕಲನ ಚಿತ್ರಕ್ಕಿದೆ. ಜುಲೈ ತಿಂಗಳಲ್ಲಿ ಸಿನಿಮಾವು ತೆರೆಗೆ ಬರಲಿದೆ ಎಂದು ಚಿತ್ರತಂಡ ಹೇಳಿದೆ.



ಶೈಲಜಸಿಂಹ, ಭಾರ್ಗವ್‌, ದೀನಪೂಜಾರಿ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಜ್ಞಾನದ ಸರಿಯಾದ ಬಳಕೆ

ನುಡಿ ಬೆಳಗು




ಎಚ್‌.ಎಸ್‌.ನವೀನಕುಮಾರ್‌, ಹೊಸದುರ್ಗ

ಇದು ಪಂಚತಂತ್ರದ ಕತೆ. ಒಂದೂರಿನಲ್ಲಿ ನಾಲ್ವರು ಸ್ನೇಹಿತರಿದ್ದರು. ಅವರಲ್ಲಿ ಮೂವರು ಸ್ನೇಹಿತರು ಅರವತ್ತನಾಲ್ಕು ವಿದ್ಯೆಗಳನ್ನೂ ಅರೆದು ಕುಡಿದ ಮಹಾ ಪಂಡಿತರಾಗಿದ್ದರು. ನಾಲ್ಕನೆಯವ ಮಾತ್ರ ಈ ಮೂವರಷ್ಟು ವಿದ್ಯಾವಂತನಿರಲಿಲ್ಲ. ಆದರೆ ಅವನಲ್ಲಿ ಸಮಯ ಪ್ರಜ್ಞೆ, ಸಾಮಾನ್ಯ ತಿಳಿವಳಿಕೆಯು ಈ ಬುದ್ಧಿವಂತರಿಗಿಂತ ಜಾಸ್ತಿ ಇತ್ತು. ಈ ಸ್ನೇಹಿತರು ದೂರದ ದೇಶಕ್ಕೆ ಹೋಗಿ ತಾವು ಕಲಿತ ವಿದ್ಯೆಯಿಂದ ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕೆಂಬ ತೀರ್ಮಾನಕ್ಕೆ ಬಂದರು. ಹಾಗೆ ಹೋಗುವಾಗ ಮೂವರು ಮಿತ್ರರು, ನಾಲ್ಕನೆಯವನು ತಮ್ಮಷ್ಟು ಬುದ್ಧಿವಂತನಿರದ ಕಾರಣ, ಅವನನ್ನು ತಮ್ಮ ಜೊತೆಯಲ್ಲಿ ಕರೆದೊಯ್ಯಲು ಇಷ್ಟಪಡಲಿಲ್ಲ.

ಆದರೆ ಕೊನೆಗೆ ಆತ ತಮ್ಮ ಬಾಲ್ಯ ಸ್ನೇಹಿತನಾಗಿದ್ದರಿಂದ ಅವನೂ ಬರಲಿ ಎಂದು ತಮ್ಮೊಂದಿಗೆ ಕರೆದುಕೊಂಡು ದೂರದ ದೇಶಕ್ಕೆ ಹೊರಟರು. ಹಾಗೆ ಹೋಗುವಾಗ ಅವರು ದಟ್ಟವಾದ ಕಾಡೊಂದನ್ನು ದಾಟಿ ಹೋಗಬೇಕಾಗಿತ್ತು. ಆ ಕಾಡು ಹಾದಿಯಲ್ಲಿ ಅವರಿಗೆ ಒಂದು ಬೃಹತ್‌ ಪ್ರಾಣಿಯ ಮೂಳೆಗಳು ಗೋಚರಿಸಿದವು. ಮೂವರು ಸ್ನೇಹಿತರು ತಮ್ಮ ಬುದ್ಧಿಶಕ್ತಿ ಹಾಗೂ ಮಂತ್ರಶಕ್ತಿಯ ಬಲವನ್ನು ಇಲ್ಲಿಯೇ ಪರೀಕ್ಷಿಸೋಣ, ಇದಕ್ಕೊಂದು ಸರಿಯಾದ ಅವಕಾಶ ಸಿಕ್ಕಿದೆ, ಈ ಪ್ರಾಣಿಯ ಮೂಳೆಗಳನ್ನು ಸರಿಯಾಗಿ ಜೋಡಿಸಿ, ಇದಕ್ಕೆ ತಮ್ಮ ಮಂತ್ರಶಕ್ತಿಯಿಂದ ಮರು ಜೀವ ಕೊಡೋಣ ಎಂದು ನಿರ್ಧರಿಸಿದರು. ಆಗ ನಾಲ್ಕನೇ ಸ್ನೇಹಿತ, 'ಮಿತ್ರರೇ, ಖಂಡಿತಾ ಬೇಡ, ಆ ರೀತಿ ಮಾಡುವ ಮುನ್ನ ಸ್ವಲ್ಪ ಯೋಚಿಸಿ' ಎಂದು ಸಲಹೆ ನೀಡಿದ.

'ದಡ್ಡ ನಿನಗೆ ಈ ವಿದ್ಯೆ ಗೊತ್ತಿಲ್ಲವೆಂದು ಅಸೂಯೆ ಪಡಬೇಡ, ಸುಮ್ಮನಿರು' ಎಂದು ಅವನನ್ನು ಮೂದಲಿಸಿ ಬೈದು ಸುಮ್ಮನಾಗಿಸಿದ ಮೂವರು ಸ್ನೇಹಿತರು, ಆ ಪ್ರಾಣಿಯ ಮೂಳೆಗಳನ್ನು ಜೋಡಿಸಿ, ತಮ್ಮ ಮಂತ್ರ ತಂತ್ರದ ಬಲದಿಂದ ಅದಕ್ಕೆ ರಕ್ತ ಮಾಂಸ ತುಂಬಿಸಿದರು. ಅದಕ್ಕೆ ಅಂಗಾಂಗಗಳ ಮರು ಜೋಡಣೆ ಮಾಡಿ, ಚರ್ಮವನ್ನೂ ತೊಡಿಸಿದರು. ನೋಡಿದರೆ ಅದೊಂದು ಬೃಹತ್‌ ಸಿಂಹವಾಗಿತ್ತು. ಇನ್ನೂ ನಿರ್ಜೀವವಾಗಿದ್ದ ಈ ಸಿಂಹಕ್ಕೆ ತಮ್ಮ ಮಂತ್ರಶಕ್ತಿಯಿಂದ ಜೀವ ತುಂಬುವುದೊಂದೇ ಬಾಕಿ ಉಳಿದಿತ್ತು.

ಮೂವರು ಬುದ್ಧಿವಂತರು ಆ ಕೆಲಸಕ್ಕೂ ಮುಂದಾದಾಗ, ಸಾಮಾನ್ಯ ಪ್ರಜ್ಞೆಯುಳ್ಳ ನಾಲ್ಕನೇ ಸ್ನೇಹಿತ ಕೂಗಿ ಹೇಳಿದ 'ದಯವಿಟ್ಟು ಅದಕ್ಕೆ ಜೀವ ತುಂಬಬೇಡಿ. ಅದರಿಂದ ನಮ್ಮ ಪ್ರಾಣಕ್ಕೇ ಅಪಾಯ ಬರಬಹುದು'. ಆದರೆ ಈ ಅತಿ ಬುದ್ಧಿವಂತರು ದಡ್ಡ ಸ್ನೇಹಿತನ ಮಾತನ್ನು ಕೇಳಲಿಲ್ಲ.

ಈ ಮೂರ್ಖರ ಮಧ್ಯೆ ಇದ್ದರೆ ತನಗೆ ಅಪಾಯ ಕಟ್ಟಿಟ್ಟ ಬುತ್ತಿ ಎಂದರಿತ ನಾಲ್ಕನೇ ಸ್ನೇಹಿತ ಮಿಂಚಿನ ವೇಗದಲ್ಲಿ ಅಲ್ಲೇ ಹತ್ತಿರದಲ್ಲಿದ್ದ ಎತ್ತರದ ಮರವೊಂದನ್ನು ಏರಿ ಕುಳಿತ. ಈ ಮೂವರು ಮಿತ್ರರು, ಆ ನಿರ್ಜೀವ ಸಿಂಹಕ್ಕೆ ಜೀವ ತುಂಬಿಯೇ ಬಿಟ್ಟರು... ಆ ಭೀಕರ ಸಿಂಹ ತೀವ್ರವಾಗಿ ಹಸಿದಿತ್ತು. ತಕ್ಷಣವೇ ಈ ಮೂವರನ್ನು ತಿಂದು ಕಾಡಿನೊಳಗೆ ಮರೆಯಾಯ್ತು.

ನಮ್ಮಲ್ಲಿ ವಿದ್ಯೆ, ಬುದ್ಧಿವಂತಿಕೆಗಳಿದ್ದರಷ್ಟೇ ಸಾಲದು, ಅದನ್ನು ಯಾವ ಸಂದರ್ಭದಲ್ಲಿ ಹೇಗೆ ಬಳಸಬೇಕೆಂಬ ಸಾಮಾನ್ಯ ಪರಿಜ್ಞಾನ ಕೂಡಾ ಅತ್ಯಗತ್ಯವಾಗಿ ನಮ್ಮಲ್ಲಿರಬೇಕು. ಜ್ಞಾನದಷ್ಟೇ ಮುಖ್ಯ ಅದರ ಸೂಕ್ತ ಹಾಗೂ ಸಂದರ್ಭೋಚಿತ ಬಳಕೆ ಎಂಬ ಅಂಶವನ್ನು ನಾವೆಂದಿಗೂ ಮರೆಯಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಜೂನ್‌ 24, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ತೃತೀಯ ಗಂ. 25-24 ನಕ್ಷತ್ರ: ಉತ್ತರಾಷಾಢ ಗಂ. 15-54 ಯೋಗ: ಐಂದ್ರ ಗಂ. 11-51 ಕರಣ: ವಣಿಜ ಗಂ. 14-27, ಮಿಥುನ ಮಾಸದ 10ನೇ ದಿನ, ಮಳೆನಕ್ಷತ್ರ: ಆರ್ದ್ರಾ 1.
ರಾಹುಕಾಲ : ಬೆಳಿಗ್ಗೆ 07-30 – 09-00
ಸೂರ್ಯೋದಯ : 06-10 ಸೂರ್ಯಾಸ್ತ : 06-57
ಮುಸ್ಲಿಂ ದಿನಾಂಕ : 18 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 7, 10

ಮೇಷ: ಸಂಗಾತಿಯ ಅಗಲುವಿಕೆಯು ತಾತ್ಕಾಲಿಕವಾದುದು ಎಂಬುದು ಅರಿವಾಗುವುದು. ನಿಮ್ಮ ಒಳ್ಳೆಯ ಕನಸುಗಳಿಗೆ ಜೀವ ಬಂದಂತೆ ಭಾಸವಾಗುತ್ತದೆ. ಸ್ವಗೃಹ ನಿರ್ಮಾಣಕ್ಕೆ ಮಿತ್ರರಿಂದ ಸಹಾಯ ಸಿಗುವುದು.

ವೃಷಭ: ವೃತ್ತಿ ಜೀವನದಲ್ಲಿ ದೊರೆಯಬೇಕಿದ್ದ ಬಡ್ತಿ ಅನಿವಾರ್ಯ ಕಾರಣಗಳಿಂದಾಗಿ ಮುಂದೂಡಿಕೆಯಾಗುವುದು. ಖರ್ಚು ವೆಚ್ಚಕ್ಕೆ ಸಂಬಂಧಿಸಿದಂತೆ ಯೋಚಿಸಿ ನಿರ್ಧಾರ ತೆಗೆದುಕೊಳ್ಳುವುದು ಸೂಕ್ತ.

ಮಿಥುನ: ಹೂಡಿಕೆಯಿಂದ ಲಾಭ ಬಂದಿರುವ ಸುದ್ದಿ ತಿಳಿದು ಸಂತೋಷವಾಗುವುದು. ರಾಸಾಯನಿಕ ಔಷಧಿಗಿಂತ ತೈಲ ಲೇಪನದಂತಹ ಚಿಕಿತ್ಸೆ ಮಾಡಿಕೊಳ್ಳುವುದರಿಂದ ಕಾಲು ನೋವು ನಿವಾರಣೆಯಾಗುವುದು.

ಕರ್ಕಾಟಕ: ಬಹುಕಾಲ ನೆನಪಿನಲ್ಲಿ ಉಳಿಯುವಂತಹ ಮಧುರ ಘಟನೆ ಮನೆಯಲ್ಲಿ ನಡೆಯಲಿದೆ. ತಾಳ್ಮೆಯಿಂದ ವರ್ತಿಸಿದರೆ ಉತ್ತಮ ಫಲಿತಾಂಶ ಸಿಗಲಿದೆ. ಮನೆಯವರ ಆರೋಗ್ಯದ ಬಗ್ಗೆ ಕಾಳಜಿ ವಹಿಸುವಿರಿ.

ಸಿಂಹ: ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ಸೊರಗಿರುವ ನಿಮಗೆ ಅಪರಿಚಿತ ವ್ಯಕ್ತಿಯಿಂದ ಮಾರ್ಗದರ್ಶನ ಸಿಗಲಿದೆ. ಲೇವಾದೇವಿ ವ್ಯವಹಾರ ನಡೆಸುವವರು ಈ ದಿನ ವಿಶ್ರಾಂತಿ ಪಡೆಯುವುದು ಉತ್ತಮ.

ಕನ್ಯಾ: ಸಮಸ್ಯೆಗಳನ್ನು ಸ್ನೇಹಿತರೊಂದಿಗೆ ಚರ್ಚಿಸಿದರೆ ಎಲ್ಲವೂ ಸರಾಗವಾಗಿ ಪರಿಹಾರವಾಗುವುದು. ಸಂಪರ್ಕ ಸಂಬಂಧಿಸುವ ಸಾಧನಗಳ ನಿರ್ವಹಣೆಯ ಕೊರತೆಯಿಂದಾಗಿ ಅವುಗಳು ಕೈಕೊಡುವ ಸಾಧ್ಯತೆ ಇದೆ.

ತುಲಾ: ಶುದ್ಧ ಮನಸ್ಸಿನಿಂದ ಮಾಡಿದ ಧರ್ಮ ಕಾರ್ಯದಿಂದ ಶ್ರೇಯೋಭಿವೃದ್ಧಿಯಾಗುವುದು. ತಂದೆಯ ನಿರ್ಧಾರಗಳನ್ನು ಗೌರವಿಸಿ. ವೈವಾಹಿಕ ಸಂಬಂಧಗಳು ಗಟ್ಟಿಗೊಳ್ಳಲಿವೆ.

ವೃಶ್ಚಿಕ: ಜೀವನ ಶೈಲಿಯಲ್ಲಿ ಬದಲಾವಣೆ ಬೇಡವೆಂದು ನಿರ್ಧರಿಸುವುದು ಉತ್ತಮ. ವಿದ್ಯಾರ್ಥಿಗಳಿಗೆ ಉನ್ನತ ವ್ಯಾಸಂಗಕ್ಕೆ ಅವಕಾಶ ಲಭಿಸಲಿವೆ. ವ್ಯವಹಾರಗಳಲ್ಲಿ ಅಭಿವೃದ್ಧಿ ಸಾಧಿಸುವಿರಿ.

ಧನು: ಆರ್ಥಿಕ ಪರಿಸ್ಥಿತಿಯು ನಿಮ್ಮ ಆಲೋಚನೆಯನ್ನೂ ಮೀರಿ ನಿಯಂತ್ರಣ ತಪ್ಪುವುದು. ಮಾತೃ ವರ್ಗದವರ ಸಹಾಯದಿಂದ ಹಣಕಾಸಿನ ಭಯ ನಿವಾರಣೆ ಆಗಲಿದೆ. ಬೆಂಕಿಯಿಂದ ಅಪಾಯ ಉಂಟಾಗಬಹುದು.

ಮಕರ: ಮನೆಯಲ್ಲಿ ವಿವಾಹಕ್ಕೆ ಸಂಬಂಧಿಸಿದ ವಿಚಾರಗಳು ಚರ್ಚೆಗೆ ಬರಲಿವೆ. ಹೂಡಿಕೆ ವಿಚಾರವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ಮಿತ್ರರು ಸಲಹೆ ನೀಡುವರು. ಮಕ್ಕಳ ಆರೋಗ್ಯದ ಮೇಲೆ ಗಮನವಿಡಿ.

ಕುಂಭ: ಪ್ರಯತ್ನದ ಜೊತೆಗೆ ದೇವರ ಕೃಪೆಗೆ ಪಾತ್ರರಾದರೆ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಲಿದೆ. ಮದುವೆಯ ವಿಚಾರದಲ್ಲಿ ಅಂತಿಮ ತೀರ್ಮಾನಕ್ಕೆ ಬರಲಾಗದೆ ಗೊಂದಲಕ್ಕೆ ಒಳಗಾಗುವಿರಿ.

ಮೀನ: ಪ್ರಾಣಿ ದಯಾ ಸಂಘದಲ್ಲಿ ಕೆಲಸ ಮಾಡುತ್ತಿರುವವರಿಗೆ ಹೃದಯ ವಿದ್ರಾವಕ ಘಟನೆಯು ಕಣ್ಣೀರು ತರಿಸಲಿದೆ. ಮಕ್ಕಳ ಆರೋಗ್ಯದ ವಿಚಾರವಾಗಿ ಖರ್ಚು–ವೆಚ್ಚ ಹೆಚ್ಚಾಗಲಿದೆ.

ಪದಬಂಧ 5721

– ವಿದ್ಯಾ ವಿನಯ್‌

ಎಡದಿಂದ ಬಲಕ್ಕೆ

3.ನಡುವೆ ಗರಿಯಿಟ್ಟು ಅಪಹರಿಸು! (4)
5.ತಾಯಿಯ ಮನೆ ಕಿಟಕಿ (4)
6.ಎಳೆಯ ಗಿಡ (2)
7.ವಟಗುಟ್ಟುವವನ ವಕ್ಕಣೆ! (4)
10.ಕಾನನದಲ್ಲಿನ ವಾಸ (4)
13.ಬರೆಯುವ ಕಾಗದ (2)
14.ಒಳಗಿನ ಅಭಿಪ್ರಾಯ (4)
15.ದಪ್ಪ ನೂಲಿನ ಹಾಸು (4)

ಮೇಲಿಂದ ಕೆಳಕ್ಕೆ

1.ವಾಡಿಕೆಯಂತೆ ಬಂದಿರುವ ಗೊಲ್ಲ (4)
2.ಈತ ಗೆಲುವನ್ನು ಪಡೆದವನು (4)
3.ಬಲಕ್ಕೆ ವಿರುದ್ಧವಾಗಿ ಕ್ರಮತಪ್ಪಿದುದು ಬಂದಿದೆ (4)
4.ಮೋಹಕವಾದ ನಗೆಯುಳ್ಳವಳು (4)
8.ವನದಲ್ಲಿ ಕಾಣಿಸಿದ ಮುಖ (3)
9.ರಾರಾಜಿಸುತ್ತಿರುವ ಚಕ್ರವರ್ತಿ (4)
10.ವರ್ತಕನು ಹೇಳಿದ ಸುದ್ದಿ (4)
11.ನಡುವೆ ನಾತವಿದ್ದರೆ ಹಳಬ ಕಾಣಿಸಿಕೊಳ್ಳುತ್ತಾನೆ (4)
12.ಯುದ್ಧನಡೆಯುವ ಸ್ಥಳ (4)

5720ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಗಜಪತಿ 3.ಬಾಲಂಗೋಚಿ
5.ಲವಣ 7.ಅಂಕ
8.ಶರ 10.ಕೊನರು
11.ಶಕಟ 13.ರಸ
15.ವಾರ 16.ಬಸದಿ
18.ಕರೆಯೋಲೆ 19.ಟಕ್ಕುತನ

ಮೇಲಿಂದ ಕೆಳಕ್ಕೆ:
1.ಗರ್ಭಕೋಶ 2.ತಿಲ
3.ಬಾಣ 4.ಸಿಡುಕ
6.ವಚನ 7.ಅಂಗೀಕಾರ
9.ರತ್ನಾಕರ 12.ಕಳಸ
14.ಸಮಾಧಾನ 15.ವಾದಕ
16.ಬಲೆ 17.ದಿಟ

ಸುಡೊಕು 6106

		7	1		2		6	
	1			3				9
2		4				1		
	6	8		5			4	1
						7	9	
9	4			2				
3	7			8		9		5
		6					8	
	8		3		5	6		2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6105 ಸುಡೊಕು

4	5	7	3	6	8	9	1	2
9	8	1	5	7	2	3	4	6
6	3	2	9	4	1	7	5	8
3	7	4	2	8	9	1	6	5
5	2	9	4	1	6	8	3	7
1	6	8	7	3	5	2	9	4
2	9	3	8	5	4	6	7	1
7	4	6	1	2	3	5	8	9
8	1	5	6	9	7	4	2	3

ಹಾಸನದ ಸೆನ್ ಠಾಣೆಯಲ್ಲಿ ರಾತ್ರಿಯಿಡೀ ವಿಚಾರಣೆ • ಹಿಮ್ಸ್‌ನಲ್ಲಿ ಆರೋಗ್ಯ ತಪಾಸಣೆ

ಜಾಮೀನು ಕೋರಿ ಸೂರಜ್ ಇಂದು ಅರ್ಜಿ

ಪ್ರಜಾವಾಣಿ ವಾರ್ತೆ

ಹಾಸನ: ಬಂಧಿತ ಸೂರಜ್ ರೇವಣ್ಣ ಅವರಿಗೆ ಜಾಮೀನು ಮಂಜೂರು ಮಾಡುವಂತೆ ಕೋರಿ ಬೆಂಗಳೂರಿನಲ್ಲಿ ಸೋಮವಾರ ಅರ್ಜಿ ಸಲ್ಲಿಸಲಾಗುವುದು ಎಂದು ಅವರ ವಕೀಲ ಪೂರ್ಣಚಂದ್ರ ಅವರು ತಿಳಿಸಿದರು.

'ಸೂರಜ್ ಅವರನ್ನು ಬಂಧಿಸಿರುವುದರಿಂದ ಅವರ ಭೇಟಿಗೆ ಕಾನೂನಿನಲ್ಲಿ ಅವಕಾಶವಿಲ್ಲ. ಕೋರ್ಟ್ ಅನುಮತಿ ಪಡೆಯಬೇಕು' ಎಂದು ಹೇಳಿದರು. ಪೂರ್ಣಚಂದ್ರ ಅವರು ಭಾನುವಾರ ಮಧ್ಯಾಹ್ನ ಪೊಲೀಸ್ ಠಾಣೆಗೆ ಭೇಟಿ ನೀಡಿ ತನಿಖಾಧಿಕಾರಿ ಜೊತೆ ಚರ್ಚಿಸಿದರು.

ಪೊಲೀಸರು ಸೂರಜ್ ಅವರನ್ನು ಹಾಸನದ ಹಿಮ್ಸ್‌ಗೆ ಕರೆದೊಯ್ದು ಆರೋಗ್ಯ ತಪಾಸಣೆಗೆ ಒಳಪಡಿಸಿದರು. ಅಲ್ಲಿಂದ ಮತ್ತೆ ನಗರ ಠಾಣೆಗೆ ಕರೆತಂದು ವಿಚಾರಣೆ ನಡೆಸಲಾಯಿತು.

ಸೂರಜ್ ವಿಧಾನ ಪರಿಷತ್ ಸದಸ್ಯರಾಗಿರುವುದರಿಂದ ಕಾನೂನು ತಜ್ಞರ ಸಲಹೆ ಪಡೆದ ಪೊಲೀಸ್ ಅಧಿಕಾರಿಗಳು, ಕೋರ್ಟ್‌ಗೆ ಹಾಜರುಪಡಿಸಲು ಬೆಂಗಳೂರಿಗೆ ಕರೆದೊಯ್ದಿದ್ದಾರೆ.

ಬಿಗಿ ಭದ್ರತೆ: ಸೂರಜ್‌ರನ್ನು ಬಂಧಿಸಲು ಪೊಲೀಸರು ಸಿದ್ಧತೆ ಮಾಡಿಕೊಳ್ಳುತ್ತಿದ್ದಂತೆಯೇ ಇಲ್ಲಿನ ಸೆನ್ ಠಾಣೆಯ ಎದುರು ಬಿಗಿ ಭದ್ರತೆ ಮಾಡಲಾಗಿತ್ತು.



ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ ಅವರನ್ನು ಸಿಐಡಿ ಅಧಿಕಾರಿಗಳು ಬೆಂಗಳೂರು ಕೋರಮಂಗಲದಲ್ಲಿರುವ ನ್ಯಾಯಾಧೀಶರ ಮುಂದೆ ಹಾಜರು ಪಡಿಸಲು ಕರೆದೊಯ್ದರು ಪ್ರಜಾವಾಣಿ ಚಿತ್ರ/ ಎಂ.ಎಸ್. ಮಂಜುನಾಥ್

ವಿಧಾನಪರಿಷತ್ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ಬಂಧನ ವಿಷಯದಲ್ಲಿ ಯಾವುದೇ ಷಡ್ಯಂತ್ರವಿಲ್ಲ. ಕಾನೂನು ಪ್ರಕಾರ ಪೊಲೀಸರು ಕ್ರಮಕೈಗೊಂಡಿದ್ದಾರೆ

ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ

ಕೆಎಸ್‌ಆರ್‌ಪಿ ತುಕಡಿ ಒಳಗೊಂಡಂತೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಅವರನ್ನು ಬೆಂಗಳೂರಿಗೆ ಕರೆದೊಯ್ಯುವಾಗ ರಸ್ತೆಬದಿಯಲ್ಲಿ ನಿಂತಿದ್ದ ಅವರ ಬೆಂಬಲಿಗರು ಜೈಕಾರ ಕೂಗಿದರು.

ಸಾಕ್ಷ್ಯ ನೀಡಲು ಠಾಣೆಗೆ ಹೋಗಿದ್ದ ಸೂರಜ್

ಪ್ರಕರಣದ ಸಂತ್ರಸ್ತ ಶನಿವಾರ ಸಂಜೆ ಹೊಳೆನರಸೀಪುರ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸುತ್ತಿದ್ದಂತೆಯೇ, ಸಂತ್ರಸ್ತನಿಂದ ಹಣ ಬೇಡಿಕೆ ಕುರಿತಾದ ಪ್ರಕರಣದ ಬಗ್ಗೆ ಸಾಕ್ಷ್ಯ ನೀಡಲು, ಚನ್ನರಾಯಪಟ್ಟಣ ತಾಲ್ಲೂಕಿನ ಗನ್ನಿಗಡದ ತೋಟದ ಮನೆಯಿಂದ ಸೂರಜ್ ಹಾಸನದತ್ತ ಬರುತ್ತಿದ್ದರು.

ಮಾರ್ಗ ಮಧ್ಯದಲ್ಲಿಯೇ ಪೊಲೀಸರು ಸೂರಜ್ ರೇವಣ್ಣ ಅವರ ಕಾರನ್ನು ಹತ್ತಿದ್ದು, ಅವರನ್ನು ನೇರವಾಗಿ ಹಾಸನದ ಸೆನ್ ಠಾಣೆಗೆ ಕರೆತಂದಿದ್ದರು. ರಾತ್ರಿಯಿಡೀ ಅಲ್ಲಿಯೇ ಅವರ ವಿಚಾರಣೆ ನಡೆಸಲಾಯಿತು.

ಸೂರಜ್ ವಿರುದ್ಧ ಕ್ರಮ: ಪಕ್ಷದಲ್ಲಿ ಚರ್ಚಿಸಿ ತೀರ್ಮಾನ– ಜಿಟಿಡಿ

ಪ್ರಜಾವಾಣಿ ವಾರ್ತೆ

ಮೈಸೂರು: 'ಲೈಂಗಿಕ ದೌರ್ಜನ್ಯ ಆರೋಪದಡಿ ಬಂಧನಕ್ಕೆ ಒಳಗಾಗಿರುವ ಮೇಲ್ಮನೆ ಸದಸ್ಯ ಡಾ.ಸೂರಜ್ ರೇವಣ್ಣ ವಿರುದ್ಧ ಕ್ರಮ ಕುರಿತು ಪಕ್ಷದಲ್ಲಿ ಚರ್ಚಿಸಿ ತೀರ್ಮಾನಿಸುತ್ತೇವೆ' ಎಂದು ಜೆಡಿಎಸ್ ಪ್ರಮುಖರ ಸಮಿತಿಯ ಅಧ್ಯಕ್ಷ ಜಿ.ಟಿ. ದೇವೇಗೌಡ ತಿಳಿಸಿದರು.

ಪತ್ರಕರ್ತರ ಜೊತೆ ಭಾನುವಾರ ಮಾತನಾಡಿದ ಅವರು, 'ನನಗೆ ಪ್ರಕರಣದ ಮಾಹಿತಿ ಇಲ್ಲ. ಬಂಧನ ವಿಷಯವು ಮಾಧ್ಯಮದಿಂದ ತಿಳಿಯಿತು. ತಪ್ಪು ಮಾಡಿದ್ದರೆ ಶಿಕ್ಷೆಯಾಗಲಿ' ಎಂದರು.

'ನಾವು ತಪ್ಪು ಮಾಡಿದವರ ಪರ ನಿಲ್ಲುವುದಿಲ್ಲ. ನನ್ನ ಮಗನೇ ಇರಲಿ, ಸಂಬಂಧಿಗಳೇ ಇರಲಿ, ಯಾರೇ ತಪ್ಪು ಮಾಡಿದರೂ ತಪ್ಪೇ. ಜೆಡಿಎಸ್ ಎಂದಿಗೂ ತಪ್ಪು ಮಾಡಿದವರ ಪರವಾಗಿ ನಿಲ್ಲುವುದಿಲ್ಲ' ಎಂದು ಹೇಳಿದರು.

ಕುಟುಂಬದ ವಿರುದ್ಧ ಷಡ್ಯಂತ್ರ: ಶಾಸಕ ಎಚ್.ಡಿ. ರೇವಣ್ಣ

ಪ್ರಜಾವಾಣಿ ವಾರ್ತೆ



ಎಚ್.ಡಿ. ರೇವಣ್ಣ

ಬೆಂಗಳೂರು: 'ನಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ ಮಾಡಿದ್ದಾರೆ. ಅದಕ್ಕೆಲ್ಲ ನಾವು ಹೆದರುವು ದಿಲ್ಲ' ಎಂದು ಜೆಡಿಎಸ್ ಶಾಸಕ ಎಚ್.ಡಿ. ರೇವಣ್ಣ ಹೇಳಿದರು.

ತಮ್ಮ ಮಗ, ವಿಧಾನ ಪರಿಷತ್ ಸದಸ್ಯ ಸೂರಜ್ ರೇವಣ್ಣ ಅವರನ್ನು ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಬಂಧಿಸಿರುವ ಕುರಿತು ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಷಡ್ಯಂತ್ರ ಮಾಡಲಿ ಬಿಡಿ, ಅದರ ಬಗ್ಗೆ ಈಗ ಏನನ್ನೂ ಹೇಳುವುದಿಲ್ಲ. ನನಗೆ ನ್ಯಾಯಾಂಗ ಮತ್ತು ದೇವರ ಮೇಲೆ ನಂಬಿಕೆ ಇದೆ. ಯಾವುದಕ್ಕೂ ಹೆದರಿ ಓಡಿಹೋಗುವುದಿಲ್ಲ' ಎಂದರು.

'ಈ ಪ್ರಕರಣದಲ್ಲಿ ಏನೇನು ನಡೆದಿದೆ ಎಂದು ಸೂರಜ್ ಶನಿವಾರವೇ ಹೇಳಿಲ್ವಾ? ಸಮಯ ಬಂದಾಗ ಎಲ್ಲವನ್ನೂ ನಾನು ಹೇಳುತ್ತೇನೆ. ಷಡ್ಯಂತ್ರ ಮಾಡಿದವರು ಯಾರು ಎಂಬುದನ್ನು ಈಗ ಹೇಳುವುದಿಲ್ಲ' ಎಂದರು.

ಪ್ರತಿಕ್ರಿಯೆಗೆ ನಕಾರ: ಸೂರಜ್ ಬಂಧನ ಪ್ರಕರಣ ಕುರಿತು ಪ್ರತಿಕ್ರಿಯಿಸಲು ನಿರಾಕರಿಸಿದ ಕೇಂದ್ರ ಭಾರಿ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ. ಕುಮಾರಸ್ವಾಮಿ, 'ನನಗೆ ಏಕೆ ಆ ಬಗ್ಗೆ ಪ್ರಶ್ನೆ ಕೇಳುತ್ತಿದ್ದೀರಿ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸುದ್ದಿಗಾರರು ಭಾನುವಾರ ಈ ಬಗ್ಗೆ ಪ್ರಶ್ನಿಸಿದಾಗ, 'ನೀವು ನನಗೆ ಏಕೆ ಬೆದರಿಕೆ ಹಾಕುತ್ತಿದ್ದೀರಿ? ಈ ರೀತಿಯ ವಿಚಾರಗಳಿಗೆ ನಾನು ಪ್ರತಿಕ್ರಿಯಿಸುವ ಅಗತ್ಯವಿಲ್ಲ. ಕಾನೂನು ತನ್ನ ಕ್ರಮ ಕೈಗೊಳ್ಳುತ್ತದೆ' ಎಂದರು.

'ಸೂರಜ್ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗುತ್ತದೆಯೇ' ಎಂದು ಕೇಳಿದಾಗ, 'ಯಾರನ್ನ? ನನಗೂ ಅದಕ್ಕೂ ಏನು ಸಂಬಂಧ? ಅವೆಲ್ಲವನ್ನೂ ಆಮೇಲೆ ಮಾತಾಡೋಣ' ಎಂದು ಹೇಳಿದರು.

ಸುದ್ದಿ 2 ನಿಮಿಷ

'ಮೃತಪಟ್ಟ' ಪತ್ನಿ, 4 ದಿನ ಬಳಿಕ 600 ಕಿ.ಮೀ ದೂರದಲ್ಲಿ ಪತ್ತೆ

ಗೋರಖಪುರ (ಉತ್ತರ ಪ್ರದೇಶ, ಪಿಟಿಐ): ಪತ್ನಿ ಮೃತಪಟ್ಟಿದ್ದಾಳೆ ಎಂದು ಪತಿ ಆಕೆಯ ಅಂತ್ಯಸಂಸ್ಕಾರ ನಡೆಸಿದ್ದರು. ಆದರೆ, ನಾಲ್ಕು ದಿನಗಳ ನಂತರ ಪತ್ನಿ 600 ಕಿ.ಮೀ. ದೂರದಲ್ಲಿ ಪತ್ತೆಯಾಗಿ, ಸತಿ ಪತಿ ಮತ್ತೆ ಒಂದಾಗಿರುವ ಪ್ರಕರಣ ಉತ್ತರ ಪ್ರದೇಶದ ಗೋರಖಪುರ ಜಿಲ್ಲೆಯಲ್ಲಿ ನಡೆದಿದೆ.

ಜಿಲ್ಲೆಯ ಬಾನ್ಸ್‌ಗಾಂವ್‌ನ ನಿವಾಸಿಯಾಗಿರುವ ರಾಮ್ ಸುಮೇರ್ (60) ಅವರು ತಮ್ಮ ಪತ್ನಿ ಫೂಲ್‌ಮತಿ ನಾಪತ್ತೆಯಾಗಿದ್ದಾರೆ ಎಂದು ಜೂನ್ 15ರಂದು ಪೊಲೀಸರಿಗೆ ದೂರು ನೀಡಿದ್ದರು.

'ನಾಲ್ಕು ದಿನಗಳ ನಂತರ, ಜೂನ್ 19ರಂದು ಉರುವಾ ಬಾಜಾರ್ ಎಂಬಲ್ಲಿ ಮಹಿಳೆಯೊಬ್ಬರ ಶವ ಪತ್ತೆಯಾಗಿತ್ತು. ಸುಮೇರ್ ಅವರು ಅದು ತಮ್ಮ ಪತ್ನಿಯ ಮೃತದೇಹ ಎಂದು ಗುರುತಿಸಿದ್ದರು. ಅಂತ್ಯ ಸಂಸ್ಕಾರವನ್ನೂ ನಡೆಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಆದರೆ, ಮರಣೋತ್ತರ ಪರೀಕ್ಷೆ ಬಂದಾಗ ಈ ಪ್ರಕರಣ ನಿಗೂಢ ತಿರುವು ಪಡೆಯಿತು. ಮಹಿಳೆಯನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿದೆ ಎಂದು ವರದಿ ಹೇಳಿದ್ದರಿಂದ ಪೊಲೀಸರು ತನಿಖೆ ಆರಂಭಿಸಿದರು.

ಕೊಲೆ ಆರೋಪಿಯನ್ನು ಪತ್ತೆಹಚ್ಚಲು ಪೊಲೀಸರು ಫೂಲ್‌ಮತಿ ಅವರ ಮೊಬೈಲ್ ಸಂಖ್ಯೆ ಆಧಾರದಲ್ಲಿ ತನಿಖೆ ನಡೆಸಿದಾಗ, 600 ಕಿ.ಮೀ. ದೂರದಲ್ಲಿರುವ ಝೂನ್ಸಿ ಪ್ರದೇಶದಲ್ಲಿ ಮೊಬೈಲ್ ಸಂಖ್ಯೆ ಸಕ್ರಿಯವಾಗಿರುವುದು ತಿಳಿದುಬಂದಿತು.

'ಮಹಿಳೆಯ ಹೇಳಿಕೆ ಪಡೆದು ಶನಿವಾರ ಆಕೆಯ ಪತಿಯೊಂದಿಗೆ ಕಳುಹಿಸಲಾಗಿದೆ. ಸುಮೇರ್, ಫೂಲ್‌ಮತಿ, ಶುಭಮ್ ಮತ್ತು ಮೃತಪಟ್ಟ ಮಹಿಳೆಯ ನಡುವಿನ ಸಂಬಂಧವನ್ನು ತಿಳಿಯಲು ತನಿಖೆ ನಡೆಸಲಾಗುತ್ತಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿತೇಂದ್ರ ಕುಮಾರ್ ತೋಮರ್ ತಿಳಿಸಿದರು.

ಮಾಯಾವತಿ ಉತ್ತರಾಧಿಕಾರಿಯಾಗಿ ಆಕಾಶ್ ಆನಂದ್ ಆಯ್ಕೆ



ಲಖನೌ (ಪಿಟಿಐ): ಸೋದರಳಿಯ ಆಕಾಶ್ ಆನಂದ್ ಅವರೇ ತಮ್ಮ ಉತ್ತರಾಧಿಕಾರಿ ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಅಧ್ಯಕ್ಷೆ ಮಾಯಾವತಿ ಭಾನುವಾರ ಘೋಷಿಸಿದ್ದಾರೆ. ಜೊತೆಗೆ ಅವರನ್ನೇ ಪಕ್ಷದ ರಾಷ್ಟ್ರೀಯ ಸಂಚಾಲಕರನ್ನಾಗಿಯೂ ನೇಮಿಸಿದ್ದಾರೆ.

ಲೋಕಸಭೆ ಚುನಾವಣೆ ನಡೆಯುತ್ತಿದ್ದ ವೇಳೆಯೇ ಆಕಾಶ್ ಅವರನ್ನು ಪಕ್ಷದ ಸಂಚಾಲಕ ಹುದ್ದೆಯಿಂದ ಕೆಳಗಿಳಿಸಿದ್ದ ಮಾಯಾವತಿ, ಅವರನ್ನು ಅಪ್ರಬುದ್ಧ ಎಂದೂ ಕರೆದಿದ್ದರು.

ಪಕ್ಷದ ರಾಷ್ಟ್ರ ಮಟ್ಟದ ಸಭೆಯು ಭಾನುವಾರ ನಡೆಯಿತು. ಸಭೆಯಲ್ಲಿ ಬಿಡುಗಡೆ ಮಾಡಲಾದ ಪ್ರಕಟಣೆಯಲ್ಲಿ, 'ಬಿಎಸ್‌ಪಿ ರಾಷ್ಟ್ರೀಯ ಅಧ್ಯಕ್ಷೆ ಮಾಯಾವತಿ ಅವರು ಆಕಾಶ್ ಆನಂದ್‌ಗೆ ತಮ್ಮ ಹಿಂದಿನ ಹುದ್ದೆಯನ್ನು ಮರಳಿ ನೀಡಿದ್ದಾರೆ. ಆಕಾಶ್ ಅವರೇ ಮಾಯಾವತಿ ಉತ್ತರಾಧಿಕಾರಿಯಾಗಲಿದ್ದಾರೆ' ಎಂದು ಹೇಳಲಾಗಿದೆ.

'ಪಕ್ಷದ ಹಿತದೃಷ್ಟಿಯಿಂದ ಆಕಾಶ್ ಪ್ರಬುದ್ಧ ನಾಯಕನಾಗಿ ಹೊರಹೊಮ್ಮಲಿದ್ದಾನೆ ಎಂಬ ವಿಶ್ವಾಸವಿದೆ. ಮೊದಲಿಗಿಂತಲೂ ಹೆಚ್ಚಿನ ಗೌರವ ನೀಡುವ ಮೂಲಕ ಪಕ್ಷದ ಸದಸ್ಯರು ಆತನನ್ನು ಪ್ರೋತ್ಸಾಹಿಸಲಿದ್ದಾರೆ. ಭವಿಷ್ಯದಲ್ಲಿ ಅವನು ನನ್ನ ನಿರೀಕ್ಷೆ ಈಡೇರಿಸಲಿದ್ದಾನೆ ಎಂಬ ನಂಬಿಕೆಯಿದೆ' ಎಂದು ಮಾಯಾವತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿ.ಆರ್. ಪಾಟೀಲ ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆಯ (ಹಿಂದಿನ ಕರ್ನಾಟಕ ರಾಜ್ಯ ಯೋಜನಾ ಮಂಡಳಿ) ಉಪಾಧ್ಯಕ್ಷರನ್ನಾಗಿ ಆಳಂದ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ಆರ್. ಪಾಟೀಲ ಅವರನ್ನು ನೇಮಿಸಿ ಆದೇಶ ಹೊರಡಿಸುವಂತೆ ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಇದೇ 19ರಂದು ಮುಖ್ಯ ಕಾರ್ಯದರ್ಶಿಗೆ ಟಿಪ್ಪಣಿ ಕಳುಹಿಸಿರುವ ಮುಖ್ಯಮಂತ್ರಿ, 'ಪಾಟೀಲ ಅವರಿಗೆ ಸಂಪುಟ ದರ್ಜೆ ಸ್ಥಾನ ಮಾನದೊಂದಿಗೆ (ಸಂಪುಟ ದರ್ಜೆ ಸಚಿವರಿಗೆ ನೀಡುವ ಎಲ್ಲ ಸೌಲಭ್ಯ) ತಕ್ಷಣ ನೇಮಕ ಆದೇಶ ಹೊರಡಿಸಬೇಕು' ಎಂದೂ ಹೇಳಿದ್ದಾರೆ.

ಪಾಟೀಲ ಅವರು ಈಗ ಮುಖ್ಯಮಂತ್ರಿಯ ಸಲಹೆಗಾರ (ನೀತಿ ಮತ್ತು ಕಾರ್ಯಕ್ರಮ) ಆಗಿದ್ದಾರೆ.

ಕೈದಿಗಳಿಗೆ 'ಟೆಲಿ ಮೆಡಿಸಿನ್' ಸೇವೆ ವಿಸ್ತರಣೆ

ಇ–ಸಂಜೀವಿನಿ ಯೋಜನೆಯಡಿ ವೈದ್ಯಕೀಯ ಸೇವೆಗೆ ಆರೋಗ್ಯ ಇಲಾಖೆ ಸಿದ್ಧತೆ; ಸಲಹೆಯೂ ಲಭ್ಯ

• ವರುಣ ಹೆಗಡೆ

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿನ ಕೈದಿಗಳು ಎದುರಿಸುವ ಮಾನಸಿಕ ಸಮಸ್ಯೆ, ಹೃದ್ರೋಗ ಸೇರಿದಂತೆ ವಿವಿಧ ಆರೋಗ್ಯ ಸಮಸ್ಯೆಗಳಿಗೆ 'ಟೆಲಿ ಮೆಡಿಸಿನ್' ವ್ಯವಸ್ಥೆಯಡಿ ಪರಿಹಾರ ಕಲ್ಪಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಈ ವ್ಯವಸ್ಥೆಯಡಿ ಕಾಲಕಾಲಕ್ಕೆ ತಜ್ಞ ವೈದ್ಯರ ಸಲಹೆ ಸೂಚನೆಗಳು ಕೈದಿಗಳಿಗೂ ದೊರೆಯಲಿವೆ.

ಟೆಲಿ ಮೆಡಿಸಿನ್ ಸೇವೆ ಪ್ರಾರಂಭಕ್ಕೆ ಸಂಬಂಧಿಸಿದಂತೆ ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯು ಆರೋಗ್ಯ ಇಲಾಖೆಗೆ ಈ ಹಿಂದೆ ಪ್ರಸ್ತಾವ ಸಲ್ಲಿಸಿತ್ತು. ಹೀಗಾಗಿ, ರಾಜ್ಯದಲ್ಲಿ ಈಗಾಗಲೇ ಜಾರಿಯಲ್ಲಿರುವ ಇ-ಸಂಜೀವಿನಿ ಯೋಜನೆಯಡಿ ಕಾರಾಗೃಹಗಳಲ್ಲಿ ಈ ಸೇವೆ ಒದಗಿಸಲು ಆರೋಗ್ಯ ಇಲಾಖೆ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಕಾರಾಗೃಹಗಳಲ್ಲಿ



ಸುರಕ್ಷತೆಯನ್ನು ಖಾತರಿಪಡಿಸಿಕೊಂಡು, ಇಂಟರ್ನೆಟ್ ವ್ಯವಸ್ಥೆ ಕಲ್ಪಿಸಿದ ಬಳಿಕ ಈ ಸೇವೆಯನ್ನು ಪ್ರಾರಂಭಿಸಲು ಇಲಾಖೆ ಮುಂದಾಗಿದೆ.

ಬೆಂಗಳೂರಿನ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹದಲ್ಲಿ ಪ್ರಾಯೋಗಿಕವಾಗಿ ಈ ಸೇವೆ ಪರಿಚಯಿಸಲಾಗಿದ್ದು, ತುರ್ತು ಸಂದರ್ಭದಲ್ಲಿ ಸೇವೆ ಒದಗಿಸಲಾಗುತ್ತಿದೆ. ಮೊದಲ ಹಂತದಲ್ಲಿ ಜಿಲ್ಲಾ ಕಾರಾಗೃಹಗಳಲ್ಲಿ ಈ ಸೇವೆ ಪ್ರಾರಂಭವಾಗಲಿದ್ದು, ಅಲ್ಲಿ ಸಿಗುವ ಸ್ಪಂದನ ಆಧರಿಸಿ ತಾಲ್ಲೂಕು ಕಾರಾಗೃಹಗಳಿಗೆ ವ್ಯವಸ್ಥೆ ವಿಸ್ತರಿಸಲು ಇಲಾಖೆ ಯೋಜನೆ ರೂಪಿಸಿದೆ. ಈ

ಕಾರಾಗೃಹಗಳಲ್ಲಿ ಜಾಮರ್ ಅಳವಡಿಸಿರುವುದರಿಂದ ಇಂಟರ್ನೆಟ್ ಲಭ್ಯವಾಗುತ್ತಿಲ್ಲ. ಈ ಸಮಸ್ಯೆ ನಿವಾರಣೆಯಾದ ಬಳಿಕ ಕೈದಿಗಳಿಗೆ ಟೆಲಿ ಮೆಡಿಸಿನ್ ಸೇವೆ ಕಲ್ಪಿಸಲಾಗುತ್ತದೆ

ಡಿ. ರಂದೀಪ್, ಆರೋಗ್ಯ ಇಲಾಖೆ ಆಯುಕ್ತ

ವ್ಯವಸ್ಥೆಯಿಂದ ಕೈದಿಗಳಿಗೆ ತಜ್ಞ ವೈದ್ಯರ ಸೇವೆ ಎಲ್ಲ ಸಮಯದಲ್ಲಿ ದೊರೆಯಲಿದೆ.

ಸೇವೆ ಸುಲಭ: ರಾಜ್ಯದ ಹಲವು ಆಸ್ಪತ್ರೆಗಳಲ್ಲಿ ಟೆಲಿ ಮೆಡಿಸಿನ್ ವ್ಯವಸ್ಥೆ ಜಾರಿಯಲ್ಲಿದೆ. ಅದೇ ಮಾದರಿಯಲ್ಲಿ ಕಾರಾಗೃಹದಲ್ಲಿಯೂ ಈ ವ್ಯವಸ್ಥೆ ಜಾರಿಗೆ ಬರಲಿದೆ. ಇಂಟರ್ನೆಟ್ ವ್ಯವಸ್ಥೆ ಕಲ್ಪಿಸಿದ ಬಳಿಕ, ಇ ಸಂಜೀವಿನಿ ಒಪಿಡಿ ಪೋರ್ಟಲ್ ಮೂಲಕ ವೈದ್ಯರನ್ನು ಸಂಪರ್ಕಿಸಲು ಗುರುತಿನ ಸಂಖ್ಯೆಯನ್ನು ಒದಗಿಸಲಾಗುತ್ತದೆ. ಇದರ ನೆರವಿನಿಂದ ಲಾಗ್ ಇನ್ ಆದಲ್ಲಿ ರೋಗಿಗಳ ಮಾಹಿತಿ ನಮೂದಿಸಿ, ದೂರವಾಣಿ ಕರೆ ಅಥವಾ ವಿಡಿಯೊ ಕರೆ ಮೂಲಕ ವೈದ್ಯರನ್ನು ಸಂಪರ್ಕಿಸಲಾಗುತ್ತದೆ. ರಾಜ್ಯದಲ್ಲಿ ಪ್ರತಿನಿತ್ಯ ಸರಾಸರಿ 25 ಸಾವಿರ ಮಂದಿ ಈ ವ್ಯವಸ್ಥೆಯಡಿ ಸಮಾಲೋಚನೆಗೆ ಒಳಗಾಗುತ್ತಿದ್ದಾರೆ.

'ಈ ವ್ಯವಸ್ಥೆಯಡಿ ವೈದ್ಯಕೀಯ ಸೇವೆ ಸುಲಭವಾಗಿ ದೊರೆಯುತ್ತದೆ. ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಉತ್ತಮ ಸ್ಪಂದನ ವ್ಯಕ್ತವಾಗಿದೆ. ರೋಗಿಗಳು ನೋಂದಣಿ ಮಾಡಿಕೊಂಡ ಬಳಿಕ ಟೋಕನ್ ಲಭ್ಯವಾಗುತ್ತದೆ. ಬಳಿಕ ಆಡಿಯೊ ಅಥವಾ ವಿಡಿಯೊ ಕರೆ ಮೂಲಕ ವೈದ್ಯರನ್ನು ಸಂಪರ್ಕಿಸಿ, ಸಮಾಲೋಚನೆ ನಡೆಸಬಹುದಾಗಿದೆ. ಎಸ್‌ಎಂಎಸ್ ಅಥವಾ ಇ ಮೇಲ್ ಮೂಲಕ ಔಷಧ ಚೀಟಿಯನ್ನು ಒದಗಿಸಲಾಗುತ್ತದೆ' ಎಂದು ಹೆಸರು ಬಹಿರಂಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

38 ಆಸ್ಪತ್ರೆಗಳಿಂದ ಸೇವೆ

ಈ ವ್ಯವಸ್ಥೆಯು ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ನಡೆಯಲಿದ್ದು, ಜಯದೇವ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆ, ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆ, ನಿಮ್ಹಾನ್ಸ್ ಸೇರಿ ರಾಜ್ಯದ 38 ಪ್ರಮುಖ ಆಸ್ಪತ್ರೆಗಳು ಹಾಗೂ ವೈದ್ಯಕೀಯ ಕಾಲೇಜುಗಳು ಕಾರ್ಯಾಚರಣೆ ಕೇಂದ್ರಗಳಾಗಿ (ಹಬ್) ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳ ವೈದ್ಯರ ನೆರವಿನಿಂದಲೇ ಕೈದಿಗಳಿಗೂ ಟೆಲಿ ಮೆಡಿಸಿನ್ ಸೇವೆ ನೀಡಲಾಗುತ್ತದೆ.

'ನಾಲ್ಕು ವರ್ಷಗಳಿಂದ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ ಟೆಲಿ ಮೆಡಿಸಿನ್ ಸೇವೆ ನೀಡಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿಯೂ ಟೆಲಿ ಮೆಡಿಸಿನ್ ಸೇವೆ ದೊರೆಯುತ್ತಿದೆ' ಎಂದು ಇಲಾಖೆಯ ಅಧಿಕಾರಿ ತಿಳಿಸಿದರು.

ಮೇಲ್ಸೇತುವೆ ಕಾಮಗಾರಿ: ತುಮಕೂರು ಜಿಲ್ಲೆ ಹೆದ್ದಾರಿಯಲ್ಲಿ ಸಂಚಾರ ದಟ್ಟಣೆ

ಮೂರು ಜಿಲ್ಲೆಗಳಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ತುಮಕೂರು/ಕೊಡಗು: ರಾಜ್ಯದಲ್ಲಿ ಭಾನುವಾರ ತುಮಕೂರು, ಕೊಡಗು ಹಾಗೂ ಕರಾವಳಿಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ.

ತುಮಕೂರು ನಗರ ಸೇರಿದಂತೆ ಜಿಲ್ಲೆಯ ವಿವಿಧ ಕಡೆ ಮಳೆ ಸುರಿಯಿತು. ನಗರದಲ್ಲಿ ಸಂಜೆ ಸುಮಾರು ಮೂರು ತಾಸು ಧಾರಾಕಾರವಾಗಿ ಸುರಿಯಿತು. ಅಂತರಸನಹಳ್ಳಿ, ಕುಣಿಗಲ್ ಮತ್ತು ಶೆಟ್ಟಿಹಳ್ಳಿ ಸೇತುವೆ ಬಳಿ ನೀರು ನಿಂತು ರಸ್ತೆ ದಾಟಲು ವಾಹನ ಸವಾರರು ಕಷ್ಟಪಟ್ಟರು.

ಲಿಂಗಾಪುರ ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿರುವ ಕಾರಣ ವಾಹನಗಳು ಮಂದಗತಿಯಲ್ಲಿ ಸಾಗಿದ್ದು, ದಟ್ಟಣೆ ಉಂಟಾಗಿತ್ತು.

ತುಮಕೂರು ಗ್ರಾಮಾಂತರ, ಕೋರ ಠಾಣೆಯ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.



ಮಂಗಳೂರಿನಲ್ಲಿ ಭಾನುವಾರ ಸಂಜೆ ಜೋರು ಮಳೆಯಾಗಿದ್ದು ನೀರು ತುಂಬಿದ ರಸ್ತೆಯಲ್ಲಿ ವಾಹನ ಸವಾರರು ಪ್ರಯಾಸಪಟ್ಟು ಸಾಗಿದರು

ಮಡಿಕೇರಿ ವರದಿ: ಕೊಡಗು ಜಿಲ್ಲೆಯಲ್ಲಿ ಭಾನುವಾರ ಮುಂಗಾರು ಮಳೆ ಕೊಂಚ ಬಿರುಸು ಪಡೆಯಿತು. ನಗರದಲ್ಲಿ ಬೆಳಿಗ್ಗೆ ಜಿಟಿಜಿಟಿಯಾಗಿ, ಸಂಜೆ ಜೋರಾಗಿ ಸುರಿಯಿತು. ನಾಪೋಕ್ಲು ಭಾಗದಲ್ಲಿ ಬಿರುಸಾಗಿ, ಸುಂಟಿಕೊಪ್ಪ, ಸಿದ್ದಾಪುರ, ವಿರಾಜಪೇಟೆಯಲ್ಲಿ ಸಾಧಾರಣವಾಗಿತ್ತು.

ಮೈಸೂರು ನಗರದಲ್ಲಿ ಮಧ್ಯಾಹ್ನ, ಸಂಜೆ, ರಾತ್ರಿ ಬಿಟ್ಟುಬಿಟ್ಟು ಸಾಧಾರಣ ಮಳೆಯಾಯಿತು.

ಕಲಬುರಗಿ ವರದಿ: ಕಲಬುರಗಿ ಹಾಗೂ ಬೀದರ್ ಜಿಲ್ಲೆಗಳಲ್ಲಿ ಭಾನುವಾರ ಸಂಜೆ ಕೆಲ ಹೊತ್ತು ಮಳೆ ಸುರಿಯಿತು.

ಬೀದರ್ ನಗರ ಆಸುಪಾಸಿನಲ್ಲಿ ಅರ್ಧ ಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆಯಾಗಿದೆ. ಕಲಬುರಗಿ ನಗರದಲ್ಲೂ ಕೆಲಹೊತ್ತು ಮಳೆಯಾಯಿತು.

ದಕ್ಷಿಣ ಕನ್ನಡದಲ್ಲಿ ಧಾರಾಕಾರ ಮಳೆ

ಮಂಗಳೂರು ವರದಿ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭಾನುವಾರ ಧಾರಾಕಾರವಾಗಿ ಮಳೆಯಾಗಿದೆ. ಶನಿವಾರ ರಾತ್ರಿಯಿಂದ ಭಾನುವಾರ ಬೆಳಿಗ್ಗೆ 8ಗಂಟೆವರೆಗೆ ಬಿಟ್ಟು ಬಿಟ್ಟು ಮಳೆ ಸುರಿಯಿತು. ಮಧ್ಯಾಹ್ನದ ಬಳಿಕ ಮತ್ತೆ ಮಳೆ ತೀವ್ರಗೊಂಡಿತು.

ಜಿಲ್ಲೆಯಲ್ಲಿ ಭಾನುವಾರ ಬೆಳಿಗ್ಗೆ 8.30ರವರೆಗಿನ 24 ಗಂಟೆಗಳಲ್ಲಿ ಚೆನ್ನೈತ್ತೋಡಿಯಲ್ಲಿ 6.65 ಸೆಂ.ಮೀ, ರಾಯಿಯಲ್ಲಿ 6.6, ಬಡಗನ್ನೂರಿನಲ್ಲಿ 5.5 , ಕುಕ್ಕಿಪಾಡಿಯಲ್ಲಿ 5.2, ಇರಾ ಮತ್ತು ಮೇರಮಜಲುಗಳಲ್ಲಿ ತಲಾ 5.1, ಮಳವೂರಿನಲ್ಲಿ 4.9, ಬೋಳಿಯಾರ್‌ನಲ್ಲಿ 4.75, ಪುದು ಮತ್ತು ನೀರುಮಾರ್ಗದಲ್ಲಿ ತಲಾ 4.4 ಸೆಂ.ಮೀ ಮಳೆ ಸುರಿದಿರುವುದು ದಾಖಲಾಗಿದೆ.

'ಸಾಹಿತಿಗಳು ಪಕ್ಷದ ಸಭೆಗಳಿಗೆ ಹಾಜರಾಗುವುದು ಸರಿಯಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಕಾಡೆಮಿಗಳು, ಪ್ರಾಧಿಕಾರಗಳು ಸ್ವಾಯತ್ತ ಸಂಸ್ಥೆಗಳಾಗಿರಬೇಕೆಂಬ ವಿಚಾರದಲ್ಲಿ ವಿವಾದ ಅನಪೇಕ್ಷಣೀಯ. ಸಾಂಸ್ಕೃತಿಕ ಸಂಸ್ಥೆಗಳು ಸೇರಿದಂತೆ, ಆ ರೀತಿಯ ಸಂಸ್ಥೆಗಳು ಸ್ವಾಯತ್ತ ಆಗಿರಬೇಕೆಂಬುದು ಸಾಂವಿಧಾನಿಕ ಆಶಯ ಎಂಬುದನ್ನು ನಾವು ಮರೆಯಬಾರದು' ಎಂದು ಕಾಂಗ್ರೆಸ್ ಮುಖಂಡರಾದ ಬಿ.ಕೆ. ಚಂದ್ರಶೇಖರ್ ಮತ್ತು ರಾಜ್ಯಸಭೆಯ ಮಾಜಿ ಸದಸ್ಯ ಎಲ್. ಹನುಮಂತಯ್ಯ ಅಭಿಪ್ರಾಯಪಟ್ಟಿದ್ದಾರೆ.

'ಈ ಸಂಸ್ಥೆಗಳಿಗೆ ಮುಖ್ಯಸ್ಥರನ್ನು ಸರ್ಕಾರ ನೇಮಿಸಿ, ಅಗತ್ಯ ಹಣಕಾಸು ಪೂರೈಸಿದರೂ ಆಯಾ ಕ್ಷೇತ್ರದ ಪರಿಣಿತರನ್ನು ಆಯ್ಕೆ ಮಾಡಲಾಗುತ್ತದೆಯೇ ಹೊರತು ಪಕ್ಷದ ಕಾರ್ಯಕರ್ತರನ್ನಲ್ಲ ಎನ್ನುವ ಅಂಶಕ್ಕೆ ಈವರೆಗಿನ ನೇಮಕಗಳೇ ಸಾಕ್ಷಿ. 2014ರಿಂದ 2024ರವರೆಗಿನ ಅವಧಿಯಲ್ಲಿ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಲವು ಸಂಸ್ಥೆಗಳ ಸ್ವಾಯತ್ತೆಯನ್ನು ದುರ್ಬಲಗೊಳಿಸಿ, ಒಂದು ಪಕ್ಷದ ಹಾಗೂ ಅವರ ಸರ್ಕಾರದ ಬೆಂಬಲಿಗರನ್ನು ನೇಮಿಸಿದ ಪ್ರಕ್ರಿಯೆಗೆ ಕಾಂಗ್ರೆಸ್ ಪಕ್ಷ ಒಳಗೊಂಡಂತೆ, ರಾಜಕೀಯ ಹಾಗೂ ರಾಜಕೀಯೇತರ ಸಂಸ್ಥೆಗಳು ಮತ್ತು ವ್ಯಕ್ತಿಗಳು ಹೋರಾಟ ಮಾಡುತ್ತಾ ಮುಂದುವರೆದಿರುವುದು ಸತ್ಯ' ಎಂದಿದ್ದಾರೆ.

'ಸರ್ಕಾರದ್ದೇ ಸರ್ವಾಧಿಕಾರ. ಆದ್ದರಿಂದ ಸ್ವಾಯತ್ತೆ ಎಂಬ ಕಲ್ಪನೆ ಲೇಖಕರ, ಸಾಹಿತಿಗಳ, ಕಲಾವಿದರ ಕನಸೇ ಹೊರತು, ವಾಸ್ತವವಲ್ಲ' ಎಂಬ ಪ್ರತಿಪಾದನೆಯನ್ನು ಒಪ್ಪಲು ಸಾಧ್ಯವಿಲ್ಲ. ಪ್ರಭುತ್ವದ ಈ ರೀತಿಯ ನಂಬಿಕೆಯು ಪ್ರಜಾ ಪ್ರಭುತ್ವದ ಹಲವು ಸಂಸ್ಥೆಗಳಿಗೆ ಮತ್ತು ಅಕಾಡೆಮಿಗಳಿಗೆ, ವಿಶ್ವವಿದ್ಯಾಲಯಗಳಿಗೆ, ಸಂವಿಧಾನದಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿರುವ ಹಲವು ಮೂಲಭೂತ ಹಕ್ಕುಗಳಿಗೆ, ಭಾರತದ ವೈವಿಧ್ಯದ ಪ್ರತೀಕವಾಗಿರುವ ಧರ್ಮದ ಆಚರಣೆಗಳಿಗೆ ಹಾಗೂ ಸಂಸ್ಕೃತಿಗೆ ನಿರ್ಣಾಯಕವಾದ ಪೆಟ್ಟು|-ಕೊಟ್ಟಂತಲ್ಲವೇ ಎಂದೂ ಪ್ರಶ್ನಿಸಿದ್ದಾರೆ.

'ಸ್ವಾಯತ್ತೆಯ ಪ್ರತಿಪಾದನೆಯು ಸರ್ಕಾರದ ವಿರೋಧ ಅಲ್ಲ, ಪರವಾಗಿರುವುದೂ ಅಲ್ಲ. ಹಾಗೆಯೇ, ಕಾಂಗ್ರೆಸ್ ಸದಸ್ಯರಾದ ನಾವಿಬ್ಬರೂ ಪಕ್ಷದ ಅಧ್ಯಕ್ಷರ ವಿರೋಧಿಗಳೆಂದು ಪರಿಗಣಿಸುವುದು ಅಸಂಬದ್ಧ. 'ನಾವು ಸಾಂಸ್ಕೃತಿಕ ಜೀತದಾರರಲ್ಲ'ವೆಂದು ಹೇಳಿರುವ ಸಾಹಿತಿಗಳು, ಇದನ್ನು 'ಅವಕಾಶವಾದಿ ನಡೆ ಹಾಗೂ ಹುಳಿದ್ರಾಕ್ಷಿ'ಗೆ ಹೋಲಿಸಿ ಪಕ್ಷದ ವಕ್ತಾರರು ಹೇಳಿಕೆ ನೀಡಬಾರದಿತ್ತು' ಎಂದಿದ್ದಾರೆ.

'ಲೇಖಕರು, ಸಾಹಿತಿಗಳು ಸರ್ಕಾರದ ಕಚೇರಿಗಳಿಗೆ ಹೋಗಬೇಕು. ಆದರೆ, ಪಕ್ಷದ ಕಚೇರಿಯಲ್ಲಿ ಸಭೆಗಳಿಗೆ ಹಾಜರಾಗುವುದು ಸರಿಯಲ್ಲ' ಎಂದಿದ್ದಾರೆ.

ಬೆಳಿಗ್ಗೆ ಬಂಧನ

ಒಂದನೇ ಪುಟದಿಂದ...

ಶನಿವಾರ ಸಂಜೆಯೇ ಅವರನ್ನು ಪೊಲೀಸರು ವಶಕ್ಕೆ ಪಡೆದಿದ್ದರು. ಪ್ರಕರಣದ ತನಿಖಾಧಿಕಾರಿ, ಸಕಲೇಶಪುರ ಡಿವೈಎಸ್‌ಪಿ ಪ್ರಮೋದ್ ಕುಮಾರ್ ಅವರು ಸೆನ್ ಠಾಣೆಯಲ್ಲಿ ರಾತ್ರಿಯಿಡೀ ವಿಚಾರಣೆಗೆ ಒಳಪಡಿಸಿದರು. ಸಂತ್ರಸ್ತ ಯುವಕ ಮತ್ತು ಡಾ.ಸೂರಜ್ ಆಪ್ತ ನೀಡಿದ್ದ ದೂರುಗಳ ಬಗ್ಗೆ ಪ್ರತ್ಯೇಕ ವಿಚಾರಣೆ ನಡೆಸಿ ಹೇಳಿಕೆ ಪಡೆದರು. ರಾತ್ರಿ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ, ಅಧಿಕಾರಿಗಳಿಗೆ ಸೂಚನೆ ನೀಡಿ ತೆರಳಿದ್ದರು. ಈ ಮಧ್ಯೆ ಸಂತ್ರಸ್ತ ಯುವಕನನ್ನು ವೈದ್ಯಕೀಯ ಪರೀಕ್ಷೆಗೆ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಇತ್ತ ವಿಚಾರಣೆ ಮುಗಿದಂತೆ ಡಿವೈಎಸ್‌ಪಿ ಪ್ರಮೋದ್ ಕುಮಾರ್ ಅವರು ಡಾ.ಸೂರಜ್ ಅವರನ್ನು ಬಂಧಿಸಿ, ನಗರ ಪೊಲೀಸ್ ಠಾಣೆಗೆ ಕರೆದೊಯ್ದರು. ಸೂರಜ್ ರೇವಣ್ಣ ವಿರುದ್ಧ ಐಪಿಸಿ ಸೆಕ್ಷನ್ 377, 342, 506 ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಯುಜಿಸಿಇಟಿ-2024: ನಾಳೆಯಿಂದ ದಾಖಲೆಗಳ ಆಫ್‌ಲೈನ್ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಜಿಸಿಇಟಿ-2024ರ ಆನ್‌ಲೈನ್ ಅರ್ಜಿಯಲ್ಲಿ ಅರ್ಹತಾ ಕಂಡಿಕೆಗಳಾದ 'ಬಿ', 'ಸಿ', 'ಡಿ', 'ಐ', 'ಜೆ', 'ಕೆ', 'ಎಲ್', 'ಎಂ', 'ಎನ್', 'ಜೆಡ್' ವಿಭಾಗಗಳನ್ನು ಕ್ಲೇಮ್ ಮಾಡಿರುವ ಹಾಗೂ ರ‍್ಯಾಂಕ್ ಪಡೆದಿರುವ ಅಭ್ಯರ್ಥಿಗಳಿಗೆ ಆಫ್‌ಲೈನ್ ದಾಖಲಾತಿ ಪರಿಶೀಲನೆ ಜೂನ್ 25ರಿಂದ 29ರವರೆಗೆ ಮಲ್ಲೇಶ್ವರದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿಯಲ್ಲಿ ನಡೆಯಲಿದೆ.

ಈ ಕುರಿತು ಪ್ರಕಟಣೆ ನೀಡಿರುವ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, 'ಸಂಬಂಧಿಸಿದ ಅಭ್ಯರ್ಥಿಗಳು ಖುದ್ದು ಹಾಜರಾಗಬೇಕು. 'ವೈ' ಅರ್ಹತಾ ಕಂಡಿಕೆಯನ್ನು ಕ್ಲೇಮ್ ಮಾಡಿರುವ ಅಭ್ಯರ್ಥಿಗಳು ದಾಖಲೆಗಳ ಪರಿಶೀಲನೆಗೆ ಹಾಜರಾಗುವ ಅಗತ್ಯ ಇಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಎಂಜಿನಿಯರಿಂಗ್, ಆರ್ಕಿಟೆಕ್ಚರ್, ಯೋಗ ಮತ್ತು ನ್ಯಾಚುರೋಪತಿ, ಪಶು ವೈದ್ಯಕೀಯ ಮತ್ತು ಪಶುಸಂಗೋಪನೆ, ಕೃಷಿ ವಿಜ್ಞಾನ ಕೋರ್ಸ್‌ಗಳು, ಬಿ.ಎಸ್‌ಸಿ (ಆನರ್ಸ್), ಕೃಷಿ, ಬಿ.ಎಸ್ಸಿ (ಆನರ್ಸ್) (ರೇಷ್ಮೆ ಕೃಷಿ) ಮುಂತಾದವು, ಬಿ.ಎಸ್ಸಿ (ನರ್ಸಿಂಗ್), ಬಿ.ಫಾರ್ಮಾ, ಎರಡನೇ ವರ್ಷದ ಬಿ ಫಾರ್ಮಾ ಮತ್ತು ಫಾರ್ಮಾ ಡಿ ಕೋರ್ಸ್‌ಗಳ ಪ್ರವೇಶಕ್ಕೆ ಇದು ಅನ್ವಯವಾಗುತ್ತದೆ.

'ವಿದ್ಯಾರ್ಥಿಗಳ ರ‍್ಯಾಂಕ್ ಆಧರಿಸಿ, ಅವರು ದಾಖಲಾತಿ ಪರಿಶೀಲನೆಗೆ ಹಾಜರಾಗಬೇಕಾದ ವೇಳಾಪಟ್ಟಿಯನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ಪರಿಶೀಲನೆಗೆ ಸಲ್ಲಿಸಬೇಕಾದ ಮೂಲ ದಾಖಲೆಗಳ ವಿವರಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿರುವ ಇ-ಮಾಹಿತಿ ಪುಸ್ತಕದಲ್ಲಿ ನೀಡಲಾಗಿದೆ. ಅಭ್ಯರ್ಥಿಗಳು ತಮ್ಮ ಅರ್ಹತಾ ಕಂಡಿಕೆಗೆ ಅನುಸಾರವಾಗಿ ಅಗತ್ಯ ಇರುವ ಮೂಲ ದಾಖಲೆಗಳೊಂದಿಗೆ ಹಾಗೂ ನಕಲು ಪ್ರತಿಯೊಂದಿಗೆ ಹಾಜರಾಗಬೇಕು' ಎಂದೂ ತಿಳಿಸಿದ್ದಾರೆ.

'ಅರ್ಹತಾ ಕಂಡಿಕೆ 'ಎ', 'ಇ', 'ಎಫ್', 'ಜಿ', 'ಎಚ್', 'ಒ' ಕ್ಲೇಮ್ ಮಾಡಿರುವ ಅಭ್ಯರ್ಥಿಗಳಿಗೆ ದಾಖಲಾತಿ ಪರಿಶೀಲನೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತಿದೆ. ಈ ಕುರಿತು ಸದ್ಯದಲ್ಲಿಯೇ ಸೂಚನೆಗಳನ್ನು ಪ್ರಕಟಿಸಲಾಗುವುದು' ಎಂದು ಪ್ರಸನ್ನ ತಿಳಿಸಿದ್ದಾರೆ.

ಲೇಖಕಿಯರ ಸಂಘದ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಧ್ಯಾರೆಡ್ಡಿ ಮಾತು

'ಪುರುಷರ ಮನಃಸ್ಥಿತಿ ಬದಲಿಸುವ ಕೆಲಸ ಆಗಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುರುಷ ಪ್ರಧಾನ ಸಮಾಜದಲ್ಲಿ ಇಂದಿಗೂ ಸ್ತ್ರೀಯರ ಬಗೆಗಿನ ಮನಃಸ್ಥಿತಿ ಬದಲಾಗಿಲ್ಲ. ಆದ್ದರಿಂದ ಪುರುಷರ ಮನಃಸ್ಥಿತಿ ಬದಲಿಸುವ ಕೆಲಸ ಮಾಡಬೇಕು' ಎಂದು ಲೇಖಕಿ ಕೆ.ಆರ್. ಸಂಧ್ಯಾರೆಡ್ಡಿ ಹೇಳಿದರು.

ಕರ್ನಾಟಕ ಲೇಖಕಿಯರ ಸಂಘ ನಗರದಲ್ಲಿ ಭಾನುವಾರ ಹಮ್ಮಿಕೊಂಡ '2023ನೇ ಸಾಲಿನ ವಿವಿಧ ದತ್ತಿ ಪ್ರಶಸ್ತಿ'ಗಳ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ಸಮಾನತೆಯನ್ನು ಎತ್ತಿಹಿಡಿದ ಬಸವಣ್ಣ ಅವರೂ 'ನಾರಿಗೆ ಗುಣವೇ ಶೃಂಗಾರ'ವೆಂದು ಹೇಳಿದ್ದರು. ಅಂದರೆ, ಗುಣ ನಾರಿಗೆ ಮಾತ್ರವೇ ಅಂದಂತೆ ಆಗುತ್ತದೆ. ಕನಕದಾಸರು 'ಸ್ತ್ರೀ ರೂಪ ಕಣ್ಣಿಗೆ ಕಾಣದಂತೆ ಮಾಡು' ಎಂದಿದ್ದರು. ಇತ್ತೀಚೆಗೆ, ಪ್ರಜ್ವಲ್ ರೇವಣ್ಣ ಅವರ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತನಾಡುವಾಗ ಆಟೊ ಚಾಲಕರೊಬ್ಬರು ಹೆಂಗಸರದ್ದೇ ತಪ್ಪು, ಅವರೇಕೆ ಹೋಗಬೇಕಿತ್ತು ಎಂದು ಪ್ರಶ್ನಿಸಿದರು. ಸ್ತ್ರೀಯರ ಬಗೆಗಿನ ಮನಃಸ್ಥಿತಿ ಬದಲಾಗಿಲ್ಲ ಎನ್ನುವುದನ್ನು ಈ ಮಾತಿನಲ್ಲಿ ಕಾಣಬಹುದಾಗಿದೆ' ಎಂದರು.



ಸಮಾರಂಭದಲ್ಲಿ (ಕುಳಿತವರು ಎಡದಿಂದ) ರಾಧಾ ಕುಲಕರ್ಣಿ, ಮಂಜುಳಾ ಗೋನಾಳ, ದೇವಿಕಾ ನಾಗೇಶ್, ಸುಧಾ ಆಡುಕಳ, ಮಾಧವಿ ಭಂಡಾರಿ ಕೆರೆಕೋಣ, ವಿಜಯಾ ಶಂಕರ, ನೂತನ ದೋಶೆಟ್ಟಿ, ಲೀಲಾ ವಾಸುದೇವ್ ಮತ್ತು (ನಿಂತವರು ಎಡದಿಂದ) ಸರಸ್ವತಿ ಭೋಸಲೆ, ರೇವತಿ ನಂದನ್, ಸಿಂಧುಚಂದ್ರ, ಸುಮಾ ರಮೇಶ್, ಚಂದ್ರಮತಿ ಸೋಂದಾ, ಮಂಜುಳಾ ಹಿರೇಮಠ, ಶೋಭಾ ನಾಯಕ, ಕಾತ್ಯಾಯಿನಿ ಕುಂಜಿಬೆಟ್ಟು, ಅಕ್ಷತಾ ಹುಂಚದಕಟ್ಟೆ ಮತ್ತು ಮಾಲತಿ ಹೆಗಡೆ ಅವರಿಗೆ ವಿವಿಧ ದತ್ತಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು. ಕೆ.ಆರ್. ಸಂಧ್ಯಾರೆಡ್ಡಿ, ಎಚ್.ಎಸ್.ಶಿವಪ್ರಕಾಶ್, ಎಚ್.ಎಲ್.ಪುಷ್ಪ ಮತ್ತು ಕರ್ನಾಟಕ ನಾಟಕ ಅಕಾಡೆಮಿ ಸದಸ್ಯ ಜೆಪಿಜಿ ಚಂದ್ರು ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

'ಮಹಿಳೆಯರು ಸಾಂಸಾರಿಕ ಜವಾಬ್ದಾರಿಗಳನ್ನು ನಿಭಾಯಿಸಿಕೊಂಡು, ಸಾಹಿತ್ಯ ಕ್ಷೇತ್ರಕ್ಕೆ ಬರುವಷ್ಟರಲ್ಲಿ ವಯಸ್ಸಾಗಿರುತ್ತದೆ. ಲೇಖಕಿಯರ ಸಾಹಿತ್ಯ ಗಮನಿಸಿದರೆ ಇದು ನಮಗೆ ತಿಳಿಯುತ್ತದೆ. ಎಷ್ಟೋ ಮಹಿಳೆಯರು ತಮ್ಮ ಅಭಿವ್ಯಕ್ತಿಯನ್ನು ಅಡಗಿಸಿಕೊಂಡು, ಜೀವನದ ಕಡೆಯ ಘಟ್ಟದಲ್ಲಿ ಸಾಹಿತ್ಯ ಕ್ಷೇತ್ರಕ್ಕೆ ಪ್ರವೇಶಿಸುತ್ತಾರೆ' ಎಂದರು.

ಕವಿ ಎಚ್.ಎಸ್.ಶಿವಪ್ರಕಾಶ್, 'ಕಾವ್ಯದಲ್ಲಿ ಸಾರ್ವಕಾಲಿಕ ಪ್ರಸ್ತುತತೆ ಇರಬೇಕು. ಕಾಯಿ ಮಾಗುವವರೆಗೆ ನಾವು ಕಾಯಬೇಕಾಗುತ್ತದೆ. ಮಾಗುವ ಶಕ್ತಿ ಎಲ್ಲ ಬರಹಗಾರರಿಗೆ ಅಗತ್ಯ. ವಾಸ್ತವದಲ್ಲಿ ಸಾಹಿತ್ಯಕ್ಕೆ ಜಾತಿ, ಲಿಂಗವಿಲ್ಲ. ಆದರೆ, ಕೆಲವು ಸಲ ಬರಹವನ್ನು ಮಹಿಳೆ ಬರೆದದ್ದೋ, ಪುರುಷ ಬರೆದದ್ದೋ ಎಂದು ನೋಡುತ್ತೇವೆ. ನನ್ನ ಮೇಲೆ ಪುರುಷ ಲೇಖಕರಷ್ಟೇ ಅಕ್ಕಮಹಾದೇವಿ ಸೇರಿ ಅನೇಕ ಲೇಖಕಿಯರು ಪ್ರಭಾವ ಬೀರಿದ್ದಾರೆ. ಮಹಿಳಾ ಸಾಹಿತ್ಯವನ್ನು ಪುರುಷ ಸಾಹಿತ್ಯದ ವಿರೋಧಿಯೆಂದು ಗುರುತಿಸದೆ, ಸಾಹಿತ್ಯದ ಆವಿಷ್ಕಾರವೆಂದು ಗೌರವಿಸಿ ಪ್ರೋತ್ಸಾಹಿಸಬೇಕು' ಎಂದು ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಪ್ರಾಸ್ತಾವಿಕ ಮಾತುಗಳನ್ನಾಡಿದರು.

'ಸುಧಾ' ವಾರಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕ ಚ.ಹ. ರಘುನಾಥ ಉಪಸ್ಥಿತರಿದ್ದರು.

ವಿವಿಧ ಲೇಖಕಿಯರಿಗೆ ಪ್ರಶಸ್ತಿ ಪ್ರದಾನ

ಕಾರ್ಯಕ್ರಮದಲ್ಲಿ ಚಂದ್ರಮತಿ ಸೋಂದಾ ಅವರಿಗೆ 'ಕಾಕೋಳು ಸರೋಜಮ್ಮ ಕಾದಂಬರಿ ಪ್ರಶಸ್ತಿ', ಬಿ. ರೇವತಿ ನಂದನ್ ಅವರಿಗೆ 'ಭಾಗ್ಯ ನಂಜಪ್ಪ ವಿಜ್ಞಾನ ಸಾಹಿತ್ಯ ಪ್ರಶಸ್ತಿ', ಸರಸ್ವತಿ ಭೋಸಲೆ ಅವರಿಗೆ 'ನಾಗರತ್ನ ಚಂದ್ರಶೇಖರ್ (ಲಲಿತ ಪ್ರಬಂಧ) ಪ್ರಶಸ್ತಿ', ವಿಜಯಾ ಶಂಕರ ಅವರಿಗೆ 'ಜಿ.ವಿ. ನಿರ್ಮಲ ಪ್ರಶಸ್ತಿ', ಮಾಧವಿ ಭಂಡಾರಿ ಕೆರೆಕೋಣ ಅವರಿಗೆ 'ತ್ರಿವೇಣಿ ಸಾಹಿತ್ಯ ಪುರಸ್ಕಾರ', ನೂತನ ದೋಶೆಟ್ಟಿ ಅವರಿಗೆ 'ಕಮಲಾ ರಾಮಸ್ವಾಮಿ (ಪ್ರವಾಸ ಸಾಹಿತ್ಯ) ಪ್ರಶಸ್ತಿ', ಸುಮಾ ರಮೇಶ್ ಅವರಿಗೆ 'ನುಗ್ಗೆಹಳ್ಳಿ ಪಂಕಜ (ಹಾಸ್ಯ ಕೃತಿ) ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಕಾವ್ಯಾ ಕಡಮೆ ಅವರಿಗೆ 'ಇಂದಿರಾ ವಾಣಿರಾವ್ (ನಾಟಕ) ಪ್ರಶಸ್ತಿ', ಲೀಲಾ ವಾಸುದೇವ್ ಅವರಿಗೆ 'ಜಯಮ್ಮ ಕರಿಯಣ್ಣ (ಸಂಶೋಧನೆ) ಪ್ರಶಸ್ತಿ', ಸುಧಾ ಆಡುಕಳ, ಸಿಂಧುಚಂದ್ರ ಅವರಿಗೆ 'ತ್ರಿವೇಣಿ ದತ್ತಿನಿಧಿ' ಬಹುಮಾನ, ಶೋಭಾ ನಾಯಕ ಅವರಿಗೆ ಉಷಾ. ಪಿ.ರೈ ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿ, ಮಾಲತಿ ಹೆಗಡೆ, ಮಂಜುಳಾ ಗೋನಾಳ ಅವರಿಗೆ 'ನಿರುಪಮಾ ಕಥಾ ಪ್ರಶಸ್ತಿ', ಕಾತ್ಯಾಯಿನಿ ಕುಂಜಿಬೆಟ್ಟು ಅವರಿಗೆ 'ಶೈಲಾ ನಾಗರಾಜ್ ಕಾವ್ಯ ಪ್ರಶಸ್ತಿ', ದೇವಿಕಾ ನಾಗೇಶ್ ಅವರಿಗೆ 'ಶ್ರೀಲೇಖಾ (ಕಾವ್ಯ ಪ್ರಶಸ್ತಿ) ಪ್ರಶಸ್ತಿ', ಮಂಜುಳಾ ಹಿರೇಮಠ ಅವರಿಗೆ 'ಕೆ.ಟಿ. ಬನಶಂಕರಮ್ಮ ಪ್ರಶಸ್ತಿ' ಹಾಗೂ ಅಕ್ಷತಾ ಹುಂಚದಕಟ್ಟೆ ಅವರಿಗೆ 'ಪ್ರೇಮಾಭಟ್ಟ ಮತ್ತು ಎ.ಎಸ್.ಭಟ್ಟ ಪ್ರಶಸ್ತಿ' ವಿತರಿಸಲಾಯಿತು.

ನೀರಿನಲ್ಲಿ ಮುಳುಗಿದ 968 ಗ್ರಾಮಗಳು, ಸಂತ್ರಸ್ತರಾದ 1.17 ಲಕ್ಷ ಮಂದಿ

ಅಸ್ಸಾಂನಲ್ಲಿ ಪ್ರವಾಹ ಸ್ಥಿತಿ ಗಂಭೀರ

ಗುವಾಹಟಿ (ಪಿಟಿಐ): 'ಅಸ್ಸಾಂನಲ್ಲಿ ಭಾನುವಾರವೂ ಪ್ರವಾಹ ಪರಿಸ್ಥಿತಿ ಗಂಭೀರ ಸ್ವರೂಪದಲ್ಲಿಯೇ ಮುಂದುವರಿದಿದ್ದು, ರಾಜ್ಯದ 10 ಜಿಲ್ಲೆಗಳ 1.17 ಲಕ್ಷ ಮಂದಿ ಸಂತ್ರಸ್ತರಾಗಿದ್ದಾರೆ' ಎಂದು ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ತಿಳಿಸಿದ್ದಾರೆ.

'ರಾಜ್ಯದ ಕಂದಾಯ ವಿಭಾಗದ 27 ವಲಯಗಳಲ್ಲಿ 968 ಗ್ರಾಮಗಳು ಈಗಲೂ ಜಲಾವೃತವಾಗಿವೆ' ಎಂದು 'ಎಕ್ಸ್' ಮೂಲಕ ಮಾಹಿತಿ ನೀಡಿದ್ದಾರೆ.

'ಬರಾಕ್ ಕಣಿವೆಯ ಕುಶಿಯಾರ ನದಿಯು ಕರೀಂಗಂಜ್‌ನಲ್ಲಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. 134 ನಿರಾಶ್ರಿತ ಶಿಬಿರಗಳನ್ನು ತೆರೆದಿದ್ದು, 94 ವಿತರಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಗಳಲ್ಲಿ 17,661 ಮಂದಿ ಆಶ್ರಯ ಪಡೆದಿದ್ದಾರೆ' ಎಂದು ಮಾಹಿತಿ ನೀಡಿದರು.

'ಶನಿವಾರದ ವೇಳೆಗೆ ಪ್ರವಾಹ ಪರಿಸ್ಥಿತಿ ಸುಧಾರಿಸಿದ್ದು, ಸಂತ್ರಸ್ತರ ಸಂಖ್ಯೆಯಲ್ಲಿ ಇಳಿಕೆಯಾಗಿದೆ. ಮತ್ತೆ ಇಬ್ಬರು ಮೃತಪಟ್ಟ ಬಗ್ಗೆ ವರದಿಯಾಗಿದೆ' ಎಂದು ಅಸ್ಸಾಂ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಎಸ್‌ಡಿಎಂಎ) ತಿಳಿಸಿದೆ.

3,995 ಹೆಕ್ಟೇರ್‌ನ ಬೆಳೆಯೂ ಈಗಾಗಲೇ ನೀರಿನಲ್ಲಿ ಮುಳುಗಿದ್ದು, 47,795 ಕೋಳಿ ಸೇರಿದಂತೆ 2.20 ಲಕ್ಷ ಜಾನುವಾರುಗಳು ಸಂಕಷ್ಟಕ್ಕೆ ಸಿಲುಕಿದೆ.

ಪ್ರವಾಹದಿಂದ ಮೂಲ ಸೌಕರ್ಯಕ್ಕೂ ಹಾನಿಯುಂಟಾಗಿದ್ದು, ರಾಜ್ಯದ ವಿವಿಧೆಡೆ ಮನೆ, ಕೊಟ್ಟಿಗೆ, ರಸ್ತೆ ಹಾಗೂ ಸೇತುವೆಗಳಿಗೂ ಹಾನಿ ಉಂಟಾಗಿದೆ ಎಂದು ಎಎಸ್‌ಡಿಎಂಎ ತಿಳಿಸಿದೆ.

ಪ್ರವಾಹ ನಿಯಂತ್ರಣಕ್ಕೆ ಅಮಿತ್ ಶಾ ನೀಡಿದ ಸೂಚನೆ

ನವದೆಹಲಿ (ಪಿಟಿಐ): 'ಪ್ರವಾಹ ನಿಯಂತ್ರಿಸಿ, ಕೃಷಿ, ನೀರಾವರಿ, ಪ್ರವಾಸೋದ್ಯಮ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಬ್ರಹ್ಮಪುತ್ರ ನದಿ ನೀರನ್ನು ತಿರುಗಿಸಿ ದೇಶದ ಈಶಾನ್ಯ ರಾಜ್ಯಗಳಲ್ಲಿ 50 ದೊಡ್ಡದಾದ ಕೊಳಗಳನ್ನು ನಿರ್ಮಾಣ ಮಾಡಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೂಚನೆ ನೀಡಿದ್ದಾರೆ.

ದೇಶದ ವಿವಿಧೆಡೆ ಉಂಟಾದ ಪ್ರವಾಹ ಎದುರಿಸುವ ನಿಟ್ಟಿನಲ್ಲಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು ಕೆಲವು ಸಲಹೆಗಳನ್ನು ನೀಡಿದರು.

ಅವರು ನೀಡಿದ ಸಲಹೆಗಳು ಹೀಗಿವೆ:

- ಪ್ರವಾಹ, ನೀರಿನ ಗರಿಷ್ಠ ಬಳಕೆಗಾಗಿ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ(ಇಸ್ರೊ) ಉಪಗ್ರಹ ಚಿತ್ರ ಆಧರಿಸಿ, ಕ್ರಮ ತೆಗೆದುಕೊಳ್ಳಬೇಕು.
- ಮಳೆ, ಪ್ರವಾಹ ಸ್ಥಿತಿಗತಿ ನಿರ್ವಹಿಸಲು ಹವಾಮಾನ ಮುನ್ಸೂಚನಾ ವ್ಯವಸ್ಥೆ (ಐಎಂಡಿ) ಸುಧಾರಣೆಗೆ ಒತ್ತು ನೀಡಬೇಕು.
- ಬ್ರಹ್ಮಪುತ್ರ ನದಿಯ ಸಂಗ್ರಹಿಸಿದ ನೀರನ್ನು ಕೃಷಿ, ನೀರಾವರಿ ಹಾಗೂ ಪ್ರವಾಸೋದ್ಯಮ ಚಟುವಟಿಕೆಗೆ ಬಳಸಿಕೊಂಡು, ಕಡಿಮೆ ಖರ್ಚಿನಲ್ಲಿ ಪ್ರವಾಹ ನಿಯಂತ್ರಿಸಬಹುದು. ಇದರಿಂದ ಸ್ಥಳೀಯ ಆರ್ಥಿಕತೆಗೂ ನೆರವಾಗುತ್ತದೆ.



ದೇಶದ ವಿವಿಧ ರಾಜ್ಯಗಳಲ್ಲಿ ಮಳೆಯಿಂದ ಉಂಟಾದ ಪ್ರವಾಹ ಪರಿಸ್ಥಿತಿ ಕುರಿತಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭಾನುವಾರ ನವದೆಹಲಿಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿದರು. ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್, ಗೃಹ ಸಚಿವಾಲಯದ ರಾಜ್ಯ ಸಚಿವ ನಿತ್ಯಾನಂದ್ ರಾಯ್ ಸೇರಿದಂತೆ ಇತರೆ ಅಧಿಕಾರಿಗಳು ಇದ್ದರು—ಪಿಟಿಐ ಚಿತ್ರ

- ಬ್ರಹ್ಮಪುತ್ರ ನದಿಯಲ್ಲಿ ಮಳೆಗಾಲದಲ್ಲಿ ಉಂಟಾಗುವ ಪ್ರವಾಹದಿಂದ ಪ್ರತೀ ವರ್ಷ ಸಾವಿರಾರು ಹೆಕ್ಟೇರ್ ಬೆಳೆಹಾನಿಯ ಜೊತೆಗೆ ನೂರಾರು ಮಂದಿ ಪ್ರಾಣ ಕಳೆದುಕೊಳ್ಳುತ್ತಿದ್ದಾರೆ.
- ಪ್ರವಾಹ ಪೀಡಿತ ಜಾಗಗಳಲ್ಲಿ ರಸ್ತೆ ನಿರ್ಮಾಣದ ಸಂದರ್ಭದಲ್ಲೇ ನೈಸರ್ಗಿಕ ಒಳಚರಂಡಿ ವಿನ್ಯಾಸಗಳನ್ನು ಯೋಜನೆಯ ಅವಿಭಾಜ್ಯ ಅಂಗದಂತೆ ರೂಪಿಸಬೇಕು.
- ದೇಶದ ಪ್ರಮುಖ ಅಣೆಕಟ್ಟುಗಳ ಗೇಟ್‌ಗಳನ್ನು ಸುಸ್ಥಿತಿಯಲ್ಲಿಡಬೇಕು.

ತ್ವರಿತ ಮಾಹಿತಿ ನೀಡಿ: ಕಾಳ್ಗಿಚ್ಚು ಎದುರಿಸಲು ವಿವರವಾದ ಕೈಪಿಡಿ ತಯಾರಿಸಲು ವಿಪತ್ತು ನಿರ್ವಹಣಾ ಪಡೆಗೆ ತಿಳಿಸಿದ ಗೃಹ ಸಚಿವ ಶಾ, 'ಗುಡುಗು, ಮಿಂಚಿನ ದಾಳಿಗೆ ಸಂಬಂಧಿಸಿದಂತೆ ಹವಮಾನ ಇಲಾಖೆ ಪ್ರಕಟಿಸುವ ಎಚ್ಚರಿಕೆ ಸಂದೇಶಗಳನ್ನು ಎಸ್‌ಎಂಎಸ್, ಟಿ.ವಿ, ರೇಡಿಯೊ ಮೂಲಕ ಸಾರ್ವಜನಿಕರಿಗೆ ತ್ವರಿತವಾಗಿ ಮಾಹಿತಿ ತಲುಪಿಸಬೇಕು' ಎಂದು ಸಭೆಯಲ್ಲಿ ಅವರು ತಿಳಿಸಿದರು.

ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್, ರಾಜ್ಯ ಸಚಿವ ನಿತ್ಯಾನಂದ್ ರಾಯ್, ಗೃಹ, ಜಲಸಂಪನ್ಮೂಲ, ನದಿ ಅಭಿವೃದ್ಧಿ, ಭೂ ವಿಜ್ಞಾನ, ಪರಿಸರ, ರಸ್ತೆ ಸಚಿವಾಲಯಗಳ ಕಾರ್ಯದರ್ಶಿ, ರೈಲ್ವೆ ಬೋರ್ಡ್ ಅಧ್ಯಕ್ಷೆ ಹಾಗೂ ಎನ್‌ಡಿಎಂಎ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಮೇಘಸ್ಫೋಟ: ಇಟಾನಗರದಲ್ಲಿ ಭೂಕುಸಿತ

ಇಟಾನಗರ (ಪಿಟಿಐ): 'ಅರುಣಾಚಲ ಪ್ರದೇಶದ ರಾಜಧಾನಿ ಇಟಾನಗರ-ದಲ್ಲಿ ಭಾನುವಾರ ಬೆಳಿಗ್ಗೆ ಮೇಘಸ್ಫೋಟ ಸಂಭವಿಸಿದ್ದು, ಹಲವೆಡೆ ಭೂಕುಸಿತದ ಜೊತೆಗೆ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ರಾಜ್ಯದಲ್ಲಿ ಕಳೆದ ವಾರ ವ್ಯಾಪಕ ಪ್ರಮಾಣದಲ್ಲಿ ಮಳೆಯಾಗಿತ್ತು. ಕಳೆದೆರಡು ದಿನಗಳಿಂದ ಪರಿಸ್ಥಿತಿ ಸುಧಾರಿಸಿತ್ತು. ಹವಾಮಾನ ಇಲಾಖೆ ಕೂಡ ಭಾನುವಾರ ರಾಜ್ಯದಲ್ಲಿ ಮಳೆಯಾಗುವ ಕುರಿತು ಯಾವುದೇ ಮಾಹಿತಿ ನೀಡಿರಲಿಲ್ಲ' ಎಂದು ತಿಳಿಸಿದರು.

'ಬೆಳಿಗ್ಗೆ 10.30ರ ಸುಮಾರಿಗೆ ಮೇಘಸ್ಫೋಟ ಸಂಭವಿಸಿದ ಬೆನ್ನಲ್ಲೇ ಇಟಾನಗರ ಸೇರಿದಂತೆ ಅದಕ್ಕೆ ಹೊಂದಿಕೊಂಡಿರುವ ಹಲವೆಡೆ ಭೂಕುಸಿತದ ವರದಿಯಾಗಿದೆ. ರಾಷ್ಟ್ರೀಯ ಹೆದ್ದಾರಿ–415ಕ್ಕೆ ತಾಗಿಕೊಂಡಂತೆ ಹಲವು ಕಡೆ ಪ್ರವಾಹ ಸ್ಥಿತಿ ನಿರ್ಮಾಣವಾಗಿದೆ' ಎಂದು ವಿಪತ್ತು ನಿರ್ವಹಣಾ ವಿಭಾಗದ ಅಧಿಕಾರಿರೊಬ್ಬರು ತಿಳಿಸಿದರು.

ಛತ್ತೀಸಗಢದಲ್ಲಿ ಕಚ್ಚಾ ಬಾಂಬ್ ಬಳಸಿ ಟ್ರಕ್ ಸ್ಫೋಟ

ಇಬ್ಬರು ಭದ್ರತಾ ಸಿಬ್ಬಂದಿ ಸಾವು

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಭಾನುವಾರ ಕಚ್ಚಾ ಬಾಂಬ್ ಬಳಸಿ ಟ್ರಕ್ ಸ್ಫೋಟವಾಗುವಂತೆ ಮಾಡಿದ್ದು, ಕೇಂದ್ರ ಮೀಸಲು ಪಡೆಯ ಅರಣ್ಯ ಹೋರಾಟ ಘಟಕ 'ಕೋಬ್ರಾ'ದ ಇಬ್ಬರು ಸಿಬ್ಬಂದಿ ಮೃತಪಟ್ಟಿದ್ದಾರೆ.

ಸಿಲ್ಗೇರ್, ತೆಕಲ್‌ಗುಡೆಂ ಶಿಬಿರಗಳ ನಡುವೆ ತಿಮ್ಮಪುರಂ ಗ್ರಾಮದ ಬಳಿ ಮಧ್ಯಾಹ್ನ 3 ಗಂಟೆಗೆ ಅವಘಡ ಸಂಭವಿಸಿದೆ.

ಕೋಬ್ರಾದ 201ನೇ ಘಟಕದ ಸಿಬ್ಬಂದಿ ಈ ವಲಯದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದರು. ಟ್ರಕ್ ಗುರಿಯಾಗಿಸಿ ನಕ್ಸಲೀಯರು ದಾಳಿ ನಡೆಸಿದ್ದು, ಕಾನ್‌ಸ್ಟೆಬಲ್‌ಗಳಾದ ಶೈಲೇಂದ್ರ (29) ಮತ್ತು ವಾಹನ ಚಾಲಕ ವಿಷ್ಣು (35) ಹತರಾದರು. ಸ್ಥಳದಲ್ಲಿ ಹೆಚ್ಚಿನ ಸಿಬ್ಬಂದಿ ನಿಯೋಜಿಸಿ ಶೋಧ ಚುರುಕುಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೋಟು ಮುದ್ರಣ, ನಕಲಿನೋಟು, ಪರಿಕರಗಳು ಜಪ್ತಿ: ನಕ್ಸಲರು ಮುದ್ರಣ ಮಾಡಿದ್ದ ಅಪಾರ ಪ್ರಮಾಣದ ನಕಲಿ ನೋಟುಗಳು ಹಾಗೂ ಮುದ್ರಣ ಪರಿಕರಗಳನ್ನು ಭದ್ರತಾ ಪಡೆಗಳು ಇದೇ ಮೊದಲ ಬಾರಿಗೆ ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ಜಪ್ತಿ ಮಾಡಿವೆ.

ನಕ್ಸಲರು ಇಲ್ಲಿನ ಬಸ್ತಾರ್ ವಲಯದಲ್ಲಿ ವಾರದ ಮಾರುಕಟ್ಟೆ-ಗಳಲ್ಲಿ ನಕಲಿ ನೋಟುಗಳನ್ನು ಬಳಸಿ ವಹಿವಾಟು ನಡೆಸುತ್ತಿದ್ದು, ಸ್ಥಳೀಯ, ಅಮಾಯಕ ಬುಡಕಟ್ಟು ಜನರನ್ನು ವಂಚಿಸುತ್ತಿದ್ದರು ಎಂದು ಭಾನುವಾರ ಪೊಲೀಸರು ಮಾಹಿತಿ ನೀಡಿದ್ದಾರೆ.

ಗುಡ್ಡ ಪ್ರದೇಶದ ಕೋರಾಜ್‌ಗುಡ ಗ್ರಾಮದಲ್ಲಿ ಶನಿವಾರ ಸಂಜೆ ಭದ್ರತಾ ಪಡೆಗಳು ಜಂಟಿ ಕಾರ್ಯಾಚರಣೆ ನಡೆಸಿ ನೋಟು ಮುದ್ರಣ ತಾಣದ ಮೇಲೆ ದಾಳಿ ಮಾಡಿದವು ಎಂದು ಎಸ್‌ಪಿ ಕಿರಣ್ ಜಿ. ಚವಾಣ್ ಅವರು ತಿಳಿಸಿದ್ದಾರೆ.

ಕೇಂದ್ರ ಮೀಸಲು ಪಡೆ, ಜಿಲ್ಲಾ ಮೀಸಲು ಪಡೆ, ಬಸ್ತಾರ್ ಫೈಟರ್ಸ್, ಜಿಲ್ಲಾ ಪೊಲೀಸ್ ಪಡೆ ಸಿಬ್ಬಂದಿ ಈ ಜಂಟಿ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. ಪೊಲೀಸರು ದಾಳಿ ನಡೆಸುವ ಸುಳಿವು ತಿಳಿದ ನಕ್ಸಲರು ಸ್ಥಳದಿಂದ ಪರಾರಿ ಆಗಿದ್ದರು ಎಂದು ಹೇಳಿದ್ದಾರೆ.

₹50, 100, 200 ಮತ್ತು 500 ಮುಖಬೆಲೆಯ ನಕಲಿ ನೋಟುಗಳು, ವರ್ಣ ಮತ್ತು ಕಪ್ಪು ಬಿಳುಪು ಮುದ್ರಣ ಯಂತ್ರಗಳು, ಇನ್‌ವರ್ಟರ್, 200 ಬಾಟಲಿ ಶಾಯಿ, ನಾಲ್ಕು ಕ್ಯಾಟ್ರಿ-ಡ್ಜ್‌ಗಳು, 9 ಪ್ರಿಂಟರ್ ರೋಲ್‌ಗಳು, ವೈರ್‌ಲೆಸ್ ಸೆಟ್‌ಗಳನ್ನು ಜಪ್ತಿ ಮಾಡಲಾಗಿದೆ.

ಇದರ ಜೊತೆಗೆ, ಎರಡು ಮಜಲ್ ಲೋಡಿಂಗ್ ಗನ್‌ಗಳು, ದೊಡ್ಡ ಪ್ರಮಾಣದ ಸ್ಫೋಟಕಗಳು, ನಕ್ಸಲರ ಸಮವಸ್ತ್ರಗಳನ್ನು ಜಪ್ತಿ ಮಾಡಲಾಗಿದೆ ಎಂದು ವಿವರಿಸಿದ್ದಾರೆ. ಹಣಕಾಸಿನ ಕೊರತೆ ನೀಗಿಸಿಕೊಳ್ಳಲು ಈ ಮಾರ್ಗ ಕಂಡುಕೊಂಡಿದ್ದರು ಎಂದು ಕಿರಣ್ ಹೇಳಿದ್ದಾರೆ.

ಇದೇ 26ರಿಂದ 'ಇಂಡಿಯಾ ಸ್ಪೇಸ್ ಕಾಂಗ್ರೆಸ್' ಆರಂಭ

ನವದೆಹಲಿ (ಪಿಟಿಐ): ಸ್ಯಾಟ್‌ಕಾಮ್ ಇಂಡಸ್ಟ್ರಿ ಅಸೋಸಿಯೇಷನ್–ಇಂಡಿಯಾ ಆಯೋಜಿಸಿರುವ 'ಇಂಡಿಯಾ ಸ್ಪೇಸ್ ಕಾಂಗ್ರೆಸ್' (ಐಎಸ್‌ಸಿ)ಮೂರು ದಿನಗಳ ಸಭೆಯಲ್ಲಿ ನೀತಿ ನಿರೂಪಕರು, ಉದ್ಯಮಿಗಳು ಭಾಗವಹಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬುಧವಾರದಿಂದ ಈ ಸಭೆ ಪ್ರಾರಂಭವಾಗಲಿದೆ. ಇಸ್ರೊ ಅಧ್ಯಕ್ಷ ಎಸ್. ಸೋಮನಾಥ್, ಭಾರತದ ಬಾಹ್ಯಾಕಾಶ ನಿಯಂತ್ರಕ ಇನ್–ಸ್ಪೇಸ್ ಮುಖ್ಯಸ್ಥ ಪವನ್ ಕುಮಾರ್ ಗೋಯೆಂಕಾ, ಇಟಲಿ ಮತ್ತು ಆಸ್ಟ್ರೇಲಿಯಾ ಬಾಹ್ಯಾಕಾಶ ಸಂಸ್ಥೆಯ ನಿರ್ವಾಹಕರು ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಲಿದ್ದಾರೆ.



ಎಸ್. ಸೋಮನಾಥ್

ನಕ್ಸಲ್ ಹತ್ಯೆ

ಧಮ್ತರಿ (ಪಿಟಿಐ): ಛತ್ತೀಸಗಢದ ಧಮ್ತರಿ ಜಿಲ್ಲೆಯಲ್ಲಿ ಭಾನುವಾರ ಭದ್ರತಾ ಪಡೆಯವರು ನಕ್ಸಲ್ ಒಬ್ಬನನ್ನು ಗುಂಡೇಟಿನಿಂದ ಹತ್ಯೆ ಮಾಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುಹ್‌ಕೋಟ್– ಆಮ್‌ಝರ್ ಹಳ್ಳಿಗಳ ಬಳಿಯ ಅರಣ್ಯ ಪ್ರದೇಶದಲ್ಲಿ ಭಾನುವಾರ ಮಧ್ಯಾಹ್ನ ಗುಂಡಿನ ಚಕಮಕಿ ನಡೆಯಿತು. ಜಿಲ್ಲಾ ಮೀಸಲು ದಳದ ತಂಡದವರು ನಕ್ಸಲ್ ವಿರೋಧಿ ಕಾರ್ಯಾಚರಣೆ ನಡೆಸಿದಾಗ ನಡೆದ ಚಕಮಕಿಯಲ್ಲಿ ನಕ್ಸಲ್ ಹತನಾದ. ಇದುವರೆಗೆ 133 ನಕ್ಸಲರನ್ನು ರಾಜ್ಯದಲ್ಲಿ ಹತ್ಯೆ ಮಾಡಿದಂತಾಗಿದೆ ಎಂದರು.

ಜಾಮೀನಿಗೆ ಹೈಕೋರ್ಟ್ ತಡೆ 'ಸುಪ್ರೀಂ'ಗೆ ಮೊರೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ವಿಚಾರಣಾ ನ್ಯಾಯಾಲಯ ತಮಗೆ ಮಂಜೂರು ಮಾಡಿದ ಜಾಮೀನಿನ ಮೇಲೆ ಮಧ್ಯಂತರ ತಡೆ ಹೇರಿದ ದೆಹಲಿ ಹೈಕೋರ್ಟ್ ಆದೇಶದ ವಿರುದ್ಧ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ.



ಅರವಿಂದ ಕೇಜ್ರಿವಾಲ್

ವಿಚಾರಣಾ ನ್ಯಾಯಾಲಯವು ಜೂನ್ 20ರಂದು ಕೇಜ್ರಿವಾಲ್ ಅವರಿಗೆ ಜಾಮೀನು ಮಂಜೂರು ಮಾಡಿತ್ತು. ಈ ಪ್ರಕಾರ ಕೇಜ್ರಿವಾಲ್ ಶುಕ್ರವಾರ ಜೈಲಿನಿಂದ ಬಿಡುಗಡೆ ಯಾಗಬೇಕಿತ್ತು. ಆದರೆ, ಕೇಜ್ರಿವಾಲ್ ಅವರ ಬಿಡುಗಡೆ ಪ್ರಶ್ನಿಸಿ, ಜಾರಿ ನಿರ್ದೇಶನಾಲಯವು (ಇ.ಡಿ) ದೆಹಲಿ ಹೈಕೋರ್ಟ್ ಮೆಟ್ಟಿಲೇರಿತ್ತು. ಈ ಕುರಿತು ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ರಜಾಕಾಲದ ಪೀಠವು, ಕೇಜ್ರಿವಾಲ್ ಅವರ ಬಿಡುಗಡೆಗೆ ತಡೆ ಹೇರಿತ್ತು.

ಈ ಕುರಿತು ಎರಡೂ ಪಕ್ಷಗಳು ಜೂನ್ 24ರ ಒಳಗಾಗಿ ಅಭಿಪ್ರಾಯ ತಿಳಿಸಬೇಕು. ಅಲ್ಲಿಯವರೆಗೆ ವಿಚಾರಣಾ ನ್ಯಾಯಾಲಯದ ಆದೇಶದ ಮೇಲೆ ತಡೆ ಮುಂದುವರಿಯಲಿದೆ ಎಂದಿತ್ತು.

ನೀಟ್– ಪಿಜಿ ಮುಂದೂಡಿಕೆ: ಮೋದಿ ವಿರುದ್ಧ ರಾಹುಲ್ ವಾಗ್ಬಾಣ

'ಶಿಕ್ಷಣ ವ್ಯವಸ್ಥೆಯ ನಾಶಕ್ಕೆ ಉದಾಹರಣೆ'

ನವದೆಹಲಿ (ಪಿಟಿಐ): 'ನೀಟ್–ಪಿಜಿ' ಪರೀಕ್ಷೆಯನ್ನು ಮುಂದೂಡಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, 'ಮೋದಿ ಸರ್ಕಾರ ದೇಶದ ಶಿಕ್ಷಣ ವ್ಯವಸ್ಥೆಯನ್ನು ನಾಶ ಮಾಡಿರುವುದಕ್ಕೆ ಇದು ಮತ್ತೊಂದು ಉದಾಹರಣೆ' ಎಂದು ಭಾನುವಾರ ಕಿಡಿ ಕಾರಿದ್ದಾರೆ.

ಸ್ಪರ್ಧಾತ್ಮಕ ಪರೀಕ್ಷೆಗಳ ವಿಶ್ವಾಸಾರ್ಹತೆ ಕುರಿತಾಗಿ ಇತ್ತೀಚೆಗೆ ಕೇಳಿಬಂದಿರುವ ಆರೋಪಗಳ ಕಾರಣಕ್ಕೆ 'ಮುನ್ನೆಚ್ಚರಿಕೆ ಕ್ರಮ'ವಾಗಿ ಭಾನುವಾರ (ಜೂನ್ 23) ನಿಗದಿಯಾಗಿದ್ದ ನೀಟ್–ಪಿಜಿ ಪ್ರವೇಶ ಪರೀಕ್ಷೆಯನ್ನು ಮುಂದೂಡಲು ನಿರ್ಧರಿಸಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿತ್ತು.

'ಬಿಜೆಪಿ ಆಡಳಿತದಲ್ಲಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಿ ತಮ್ಮ ವೃತ್ತಿ ಜೀವನವನ್ನು ರೂಪಿಸಿಕೊಳ್ಳುವ ಬದಲಿಗೆ ತಮ್ಮ ಭವಿಷ್ಯವನ್ನು ರಕ್ಷಿಸಿಕೊಳ್ಳಲು ಸರ್ಕಾರದೊಂದಿಗೆ ಹೋರಾಟ ಮಾಡಬೇಕಾಗಿದೆ' ಎಂದು ರಾಹುಲ್ ಅವರು ವ್ಯಂಗ್ಯವಾಡಿದ್ದಾರೆ.

'ಪ್ರತಿ ಬಾರಿ ಎಲ್ಲವನ್ನೂ ಮೂಕ-ಪ್ರೇಕ್ಷಕರಾಗಿ ನೋಡುತ್ತಿದ್ದ ನರೇಂದ್ರ ಮೋದಿಯವರು ಪ್ರಶ್ನೆಪತ್ರಿಕೆ ಸೋರಿಕೆ ಜಾಲ ಮತ್ತು ಶಿಕ್ಷಣ ಮಾಫಿಯಾಗಳ ಮುಂದೆ ಅಸಹಾಯಕರಾಗಿದ್ದಾರೆ ಎಂಬುದು ಈಗ ಸ್ಪಷ್ಟವಾಗಿದೆ. ಮೋದಿಯವರ ಅಸಮರ್ಥ ಸರ್ಕಾರವು ವಿದ್ಯಾರ್ಥಿಗಳ ಭವಿಷ್ಯಕ್ಕೆ ಬಹುದೊಡ್ಡ ಬೆದರಿಕೆಯಾಗಿದ್ದು, ಇದರಿಂದ ಈ ದೇಶದ ಭವಿಷ್ಯವನ್ನು ನಾವು ರಕ್ಷಿಸಬೇಕಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಶಿಕ್ಷಣ ವ್ಯವಸ್ಥೆ ಮಾಫಿಯಾ ಕೈಯಲ್ಲಿ: ನೀಟ್–ಯುಜಿ ಸೇರಿದಂತೆ ರಾಷ್ಟ್ರೀಯ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಡೆದಿರುವ ಅಕ್ರಮಗಳ ಕುರಿತಂತೆ ಕಾಂಗ್ರೆಸ್‌ನ ನಾಯಕಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಮೋದಿ ಸರ್ಕಾರದ ವಿರುದ್ಧ ಭಾನುವಾರ ಹರಿಹಾಯ್ದಿದ್ದಾರೆ.

'ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿ-ಕೆಯಾಗಿದ್ದರೆ, ನೀಟ್–ಪಿಜಿ, ಯುಜಿಸಿ–ನೆಟ್ ಮತ್ತು ಸಿಎಸ್‌ಐಆರ್–ನೆಟ್ ಪರೀಕ್ಷೆಗಳನ್ನು ರದ್ದು ಮಾಡಲಾಗಿದೆ. ದೇಶದ ಕೆಲವು ದೊಡ್ಡ ಪರೀಕ್ಷೆಗಳ ಸ್ಥಿತಿ ಇದು. ಬಿಜೆಪಿ ಆಡಳಿತದಲ್ಲಿ ಪೂರ್ಣ ಶಿಕ್ಷಣ ವ್ಯವಸ್ಥೆಯನ್ನು ಮಾಫಿಯಾ ಮತ್ತು ಭ್ರಷ್ಟರಿಗೆ ಹಸ್ತಾಂತರಿಸಲಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಟೀಕಿಸಿದ್ದಾರೆ.

'ದುರಾಸೆ ಇರುವ, ಅಸಮರ್ಥರಾದ ಹೊಗಳುಭಟರ ಕೈಗೆ ದೇಶದ ಶಿಕ್ಷಣ ವ್ಯವಸ್ಥೆ ಮತ್ತು ಮಕ್ಕಳ ಭವಿಷ್ಯವನ್ನು ಒಪ್ಪಿಸಿರುವ ಬಿಜೆಪಿಯ ರಾಜಕೀಯ ಮೊಂಡುತನ ಮತ್ತು ದುರಹಂಕಾರವು ಪ್ರಶ್ನೆಪತ್ರಿಕೆಗಳ ಸೋರಿಕೆ, ಪರೀಕ್ಷಾ ರದ್ದತಿ, ಕ್ಯಾಂಪಸ್‌ಗಳಲ್ಲಿ ಶಿಕ್ಷಣ ಇಲ್ಲವಾಗಿರುವುದಕ್ಕೆ ಕಾರಣವಾಗಿದೆ. ಅಲ್ಲದೇ, ನಮ್ಮ ಶಿಕ್ಷಣ ವ್ಯವಸ್ಥೆ ಎಂದರೆ ರಾಜಕೀಯ ಗೂಂಡಾಗಿರಿ ಎಂಬಂತಾಗಿದೆ' ಎಂದಿದ್ದಾರೆ.

'ಬಿಜೆಪಿ ಸರ್ಕಾರಕ್ಕೆ ಒಂದು ಪರೀಕ್ಷೆಯನ್ನೂ ನ್ಯಾಯಸಮ್ಮತವಾಗಿ ಮಾಡಲು ಸಾಧ್ಯವಾಗದಂತಹ ಪರಿಸ್ಥಿತಿ ದೇಶದಲ್ಲಿದೆ' ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ.

ನೀಟ್ ಹಗರಣಕ್ಕೆ ಮೋದಿ ಸರ್ಕಾರವೇ ಹೊಣೆ: ಖರ್ಗೆ

ನೀಟ್–ಯುಜಿ ಅಕ್ರಮ ಸಂಬಂಧ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯಲ್ಲಿ ಅಧಿಕಾರಿಗಳ ಬದಲಾವಣೆ ಮಾಡಿರುವುದಕ್ಕೆ ಮೋದಿ ಸರ್ಕಾರವನ್ನು ಟೀಕಿಸಿರುವ ಕಾಂಗ್ರೆಸ್, ಹಗರಣದ ಅಂತಿಮ ಹೊಣೆಗಾರಿಕೆ ಕೇಂದ್ರ ಸರ್ಕಾರದ್ದು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ.

'ಬಿಜೆಪಿಯು ದೇಶದ ಶಿಕ್ಷಣ ವ್ಯವಸ್ಥೆಯನ್ನು ಕುಲಗೆಡಿಸಿದ್ದು, ಇಲ್ಲಿ ಕಂಡು ಬರುತ್ತಿರುವ ಸಮಸ್ಯೆಗಳಿಗೆ ಅಧಿಕಾರಿಗಳ ಬದಲಾವಣೆಯಿಂದ ಪರಿಹಾರ ಸಾಧ್ಯವಿಲ್ಲ' ಎಂದು ಅವರು ಹೇಳಿದ್ದಾರೆ.

ವಿದ್ಯಾರ್ಥಿಗಳಿಗೆ ನ್ಯಾಯ ಸಿಗಬೇಕಾದರೆ, ಮೋದಿ ಸರ್ಕಾರವನ್ನು ಹೊಣೆ ಮಾಡಬೇಕು ಎಂದು ಅವರು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಶನಿವಾರ ಎನ್‌ಟಿಎ ವ್ಯವಸ್ಥಾಪಕ ನಿರ್ದೇಶಕ ಸುಬೋಧ್ ಸಿಂಗ್ ಅವರನ್ನು ಹುದ್ದೆಯಿಂದ ತೆರವುಗೊಳಿಸಿತ್ತು.

ಪ್ರಧಾನ್ ರಾಜೀನಾಮೆಗೆ ಸಿಪಿಎಂ ಆಗ್ರಹ

ನವದೆಹಲಿ (ಪಿಟಿಐ): ನೀಟ್ ವಿವಾದಕ್ಕೆ ಸಂಬಂಧಿಸಿದಂತೆ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಸಿಪಿಎಂ ಆಗ್ರಹಿಸಿದೆ.

ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಸಿಪಿಎಂ ಪಾಲಿಟ್ ಬ್ಯೂರೊ, 'ರಾಷ್ಟ್ರ ಮಟ್ಟದ ಪರೀಕ್ಷಾ ಪ್ರಕ್ರಿಯೆಯಲ್ಲಿ ನಡೆಯುತ್ತಿರುವ ಕೆಟ್ಟ ಬೆಳವಣಿಗೆಗಳಿಂದ ತೀವ್ರ ನೋವಾಗಿದೆ' ಎಂದು ಹೇಳಿದೆ.

ನೀಟ್ ಪಿಜಿ, ಯುಜಿಸಿ ನೆಟ್ ಪರೀಕ್ಷೆಗಳು ರದ್ದಾಗಿರುವುದು ಸೇರಿದಂತೆ ಪರೀಕ್ಷೆಗೆ ಸಂಬಂಧಿಸಿದ ವಿಚಾರಗಳನ್ನು ಪ್ರಸ್ತಾಪಿಸಿರುವ ಕಮ್ಯುನಿಸ್ಟ್ ಪಕ್ಷ, 'ಈ ಅಕ್ರಮಗಳು ಮತ್ತು ಪರೀಕ್ಷಾ ಪ್ರಕ್ರಿಯೆಯ ವೈಫಲ್ಯವು ದೇಶದ ಉನ್ನತ ಶಿಕ್ಷಣದ ಪ್ರಮುಖ ವಲಯಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ' ಎಂದು ಹೇಳಿದೆ.

'ಕೇವಲ ಭ್ರಷ್ಟಾಚಾರದ ಕಾರಣಕ್ಕೆ ಇದೆಲ್ಲ ಆಗುತ್ತಿಲ್ಲ. ಹೊಸ ಶಿಕ್ಷಣ ನೀತಿಯ ಭಾಗವಾದ ಶಿಕ್ಷಣದ ಕೇಂದ್ರೀಕರಣ, ವಾಣಿಜ್ಯೀಕರಣ ಮತ್ತು ಕೋಮುವಾದೀಕರಣವೂ ಇದಕ್ಕೆ ಕಾರಣ' ಎಂದು ಸಿಪಿಎಂ ಹೇಳಿದೆ.

ನೀಟ್: ಸಿಬಿಐ ಎಫ್‌ಐಆರ್ ದಾಖಲು

ಒಂದನೇ ಪುಟದಿಂದ...

ಯಾವುದರ ಬಗ್ಗೆ ತನಿಖೆ: ಈ ಪರೀಕ್ಷಾ ಅಕ್ರಮದ ಪಿತೂರಿ, ವಂಚನೆ, ಅಸಲಿ ಅಭ್ಯರ್ಥಿಯ ಸೋಗಿನಲ್ಲಿ ನಕಲಿ ಅಭ್ಯರ್ಥಿ ಹಾಜರಾಗಿರುವುದು, ನಂಬಿಕೆ ದ್ರೋಹ, ಸಾಕ್ಷ್ಯ ನಾಶಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಗಳು, ಸಂಸ್ಥೆಗಳು ಮತ್ತು ಮಧ್ಯವರ್ತಿಗಳು ಮಾಡಿದ ಪ್ರಯತ್ನಗಳನ್ನು ಒಳಗೊಂಡಂತೆ ಒಟ್ಟಾರೆ ಅವ್ಯವಹಾರಗಳ ಕುರಿತು ಸಮಗ್ರ ತನಿಖೆ ನಡೆಸುವಂತೆ ಶಿಕ್ಷಣ ಸಚಿವಾಲಯವು ಮನವಿ ಮಾಡಿದೆ ಎಂದು ಸಿಬಿಐ ಪ್ರಕಟಣೆಯಲ್ಲಿ ತಿಳಿಸಿದೆ.

ಪರೀಕ್ಷಾ ಅವ್ಯವಹಾರ, ಪಿತೂರಿಯಲ್ಲಿ ಯಾವುದೇ ಸಾರ್ವಜನಿಕ ಸೇವಾ ವಲಯದವರ ಪಾತ್ರದ ಕುರಿತೂ ತನಿಖೆ ನಡೆಸುವಂತೆ ಸಚಿವಾಲಯ ಸಿಬಿಐ ಅನ್ನು ಕೋರಿದೆ. ಸಿಬಿಐ, 2018ರ ಮೇ, 2021ರ ಸೆಪ್ಟೆಂಬರ್ ಮತ್ತು 2022ರ ಜುಲೈನಲ್ಲಿ ದಾಖಲಾಗಿರುವ 'ನೀಟ್' ಪರೀಕ್ಷಾ ಅಕ್ರಮಗಳ ಕುರಿತ ಪ್ರಕರಣಗಳ ತನಿಖೆಯನ್ನೂ ಈಗಾಗಲೇ ನಡೆಸುತ್ತಿದೆ. ಖಾಸಗಿ ಶಿಕ್ಷಣ ಸಲಹೆಗಾರರು, ಮಧ್ಯವರ್ತಿಗಳ ಪಾತ್ರ ಹಾಗೂ ಪರೀಕ್ಷಾ ಕೇಂದ್ರಗಳಲ್ಲಿ ಅಸಲಿ ಅಭ್ಯರ್ಥಿಗಳ ಸೋಗಿನಲ್ಲಿ ನಕಲಿ ಅಭ್ಯರ್ಥಿಗಳು ಹಾಜರಾಗಿದ್ದ ಪ್ರಕರಣಗಳು ಇವಾಗಿವೆ. ಇವುಗಳ ಜತೆಗೆ ಹೊಸದಾಗಿ ಈ ವರ್ಷದ ಯುಜಿಸಿ–ನೆಟ್ ಮತ್ತು ಯುಜಿ–ನೀಟ್ ಅಕ್ರಮಗಳ ಪ್ರಕರಣವನ್ನೂ ತನಿಖೆಗೆ ತೆಗೆದುಕೊಂಡಿದೆ. 'ಯುಜಿಸಿ–ನೆಟ್' ಪರೀಕ್ಷೆಯಲ್ಲಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಸಿಬಿಐ ಜೂನ್ 20ರಂದು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದೆ.

ಐಎಂಎ ಸ್ವಾಗತ: ನೀಟ್–ಯುಜಿ ಪರೀಕ್ಷೆಯಲ್ಲಿನ ಅಕ್ರಮ, ಅವ್ಯವಹಾರಗಳ ಬಗ್ಗೆ ತನಿಖೆ ನಡೆಸಲು ಪ್ರಕರಣವನ್ನು ಸಿಬಿಐಗೆ ವರ್ಗಾಯಿಸಿರುವ ಕೇಂದ್ರ ಸರ್ಕಾರ ಕ್ರಮ ಸ್ವಾಗತಾರ್ಹ ಎಂದು ಭಾರತೀಯ ವೈದ್ಯಕೀಯ ಸಂಘ (ಐಎಂಎ) ತಿಳಿಸಿದೆ.

ಎನ್‌ಟಿಎ ವೆಬ್ ಪೋರ್ಟಲ್‌ಗಳು ಸುರಕ್ಷಿತ: ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ವೆಬ್‌ಸೈಟ್ ಮತ್ತು ಅದರ ಇತರ ವೆಬ್ ಪೋರ್ಟಲ್‌ಗಳು ಸಂಪೂರ್ಣ ಸುರಕ್ಷಿತವಾಗಿವೆ ಎಂದು ಎನ್‌ಟಿಎ ಅಧಿಕಾರಿಗಳು ಭಾನುವಾರ ಹೇಳಿದ್ದಾರೆ. ಎನ್‌ಟಿಎ ವೆಬ್ ಪೋರ್ಟಲ್‌ಗಳು ಹ್ಯಾಕ್ ಆಗಿವೆ ಎಂಬುದೆಲ್ಲ ವದಂತಿ ಮತ್ತು ಸುಳ್ಳು ಸುದ್ದಿ ಎಂದು ಅವರು ತಿಳಿಸಿದ್ದಾರೆ.

ತಜ್ಞರ ಸಮಿತಿ ಸಭೆ ಇಂದು

ನವದೆಹಲಿ (ಪಿಟಿಐ): ಪರೀಕ್ಷಾ ಸುಧಾರಣೆಗಳನ್ನು ಸೂಚಿಸಲು ಮತ್ತು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಕಾರ್ಯ ಚಟುವಟಿಕೆಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರ ರಚಿಸಿರುವ ಇಸ್ರೊ ಮಾಜಿ ಮುಖ್ಯಸ್ಥ ಕೆ. ರಾಧಾಕೃಷ್ಣನ್ ನೇತೃತ್ವದ ಉನ್ನತ ಮಟ್ಟದ ತಜ್ಞರ ಸಮಿತಿ ಸೋಮವಾರ ಸಭೆ ಸೇರಲಿದೆ ಎಂದು ಮೂಲಗಳು ತಿಳಿಸಿವೆ.

ಸಿಬಿಐ ತನಿಖಾ ತಂಡದ ಮೇಲೆ ದಾಳಿ

ಪಟ್ನಾ: ಯುಜಿಸಿ ನೆಟ್ ಪಶ್ನೆಪತ್ರಿಕೆ ಸೋರಿಕೆ ಪ್ರಕರಣದ ತನಿಖೆ ನಡೆಸಲು ಬಿಹಾರಕ್ಕೆ ತೆರಳಿದ್ದ ಸಿಬಿಐ ತಂಡದ ಮೇಲೆ ನವಡಾ ಗ್ರಾಮಸ್ಥರು ದಾಳಿ ಮಾಡಿದ್ದಾರೆ.

ತನಿಖಾ ತಂಡವು ನಕಲಿ ಎಂದು ಗ್ರಾಮಸ್ಥರು ದಾಳಿ ಮಾಡಿದ್ದಾರೆ ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ. 200 ಮಂದಿಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ನಾಲ್ವರನ್ನು ಬಂಧಿಸಲಾಗಿದೆ.

ಎಲ್ಲ ಆಯಾಮಗಳಲ್ಲೂ ತನಿಖೆ: ನೀಟ್ ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ. ತಪ್ಪಿತಸ್ಥರಿಗೆ ಜೈಲು ಶಿಕ್ಷೆಯಾಗಲಿದೆ ಎಂದು ಬಿಹಾರ ಉಪಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಹೇಳಿದ್ದಾರೆ.

'ತನಿಖೆ ಪ್ರಗತಿಯಲ್ಲಿದೆ. ಯಾರೆಲ್ಲ ಇದರಲ್ಲಿ ಭಾಗಿಯಾಗಿದ್ದಾರೆ? ಅಕ್ರಮಗಳನ್ನು ಹೇಗೆ ನಡೆಸಿದ್ದಾರೆ? ಎಫ್‌ಐಆರ್ ದಾಖಲಿಸಿದ ನಂತರ ಎಲ್ಲರನ್ನೂ ಜೈಲಿಗೆ ಕಳುಹಿಸಲಾಗುವುದು' ಎಂದು ಅವರು ಗ್ವಾಲಿಯರ್‌ನಲ್ಲಿ ಮಾಧ್ಯಮಗಳಿಗೆ ತಿಳಿಸಿದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಸಿಕಂದರ್ ಯದವೇಂದು ಸೇರಿದಂತೆ 13 ಮಂದಿಯನ್ನು ಬಿಹಾರ ಪೊಲೀಸರು ಕಳೆದ ತಿಂಗಳು ಬಂಧಿಸಿದ್ದರು. ಜಾರ್ಖಂಡ್‌ನ ದೇವಗಢ ಜಿಲ್ಲೆಯಲ್ಲಿ ಆರು ಮಂದಿಯನ್ನು ವಶಕ್ಕೆ ಪಡೆದಿದ್ದರು.

ಮರು ನೀಟ್: 813 ಮಂದಿ ಹಾಜರು

ಒಂದನೇ ಪುಟದಿಂದ...

ಸುಪ್ರೀಂ ಕೋರ್ಟ್‌ನ ಆದೇಶದ ಅನ್ವಯ, ಎನ್‌ಟಿಎಯು ಏಳು ಕೇಂದ್ರಗಳಲ್ಲಿ ಪರೀಕ್ಷೆ ನಡೆಸಿದೆ. ಮೇ 5ರಂದು ಆರು ಕೇಂದ್ರಗಳಲ್ಲಿ ತಡವಾಗಿ ಪರೀಕ್ಷೆ ಆರಂಭಗೊಂಡಿತ್ತು. ವ್ಯರ್ಥವಾದ ಸಮಯದಿಂದ ಅಭ್ಯರ್ಥಿಗಳಿಗೆ ಆದ ನಷ್ಟವನ್ನು ತುಂಬುವುದಕ್ಕಾಗಿ ಕೃಪಾಂಕ ನೀಡಲಾಗಿತ್ತು.

17 ಮಂದಿ ಡಿಬಾರ್: ಈ ಮಧ್ಯೆ, ಮೇ 5ರಂದು ಬಿಹಾರದ ಪರೀಕ್ಷಾ ಕೇಂದ್ರಗಳಲ್ಲಿ ನೀಟ್ ಬರೆದಿದ್ದ 17 ಅಭ್ಯರ್ಥಿಗಳನ್ನು ಎನ್‌ಟಿಎ ಭಾನುವಾರ ಡಿಬಾರ್ ಮಾಡಿದೆ.

ಇದಕ್ಕೂ ಮೊದಲು, ಪರೀಕ್ಷೆಯಲ್ಲಿ ಅಕ್ರಮ ನಡೆಸಿದ್ದ 63 ಅಭ್ಯರ್ಥಿಗಳನ್ನು ಏಜೆನ್ಸಿಯು ಪರೀಕ್ಷಾ ಪ್ರಕ್ರಿಯೆಯಿಂದ ಹೊರ ಹಾಕಿತ್ತು. ಗುಜರಾತ್‌ನ ಗೋಧ್ರಾದಲ್ಲಿ ಪರೀಕ್ಷೆ ಬರೆದಿದ್ದ 30 ಅಭ್ಯರ್ಥಿಗಳನ್ನು ಶನಿವಾರ ಉಚ್ಚಾಟಿಸಿತ್ತು.

ಬಾರದ ಅಭ್ಯರ್ಥಿಗಳು (ಚಂಡೀಗಢ ವರದಿ): ಮರು ನೀಟ್‌ಗಾಗಿ ಚಂಡೀಗಢದ ಪರೀಕ್ಷಾ ಕೇಂದ್ರವೊಂದರಲ್ಲಿ ಭಾನುವಾರ ಎಲ್ಲ ಸಿದ್ಧತೆಗಳನ್ನು ಮಾಡಲಾಗಿತ್ತು. ಇಲ್ಲಿ ಇಬ್ಬರು ಅಭ್ಯರ್ಥಿಗಳು ಮರು ಪರೀಕ್ಷೆ ಬರೆಯಬೇಕಿತ್ತು. ಆದರೆ, ಇಬ್ಬರೂ ಪರೀಕ್ಷಾ ಕೇಂದ್ರಕ್ಕೆ ಬರಲಿಲ್ಲ.

18ನೇ ಲೋಕಸಭೆ: ಮೊದಲ ಅಧಿವೇಶನ ಇಂದಿನಿಂದ

ನವದೆಹಲಿ (ಪಿಟಿಐ): 18ನೇ ಲೋಕಸಭೆಯ ಮೊದಲ ಅಧಿವೇಶನ ಸೋಮವಾರದಿಂದ ಪ್ರಾರಂಭ-ವಾಗಲಿದ್ದು, ಚುನಾಯಿತ ಸದಸ್ಯರು ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಇದೇ 26ರಂದು ಲೋಕಸಭಾ ಸ್ಪೀಕರ್ ಆಯ್ಕೆ ನಡೆಯಲಿದ್ದು, 27ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಉಭಯ ಸದನಗಳ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.



ಬಿಜೆಪಿ ನಾಯಕ ಮತ್ತು ಏಳು ಬಾರಿ ಸಂಸದರಾಗಿ ಅನುಭವ ಇರುವ ಭರ್ತೃಹರಿ ಮಹತಾಬ್ ಅವರನ್ನು ಹಂಗಾಮಿ ಸ್ಪೀಕರ್ ಆಗಿ ನೇಮಿಸಲಾಗಿದೆ. ಅವರ ನೇಮಕಕ್ಕೆ ಸಂಬಂಧಿಸಿ ಸೃಷ್ಟಿಯಾಗಿರುವ ವಿವಾದವು ಅಧಿವೇಶನದ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಈ ಕ್ರಮವನ್ನು ವಿರೋಧ ಪಕ್ಷಗಳು ಈಗಾಗಲೇ ಟೀಕಿಸಿದ್ದು, ಈ ಸ್ಥಾನಕ್ಕೆ ಕಾಂಗ್ರೆಸ್‌ನ ಹಿರಿಯ ಸದಸ್ಯ ಕೆ. ಸುರೇಶ್ ಅವರ ಹೆಸರನ್ನು ಸೂಚಿಸಲಾಗಿದ್ದರೂ ಸರ್ಕಾರ ಕಡೆಗಣಿಸಿದೆ ಎಂದು ಆರೋಪಿಸಿವೆ.

ಮಹತಾಬ್ ಅವರು ಸತತವಾಗಿ ಏಳು ಬಾರಿ ಲೋಕಸಭೆ ಸದಸ್ಯರಾಗಿದ್ದು, ಹಂಗಾಮಿ ಸ್ಪೀಕರ್ ಹುದ್ದೆಗೆ ಅರ್ಹರಾಗಿದ್ದಾರೆ ಎಂದು ಸಂಸದೀಯ ವ್ಯವಹಾರ ಸಚಿವ ಕಿರಣ್ ರಿಜಿಜು ಪ್ರತಿಪಾದಿಸಿದ್ದಾರೆ. ಸುರೇಶ್ ಅವರು 1998 ಮತ್ತು 2004ರ ಚುನಾವಣೆಯಲ್ಲಿ ಸೋತಿದ್ದರು ಎಂದೂ ಅವರು ಹೇಳಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಲೋಕಸಭೆಯ ಹಂಗಾಮಿ ಸ್ಪೀಕರ್ ಭರ್ತೃಹರಿ ಮಹತಾಬ್ ಅವರಿಗೆ ಸೋಮವಾರ ಬೆಳಿಗ್ಗೆ ಪ್ರಮಾಣವಚನ ಬೋಧಿಸುವರು. ಬಳಿಕ ಮಹತಾಬ್ ಅವರು ಸಂಸತ್ ಭವನ ತಲುಪಿ, ಬೆಳಿಗ್ಗೆ 11 ಗಂಟೆಗೆ ಲೋಕಸಭೆ ಅಧಿವೇಶನ ಆರಂಭಿಸಲಿದ್ದಾರೆ.

ಅಗಲಿದ ಗಣ್ಯರ ಗೌರವಾರ್ಥ ಮೌನ ಆಚರಿಸುವುದರ ಮೂಲಕ ಕಲಾಪ ಆರಂಭವಾಗಲಿದೆ. ಮೊದಲಿಗೆ ಲೋಕಸಭೆಯ ನಾಯಕರಾದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಸದನದ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸುವಂತೆ ಹಂಗಾಮಿ ಸ್ಪೀಕರ್ ಕರೆ ನೀಡುತ್ತಾರೆ.

ನೂತನ ಸದಸ್ಯರಿಗೆ ಪ್ರಮಾಣವಚನ ಬೋಧಿಸಲು ಹಂಗಾಮಿ ಸ್ಪೀಕರ್‌ಗೆ ನೆರವಾಗಲು ಸದಸ್ಯರಾದ ಕೆ. ಸುರೇಶ್ (ಕಾಂಗ್ರೆಸ್), ಟಿ.ಆರ್.ಬಾಲು (ಡಿಎಂಕೆ), ರಾಧಾ ಮೋಹನ್ ಸಿಂಗ್, ಫಗ್ಗನ್ ಸಿಂಗ್ ಕುಲಸ್ತೆ (ಇಬ್ಬರೂ ಬಿಜೆಪಿ) ಹಾಗೂ ಸುದೀಪ್ ಬಂದ್ಯೋಪಾಧ್ಯಾಯ (ಟಿಎಂಸಿ) ಅವರನ್ನು ರಾಷ್ಟ್ರಪತಿ ನೇಮಿಸಿದ್ದಾರೆ. ಬಳಿಕ, ಮಂತ್ರಿ ಪರಿಷತ್ತಿನ ಸದಸ್ಯರು ಸದನದ ಸದಸ್ಯರಾಗಿ ಪ್ರಮಾಣವಚನ ಸ್ವೀಕರಿಸುವರು. ಆ ನಂತರ ಎರಡು ದಿನಗಳವರೆಗೆ ಉಳಿದ ಸದಸ್ಯರ ಪ್ರಮಾಣವಚನ ಪ್ರಕ್ರಿಯೆ ನಡೆಯಲಿದೆ.

ರಾಷ್ಟ್ರಪತಿಯವರ ಭಾಷಣದ ಮೇಲಿನ ಚರ್ಚೆಯು 28ರಂದು ಪ್ರಾರಂಭವಾಗಲಿದ್ದು, ಜುಲೈ 2 ಅಥವಾ 3ರಂದು ಪ್ರಧಾನಿ ಚರ್ಚೆಗೆ ಪ್ರತಿಕ್ರಿಯಿಸುವ ಸಾಧ್ಯತೆ ಇದೆ. ನಂತರ ಎರಡೂ ಸದನಗಳನ್ನು ಸಂಕ್ಷಿಪ್ತ ಅವಧಿಗೆ ಮುಂದೂಡಲಾಗುತ್ತದೆ. ಕೇಂದ್ರ ಬಜೆಟ್ ಮಂಡನೆಗಾಗಿ ಜುಲೈ 22ರಂದು ಮತ್ತೆ ಸದನದ ಕಲಾಪ ನಡೆಯುವ ನಿರೀಕ್ಷೆಯಿದೆ.



ಸಾಹಸ ಪ್ರದರ್ಶನ ಜಮ್ಮು ಮತ್ತು ಕಾಶ್ಮೀರದ ರಿಯಾಸಿ ಜಿಲ್ಲೆಯ ಪೊಲೀಸ್ ತರಬೇತಿ ಕೇಂದ್ರದಲ್ಲಿ ಪೊಲೀಸ್ ಇಲಾಖೆಯ 16ನೇ ಬಿಆರ್‌ಟಿಸಿ ಬ್ಯಾಚ್‌ನ ಅಧಿಕಾರಿಗಳು ತರಬೇತಿ ಪೂರ್ಣಗೊಂಡ ಪ್ರಯುಕ್ತ ನಡೆದ ಪೆರೇಡ್‌ನಲ್ಲಿ ಸಾಹಸ ಪ್ರದರ್ಶಿಸಿದರು –ಪಿಟಿಐ ಚಿತ್ರ

ಸಂಚಾರ ಪೊಲೀಸ್ ಅಧಿಕಾರಿ ಅಮಾನತು

ಲಖನೌ (ಪಿಟಿಐ): ಉತ್ತರ ಪ್ರದೇಶದಲ್ಲಿ ವಾಹನ ತಪಾಸಣೆ ವೇಳೆ ರಾಜ್ಯ ಬಿಜೆಪಿ ಘಟಕದ ವಕ್ತಾರ ರಾಕೇಶ್ ತ್ರಿಪಾಠಿ ಮತ್ತು ಅವರ ಕುಟುಂಬದ ಸದಸ್ಯರ ಜೊತೆ ಅನುಚಿತವಾಗಿ ವರ್ತಿಸಿದ್ದಾರೆ ಎಂಬ ಆರೋಪದ ಮೇರೆಗೆ ಸಂಚಾರ ವಿಭಾಗದ ಸಬ್–ಇನ್‌ಸ್ಪೆಕ್ಟರ್ ಒಬ್ಬರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ತ್ರಿಪಾಠಿ ಅವರ ಕುಟುಂಬಸ್ಥರು ವಿಮಾನ ನಿಲ್ದಾಣದಿಂದ ಕಾರಿನಲ್ಲಿ ಶನಿವಾರ ಸಂಜೆ ಮನೆಯ ಕಡೆಗೆ ಹೊರಟಿದ್ದರು. ಈ ವೇಳೆ ಕೃಷ್ಣನಗರ ಎಂಬಲ್ಲಿ ಸಂಚಾರ ವಿಭಾಗದ ಸಬ್–ಇನ್‌ಸ್ಪೆಕ್ಟರ್ ಆಶುತೋಷ್ ತ್ರಿಪಾಠಿ ಅವರು ಕಾರನ್ನು ತಡೆದು, ಪರಿಶೀಲನೆಗೆ ಒಳಪಡಿಸಿದರು. ಈ ವೇಳೆ ಎಲ್ಲಾ ದಾಖಲೆಗಳನ್ನು ತೋರಿಸಿದ ಹೊರತಾಗಿಯೂ, ಇನ್‌ಸ್ಪೆಕ್ಟರ್ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

'ವಾಹನ ತಡೆದು ಪರಿಶೀಲನೆ ನಡೆಸಿದ ಸಬ್–ಇನ್‌ಸ್ಪೆಕ್ಟರ್ ಅವರಿಗೆ ಕಾರಿಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನೀಡಿದ್ದೆ. ಆದಾಗ್ಯೂ, ಪೊಲೀಸ್ ಅಧಿಕಾರಿ ಅನುಚಿತವಾಗಿ ವರ್ತಿಸಿದ್ದಾರೆ' ಎಂದು ರಾಕೇಶ್ ತ್ರಿಪಾಠಿ ದೂರು ಸಲ್ಲಿಸಿದ್ದಾರೆ.

ಪ್ರಾಥಮಿಕ ವಿಚಾರಣೆಯಲ್ಲಿ ಈ ಆರೋಪಗಳು ನಿಜವೆಂದು ಸಾಬೀತಾಗಿವೆ. ಹೀಗಾಗಿ ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆ. ಈ ಕುರಿತು ಇಲಾಖಾ ತನಿಖೆಗೂ ಆದೇಶಿಸಲಾಗಿದೆ ಎಂದು ಸಂಚಾರ ಪೊಲೀಸ್ ಘಟಕ ಹೇಳಿಕೆ ಬಿಡುಗಡೆ ಮಾಡಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಈ ವಿಚಾರ ಭಾರಿ ಸದ್ದು ಮಾಡಿದೆ. ಈ ಘಟನೆ ಕುರಿತು ರಾಜ್ಯ ಪೊಲೀಸರು ಗಮನಹರಿಸಬೇಕು ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಸಂಸದ ರಾಧಾ ಮೋಹನ್ ದಾಸ್ ಅಗರ್‌ವಾಲ್ ಅವರು ಒತ್ತಾಯಿಸಿದ್ದರು.

ವಯನಾಡ್ ಜನರಿಗೆ ರಾಹುಲ್ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಯಬರೇಲಿಯ ಸಂಸದನಾಗಿ ಪ್ರಮಾಣ ಸ್ವೀಕರಿಸಲಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಮತ್ತೊಂದು ಸಂಸತ್ ಕ್ಷೇತ್ರವಾದ ವಯನಾಡ್‌ನ ಜನರನ್ನು ಉದ್ದೇಶಿಸಿ ಭಾವುಕ ಪತ್ರ ಬರೆದಿದ್ದಾರೆ. ಲೋಕಸಭೆಯಲ್ಲಿ ವಯನಾಡ್ ಅನ್ನು ಪ್ರತಿನಿಧಿಸಿದ್ದು ಸಂತಸ ಮತ್ತು ಗೌರವದ ವಿಚಾರವಾಗಿತ್ತು ಎಂದು ಬರೆದಿದ್ದಾರೆ.

'ರಾಯಬರೇಲಿಯ ಸಂಸದನಾಗಿ ಮುಂದುವರಿಯುವ ಸಲುವಾಗಿ ವಯನಾಡ್‌ನ ಸಂಸದನ ಸ್ಥಾನಕ್ಕೆ ರಾಜೀನಾಮೆ ನೀಡುವ ನಿರ್ಧಾರವನ್ನು ಜೂನ್ 17ರಂದು ಪ್ರಕಟಿಸಿದೆ. ಆ ವೇಳೆ ನನ್ನ ಕಣ್ಣುಗಳಲ್ಲಿದ್ದ ನೋವನ್ನು ನೀವು ನೋಡಿರಬಹುದು' ಎಂದಿದ್ದಾರೆ.

2019ರ ಲೋಕಸಭೆ ಚುನಾವಣೆಗೂ ಮುನ್ನ ವಯನಾಡ್‌ನ ಸೋದರ ಮತ್ತು ಸಹೋದರಿಯರನ್ನು ಮೊದಲ ಬಾರಿಗೆ ಭೇಟಿಯಾದ ಸಂದರ್ಭವನ್ನು ನೆನಪಿಸಿಕೊಂಡ ಅವರು, 'ನಾನು ನಿಮಗೆ ಅಪರಿಚಿತನಾಗಿದ್ದೆ. ಆದರೂ ನೀವು ನನ್ನನ್ನು ಬೆಂಬಲಿಸಿದಿರಿ. ನನ್ನನ್ನು ಭಾರಿ ಪ್ರೀತಿ ಮತ್ತು ಆದರತೆಯಿಂದ ಅಪ್ಪಿಕೊಂಡಿರಿ. ನಾನು ಯಾವಾಗೆಲ್ಲಾ ನಿಂದನೆಗೆ ಒಳಗಾಗಿದ್ದೇನೋ ಆಗೆಲ್ಲಾ ನಿಮ್ಮ ಪ್ರೀತಿ ನನ್ನನ್ನು ರಕ್ಷಿಸಿದೆ. ನೀವು ನನ್ನ ಕುಟುಂಬ, ಆಶ್ರಯ. ನನ್ನನ್ನು ಸಂದೇಹದಿಂದ ನೋಡುತ್ತಿದ್ದೀರಿ ಎಂದು ಎಂದಿಗೂ ಅನ್ನಿಸಲೇ ಇಲ್ಲ' ಎಂದು ರಾಹುಲ್ ಬರೆದಿದ್ದಾರೆ.



ಕೇರಳ ಪ್ರವಾಹದ ಸಂದರ್ಭವನ್ನು ನೆನಪಿಸಿಕೊಂಡ ಅವರು, 'ಪ್ರವಾಹದಲ್ಲಿ ಮನೆ, ಆಸ್ತಿ, ಸ್ನೇಹಿತರು ಎಲ್ಲವನ್ನೂ ಕಳೆದುಕೊಂಡಿರಿ. ಆದರೆ ನಿಮ್ಮಲ್ಲಿ ಒಂದು ಮಗು ಕೂಡ ಘನತೆಯನ್ನು ಬಿಟ್ಟುಕೊಡಲಿಲ್ಲ. ನನ್ನ ಭಾಷಣಗಳನ್ನು ವೇದಿಕೆ ಮೇಲೆ ಅನುವಾದಿಸುತ್ತಿದ್ದ ಯುವತಿಯರ ಧೈರ್ಯ, ಆತ್ಮವಿಶ್ವಾಸವನ್ನು ನಾನು ಹೇಗೆ ಮರೆಯಲಿ' ಎಂದಿದ್ದಾರೆ.

'ನನ್ನ ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ನಿಮ್ಮನ್ನು ಪ್ರತಿನಿಧಿಸಲಿದ್ದಾರೆ ಮತ್ತು ರಾಯಬರೇಲಿಯಲ್ಲೂ ನನ್ನನ್ನು ನಿಮ್ಮಷ್ಟೇ ಪ್ರೀತಿ ಮಾಡುವ ಕುಟುಂಬವಿದೆ ಎಂಬ ಕಾರಣಕ್ಕೆ ಸಮಾಧಾನದಿಂದ ಇದ್ದೇನೆ. ನಿಮಗೆ ಹೇಗೆ ಧನ್ಯವಾದ ಹೇಳುವುದು ಎಂದು ನನಗೆ ತಿಳಿಯುತ್ತಿಲ್ಲ. ನೀವು ನನ್ನ ಕುಟುಂಬ. ನಿಮ್ಮ ಸೇವೆಗಾಗಿ ನಾನು ಸದಾ ಸಿದ್ಧ' ಎಂದಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ವಯನಾಡ್ ಮತ್ತು ರಾಯಬರೇಲಿ ಕ್ಷೇತ್ರಗಳಲ್ಲೂ ರಾಹುಲ್ ಗೆದ್ದಿದ್ದರು.

ನಿಧನ ವಾರ್ತೆ

ಪತ್ರಕರ್ತ ಮುರಳೀಧರ ರೆಡ್ಡಿ

ನವದೆಹಲಿ (ಪಿಟಿಐ): 'ದಿ ಹಿಂದೂ' ಪತ್ರಿಕೆಯಲ್ಲಿ ದೀರ್ಘಾವಧಿ ಕೆಲಸ ಮಾಡಿದ್ದ ಪತ್ರಕರ್ತ ಬಿ. ಮುರಳೀಧರ ರೆಡ್ಡಿ (64) ನಿಧನರಾದರು.



'ದಿ ಹಿಂದೂ' ಪತ್ರಿಕೆಗೆ ಪಾಕಿಸ್ತಾನ ಹಾಗೂ ಶ್ರೀಲಂಕಾ ಪ್ರತಿನಿಧಿಯಾಗಿ ವರದಿಗಳನ್ನು ಮಾಡಿದ್ದರು. ರಾಮ್ ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ಶನಿವಾರ ರಾತ್ರಿ ಅನಾರೋಗ್ಯದಿಂದಾಗಿ ಮೃತಪಟ್ಟರು. ಪಿಟಿಐ ಸುದ್ದಿಸಂಸ್ಥೆಯ ಮಾಜಿ ಪತ್ರಕರ್ತೆ ಅಪರ್ಣಾ ಶ್ರೀವಾಸ್ತವ ಅವರು ಮುರಳೀಧರ ರೆಡ್ಡಿ ಅವರ ಪತ್ನಿ. ಮೃತರಿಗೆ ಒಬ್ಬ ಪುತ್ರ ಇದ್ದಾರೆ.

ಮೋಟರ್ ನ್ಯೂರಾನ್ ಕಾಯಿಲೆಯಿಂದ ಬಳಲುತ್ತಿದ್ದ ಮುರಳೀಧರ ರೆಡ್ಡಿ ಅವರು ಒಂದು ತಿಂಗಳಿನಿಂದ ಕೃತಕ ಉಸಿರಾಟದ ವ್ಯವಸ್ಥೆಯಿಂದಲೇ ಬದುಕಿದ್ದರು. ಎರಡು ವಾರಗಳ ಹಿಂದೆ ಹೃದಯಾಘಾತದ ನಂತರ ಅವರಿಗೆ ಪ್ರಜ್ಞೆ ತಪ್ಪಿತ್ತು. ರಾಜಕೀಯ ವಿದ್ಯಮಾನಗಳೂ ಸೇರಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿ ಅವರು ವರದಿಗಳನ್ನು ಬರೆದಿದ್ದರು.

ಕಂಪನಿಯ ಕಾರ್ಯ ನಿರ್ವಾಹಕರಿಗಿಂತಲೂ ಕಡಿಮೆ

ಅದಾನಿ ಸಂಬಳ ₹9.26 ಕೋಟಿ

ನವದೆಹಲಿ (ಪಿಟಿಐ): ದೇಶದ ಎರಡನೇ ಅತಿದೊಡ್ಡ ಶ್ರೀಮಂತ ವ್ಯಕ್ತಿಯಾದ ಗೌತಮ್ ಅದಾನಿ, 2023-24ನೇ ಆರ್ಥಿಕ ವರ್ಷದಲ್ಲಿ ₹9.26 ಕೋಟಿ ಸಂಬಳ ಪಡೆದಿದ್ದಾರೆ. ಇದು ಕಾರ್ಪೊರೇಟ್ ವಲಯದ ಮುಖ್ಯಸ್ಥರು ಹಾಗೂ ಅದಾನಿ ಕಂಪನಿಗಳ ಕಾರ್ಯ ನಿರ್ವಾಹಕರು ಪಡೆಯುವ ಸಂಬಳಕ್ಕಿಂತಲೂ ಕಡಿಮೆಯಿದೆ.

ಅದಾನಿ ಸಮೂಹದ 10 ಕಂಪನಿಗಳ ಪೈಕಿ ಎರಡು ಕಂಪನಿಗಳಿಂದ ಇಷ್ಟು ಮೊತ್ತದ ಸಂಬಳ ಪಡೆದಿದ್ದಾರೆ.

ಅದಾನಿ ಎಂಟರ್‌ಪ್ರೈಸಸ್‌ನಿಂದ ಅವರಿಗೆ ₹2.19 ಕೋಟಿ ಸಂಬಳ ಲಭಿಸಿದೆ. ವಿಶೇಷ ಸವಲತ್ತು, ಭತ್ಯೆ ರೂಪದಲ್ಲಿ ₹27 ಲಕ್ಷ ಪಡೆದಿದ್ದಾರೆ.



ಗೌತಮ್ ಅದಾನಿ

ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 3ರಷ್ಟು ಏರಿಕೆಯಾಗಿದೆ. ಅದಾನಿ ಪೋರ್ಟ್ಸ್ ಕಂಪನಿಯಿಂದ ಸಂಬಳದ ರೂಪದಲ್ಲಿ ₹6.8 ಕೋಟಿ ಪಾವತಿಸಲಾಗಿದೆ.

ಅದಾನಿ ಎಂಟರ್‌ಪ್ರೈಸಸ್‌ನ ಮುಖ್ಯ ಕಾರ್ಯ ನಿರ್ವಾಹಕ ಹಾಗೂ ನಿರ್ದೇಶಕ ವಿನಯ್ ಪ್ರಕಾಶ್ ಅವರ ವಾರ್ಷಿಕ ಸಂಬಳ ₹89.37 ಕೋಟಿ ಇದೆ. ಗ್ರೂಪ್ ಸಿಎಫ್‌ಒ ಜುಗೇಶಿಂದರ್ ಸಿಂಗ್ ₹9.45 ಕೋಟಿ ಸಂಬಳ ಪಡೆಯುತ್ತಾರೆ.

ರಿಲಯನ್ಸ್ ಇಂಡಸ್ಟ್ರೀಸ್ ಮುಖ್ಯಸ್ಥ ಮುಕೇಶ್ ಅಂಬಾನಿ ಅವರು ವಾರ್ಷಿಕ ₹15 ಕೋಟಿ ಸಂಬಳ ಪಡೆಯುತ್ತಿದ್ದರು. ಕೋವಿಡ್ ಸಾಂಕ್ರಾಮಿಕದ ವೇಳೆ ಸ್ವಯಂಪ್ರೇರಣೆಯಿಂದ ಕಂಪನಿಗೆ ಬಿಟ್ಟು ಕೊಟ್ಟಿದ್ದರು. ಇಲ್ಲಿಯವರೆಗೂ ಅವರು ಸಂಬಳ ಪಡೆದಿಲ್ಲ ಎಂದು ಹೇಳಲಾಗಿದೆ.

ದೂರಸಂಪರ್ಕ ಕ್ಷೇತ್ರದ ದಿಗ್ಗಜ ಸುನಿಲ್ ಭಾರ್ತಿ ಮಿತ್ತಲ್ (₹16.7 ಕೋಟಿ), ಬಜಾಜ್ ಆಟೊದ ರಾಜೀವ್ ಬಜಾಜ್ (₹53.7 ಕೋಟಿ), ಹೀರೊ ಮೋಟೊಕಾರ್ಪ್‌ನ ಪವನ್ ಮುಂಜಾಲ್ (₹80 ಕೋಟಿ), ಎಲ್ ಆ್ಯಂಡ್ ಟಿ ಮುಖ್ಯಸ್ಥ ಎಸ್.ಎಸ್. ಸುಬ್ರಮಣ್ಯನ್, ಇನ್ಫೊಸಿಸ್ ಸಿಇಒ ಸಲೀಲ್ ಪರೇಖ್ ಅವರಿಗಿಂತಲೂ ಗೌತಮ್ ಅದಾನಿ ಸಂಬಳ ಕಡಿಮೆಯಿದೆ.

3 ಕಂಪನಿ ಎಂ-ಕ್ಯಾಪ್: ₹1 ಲಕ್ಷ ಕೋಟಿ ಸೇರ್ಪಡೆ

ನವದೆಹಲಿ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳ ಏರಿಕೆಯಿಂದಾಗಿ ಪ್ರಮುಖ 10 ಕಂಪನಿಗಳ ಪೈಕಿ 3 ಕಂಪನಿಗಳ ಸಂಯೋಜಿತ ಮಾರುಕಟ್ಟೆ ಮೌಲ್ಯಕ್ಕೆ (ಎಂ-ಕ್ಯಾಪ್) ₹1.06 ಲಕ್ಷ ಕೋಟಿ ಸೇರ್ಪಡೆಯಾಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ಎಂ-ಕ್ಯಾಪ್‌ಗೆ ₹52,091 ಕೋಟಿ ಸೇರ್ಪಡೆಯಾಗಿದ್ದು, ಬ್ಯಾಂಕ್‌ನ ಒಟ್ಟು ಮಾರುಕಟ್ಟೆ ಮೌಲ್ಯ ₹12.67 ಲಕ್ಷ ಕೋಟಿಗೆ ಮುಟ್ಟಿದೆ. ಐಸಿಐಸಿಐ ಬ್ಯಾಂಕ್ ₹36,118 ಕೋಟಿ ಮತ್ತು ಇನ್ಫೊಸಿಸ್ ₹17,915 ಕೋಟಿ ಎಂ-ಕ್ಯಾಪ್ ಗಳಿಸಿವೆ.

ಇಳಿಕೆ: ರಿಲಯನ್ಸ್ ಇಂಡಸ್ಟ್ರೀಸ್ ₹32,271 ಕೋಟಿ, ಎಲ್‌ಐಸಿ ₹27,260 ಕೋಟಿ, ಐಟಿಸಿ ₹14,357 ಕೋಟಿ, ಹಿಂದುಸ್ತಾನ್ ಯೂನಿಲಿವರ್ ₹8,904 ಕೋಟಿ, ಟಿಸಿಎಸ್ ₹8,321 ಕೋಟಿ, ಭಾರ್ತಿ ಏರ್‌ಟೆಲ್ ₹7,261 ಕೋಟಿ ಮತ್ತು ಎಸ್‌ಬಿಐ ಮಾರುಕಟ್ಟೆ ಮೌಲ್ಯ ₹3,391 ಕೋಟಿ ಇಳಿಕೆಯಾಗಿದೆ.

‘ಸೆಕ್ಷನ್ 45’: ಪಾಲಿಸಿದಾರರ ಆಪ್ತ ರಕ್ಷಕ



ಹಣಕಾಸು ಸಾಕ್ಷರತೆ

ರಾಜೇಶ್ ಕುಮಾರ್ ಟಿ.ಆರ್.

ಜೀವ ವಿಮೆ (ಲೈಫ್ ಇನ್ಶೂರೆನ್ಸ್) ಖರೀದಿಸಿದರೆ ನಿಜಕ್ಕೂ ವಿಮಾ ಕಂಪನಿಗಳು ಸಂಕಷ್ಟದ ಕಾಲದಲ್ಲಿ ಕ್ಲೇಮು ನೀಡುತ್ತವೆಯೇ? ನಮ್ಮ ಮರಣದ ನಂತರ ಕುಟುಂಬದ ಒಳಿತಿಗಾಗಿ ಮಾಡಿಸಿರುವ ಇನ್ಶೂರೆನ್ಸ್ ಕವರೇಜ್ ಮೊತ್ತವನ್ನು ಕೊಡದಿದ್ದರೆ ಏನು ಮಾಡೋದು?

ಜೀವ ವಿಮೆ ಪಡೆಯುವ ಪ್ರತಿಯೊಬ್ಬ ವ್ಯಕ್ತಿಗೂ ಇಂತಹ ಪ್ರಶ್ನೆಗಳು ಕಾಡಿರುತ್ತವೆ. ಆದರೆ, ವಿಮಾ ಕಂಪನಿ ಮತ್ತು ಜೀವ ವಿಮೆಯ ಪಾಲಿಸಿದಾರ ಈ ಇಬ್ಬರ ಹಿತಾಸಕ್ತಿ ಕಾಯಲು ಒಂದು ನಿಯಮವಿದೆ. ಅದೇ 1938ರ ವಿಮಾ ಕಾಯ್ದೆಯ ಸೆಕ್ಷನ್ 45. ಏನಿದು ಕಾಯ್ದೆ? ಇದು ಹೇಗೆ ಉಪಯುಕ್ತವಾಗಿದೆ? ಬನ್ನಿ ವಿವರವಾಗಿ ತಿಳಿಯೋಣ.

ಏನಿದು ಸೆಕ್ಷನ್ 45?: ವಿಮಾ ಬಾಂಡ್‌ನ ಪ್ರತಿ ಅಥವಾ ಕೈಪಿಡಿಯನ್ನು ಕೊನೆಯ ತನಕ ಓದಿದರೆ ವಿಮಾ ಕಾಯ್ದೆಯ ಸೆಕ್ಷನ್ 45ರ ಬಗ್ಗೆ ಅಲ್ಲಿ ಸಾಕಷ್ಟು ವಿವರ ಇರುತ್ತದೆ. ಜೀವ ವಿಮೆ ಪಾಲಿಸಿ ಪಡೆಯುವ ಪ್ರತಿಯೊಬ್ಬ ವ್ಯಕ್ತಿಯೂ ತಿಳಿದುಕೊಳ್ಳಬೇಕಾದ ಅತಿಮುಖ್ಯವಾದ ಮಾಹಿತಿ ಅದು. ಹೌದು. ಈ ಸೆಕ್ಷನ್ ವಿಮೆ ತೆಗೆದುಕೊಂಡಿರುವ ವ್ಯಕ್ತಿಗೆ ಕ್ಲೇಮು ಬಗ್ಗೆ ಖಾತರಿ ಒದಗಿಸಿಕೊಡುತ್ತದೆ.

ಸೆಕ್ಷನ್ 45ರ ಪ್ರಕಾರ ಪಾಲಿಸಿ ಪಡೆದ ದಿನದಿಂದ ಮೂರು ವರ್ಷಗಳ ಬಳಿಕ ವಿಮಾ ಕಂಪನಿಯು ಯಾವುದೇ ಕಾರಣ ನೀಡಿ ಇನ್ಶೂರೆನ್ಸ್ ಕ್ಲೇಮು ನಿರಾಕರಿಸುವಂತಿಲ್ಲ. ಪಾಲಿಸಿಯ ಮೂರು ವರ್ಷಗಳ ಪ್ರೀಮಿಯಂ ಕಟ್ಟಿದ್ದರೆ ಇನ್ಶೂರೆನ್ಸ್ ಕ್ಲೇಮು ಕೊಡಲೇಬೇಕು. ಒಂದೊಮ್ಮೆ ವಂಚನೆ/ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿದ್ದರೆ ಮಾತ್ರ ಕ್ಲೇಮು ನಿರಾಕರಿಸಬಹುದು.

3 ವರ್ಷಗಳ ಒಳಗೆ ಪ್ರಶ್ನಿಸಬಹುದು: ಇನ್ಶೂರೆನ್ಸ್ ಪಡೆದಿರುವ ವ್ಯಕ್ತಿ ವಂಚನೆ ಉದ್ದೇಶಕ್ಕಾಗಿಯೇ ಅದನ್ನು ಪಡೆದಿದ್ದಾನೆ. ಇನ್ಶೂರೆನ್ಸ್ ಹಣ ಪಡೆಯಲು ಸುಳ್ಳು ಮಾಹಿತಿ ಒದಗಿಸಿದ್ದಾನೆ. ಸಾಹಸ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದರೂ ಅದರ ಮಾಹಿತಿ ಮರೆಮಾಚಿದ್ದಾನೆ. ವಯಸ್ಸಿನ ಮಾಹಿತಿಯನ್ನು ತಪ್ಪಾಗಿ ನೀಡಿದ್ದಾನೆ. ಮದ್ಯಪಾನ- ಧೂಮಪಾನದ ಮಾಹಿತಿ ಮುಚ್ಚಿಟ್ಟಿದ್ದಾನೆ. ಅನಾರೋಗ್ಯದ ಬಗ್ಗೆ ಮಾಹಿತಿ ಒದಗಿಸಿಲ್ಲ- ಹೀಗೆ ವಿಮಾ ಕಂಪನಿಗೆ ಯಾವುದೇ ಅನುಮಾನ ಬಂದರೆ ಮೂರು ವರ್ಷದ ಒಳಗೆ ಅದನ್ನು ಕಾನೂನಾತ್ಮಕವಾಗಿ ಪ್ರಶ್ನೆ ಮಾಡಬಹುದು.

ಆದರೆ, ಪಾಲಿಸಿ ಪಡೆದಿರುವ ವ್ಯಕ್ತಿ/ಆತನ ಸಂಬಂಧಿಗಳು ಆ ಪ್ರಶ್ನೆಗಳಿಗೆ ಸೂಕ್ತ ದಾಖಲೆಗಳೊಂದಿಗೆ ಉತ್ತರ ನೀಡಿದರೆ, ಉದ್ದೇಶಪೂರ್ವಕವಾಗಿ ತಪ್ಪು ಮಾಹಿತಿ ನೀಡಿಲ್ಲ ಎನ್ನುವುದನ್ನು ನಿರೂಪಿಸಿದರೆ ಕಂಪನಿಯು ನಿರ್ದಿಷ್ಟ ವ್ಯಕ್ತಿಯ ಪಾಲಿಸಿಯನ್ನು ರದ್ದು ಮಾಡುತ್ತೇವೆ ಅಥವಾ ಕ್ಲೇಮು ಕೊಡುವುದಿಲ್ಲ ಎಂದು ಹೇಳುವಂತಿಲ್ಲ.

ತಪ್ಪು ಸಾಬೀತಾದರೆ ಪಾಲಿಸಿ ರದ್ದು: ಇನ್ಶೂರೆನ್ಸ್ ಪಾಲಿಸಿ ಪಡೆಯಲು ವ್ಯಕ್ತಿ ತಪ್ಪು ಮಾಹಿತಿ ಒದಗಿಸಿದ್ದಾನೆ. ಜೀವ ವಿಮೆ ಅರ್ಜಿಯಲ್ಲಿ ಮಾಹಿತಿ ಮರೆಮಾಚಿದ್ದಾನೆ ಎನ್ನುವುದು ಮೂರು ವರ್ಷದ ಒಳಗೆ ಕಂಡುಬಂದರೆ ಕಂಪನಿಯು ಪಾಲಿಸಿದಾರನಿಗೆ/ ಸಂಬಂಧಿಗಳಿಗೆ ಈವರೆಗೆ ಕಟ್ಟಿರುವ ವಿಮಾ ಪ್ರೀಮಿಯಂ ಮೊತ್ತವನ್ನು 90 ದಿನಗಳ ಒಳಗೆ ಹಿಂದಿರುಗಿಸಿ ಪಾಲಿಸಿಯನ್ನು ರದ್ದುಪಡಿಸಬಹುದು.

ನೆನಪಿಡಿ: ಇನ್ಶೂರೆನ್ಸ್ ಎನ್ನುವುದು ನಂಬಿಕೆಯ ತಳಹದಿ ಮೇಲೆ ನಿಂತಿರುತ್ತದೆ. ಇನ್ಶೂರೆನ್ಸ್ ಮಾಡಿಸುವಾಗ ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡಿ. ಪ್ರೀಮಿಯಂ ತಗ್ಗಿಸುವ ಸಲುವಾಗಿ ಸುಳ್ಳು ಮಾಹಿತಿ ನೀಡಬೇಡಿ. ಸುಳ್ಳು ವಿವರ ಒದಗಿಸಿದರೆ ನಿಮಗೆ ಇನ್ಶೂರೆನ್ಸ್ ಪಾಲಿಸಿ, ಕ್ಲೇಮು ಸಿಗದಂತಾಗಬಹುದು. ನೀವು ಯಾವುದೇ ತಪ್ಪು ಮಾಹಿತಿ ನೀಡಿಲ್ಲ. ಆದರೂ, ನಿಮಗೆ ಇನ್ಶೂರೆನ್ಸ್ ಕಂಪನಿ ಪಾಲಿಸಿ ಕ್ಲೇಮು ಕೊಡುತ್ತಿಲ್ಲ ಎಂದರೆ ವಿಮಾ ಕಾಯ್ದೆಯ ಸೆಕ್ಷನ್ 45 ನಿಮ್ಮ ನೆರವಿಗೆ ಬರಲಿದೆ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಮೂರು ವಾರದಿಂದ ಷೇರುಪೇಟೆ ಜಿಗಿತ



ಸತತ ಮೂರು ವಾರಗಳಿಂದ ಷೇರುಪೇಟೆ ಸೂಚ್ಯಂಕಗಳು ಗಳಿಕೆಯ ಹಾದಿಯಲ್ಲಿವೆ.

ಜೂನ್ 21ಕ್ಕೆ ಕೊನೆಗೊಂಡ ವಾರದಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಅಲ್ಪ ಪ್ರಮಾಣದ ಗಳಿಕೆ ದಾಖಲಿಸಿವೆ. 77,209 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.28ರಷ್ಟು ಗಳಿಸಿಕೊಂಡಿದೆ. 23,501 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.15ರಷ್ಟು ಜಿಗಿದಿದೆ.

ಜೂನ್ 21ರ ವಹಿವಾಟಿನಲ್ಲಿ ಹೂಡಿಕೆದಾರರು ಒಂದಷ್ಟು ಲಾಭ ಗಳಿಕೆಗೆ ಮುಂದಾದರೂ ವಾರದ ಗಳಿಕೆಗೆ ಹಿನ್ನಡೆಯಾಗಲಿಲ್ಲ. ವಲಯವಾರು ಪ್ರಗತಿಯಲ್ಲಿ ಹಲವು ವಲಯಗಳ ಸೂಚ್ಯಂಕಗಳು ಕುಸಿತ ದಾಖಲಿಸಿವೆ.

ನಿಫ್ಟಿ ವಾಹನ ಮತ್ತು ಎಫ್‌ಎಂಸಿಜಿ ಗರಿಷ್ಠ ಕುಸಿತ ಕಂಡಿವೆ. ನಿಫ್ಟಿ ವಾಹನ ಸೂಚ್ಯಂಕ ಶೇ 2.61, ಎಫ್‌ಎಂಸಿಜಿ ಶೇ 2.14, ಫಾರ್ಮಾ ಶೇ 1.97, ಅನಿಲ ಮತ್ತು ತೈಲ ಶೇ 1.88, ಎನರ್ಜಿ ಶೇ 1.44, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 1.12 ಮತ್ತು ಮಾಧ್ಯಮ ಸೂಚ್ಯಂಕ ಶೇ 0.99ರಷ್ಟು ಇಳಿಕೆಯಾಗಿದೆ. ನಿಫ್ಟಿ ಬ್ಯಾಂಕ್ ಶೇ 3.11, ಫೈನಾನ್ಸ್ ಶೇ 2.38, ಮಾಹಿತಿ ತಂತ್ರಜ್ಞಾನ ಶೇ 1.42 ಮತ್ತು ನಿಫ್ಟಿ ಮೆಟಲ್ ಶೇ 0.7ರಷ್ಟು ಗಳಿಸಿಕೊಂಡಿವೆ.

ಇಳಿಕೆ-ಗಳಿಕೆ: ನಿಫ್ಟಿಯಲ್ಲಿ ಹೀರೊ ಮೋಟೊಕಾರ್ಪ್ ಶೇ 6.18, ಮಾರುತಿ ಸುಜುಕಿ ಶೇ 5.31, ಅಲ್ಟ್ರಾಟೆಕ್ ಸಿಮೆಂಟ್ ಶೇ 5.12, ಎಲ್ ಆ್ಯಂಡ್ ಟಿ ಶೇ 4.17, ಬಜಾಜ್ ಆಟೊ ಶೇ 3.86, ಟೈಟನ್ ಶೇ 3.53, ಸನ್ ಫಾರ್ಮಾ ಶೇ 3.38 ಮತ್ತು ಟಾಟಾ ಮೋಟರ್ಸ್ ಶೇ 3.26ರಷ್ಟು ಕುಸಿದಿವೆ. ಐಸಿಐಸಿಐ ಬ್ಯಾಂಕ್ ಶೇ 4.61, ಎಕ್ಸಿಸ್ ಬ್ಯಾಂಕ್ ಶೇ 4.37, ಎಚ್‌ಡಿಎಫ್‌ಸಿ ಬ್ಯಾಂಕ್ ಶೇ 4.25, ಅದಾನಿ ಪೋರ್ಟ್ಸ್ ಶೇ 3.87, ಶ್ರೀರಾಮ್ ಫೈನಾನ್ಸ್ ಶೇ 3.49, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 3.29, ಇನ್ಫೊಸಿಸ್ ಶೇ 2.9 ಮತ್ತು ವಿಪ್ರೊ ಶೇ 2.77ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಮುಂಗಾರು ಮಂದಗತಿಯಲ್ಲಿ ಸಾಗಿರುವುದು ಷೇರುಪೇಟೆ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಜಿಎಸ್‌ಟಿ ಸಮಿತಿಯ ನಿರ್ಣಯಗಳು ಸಹ ವಿವಿಧ ವಲಯದ ಷೇರುಗಳ ಏರಿಳಿತಕ್ಕೆ ಕಾರಣವಾಗುವ ನಿರೀಕ್ಷೆಯಿದೆ. ಉಳಿದಂತೆ ಮುಂಬರುವ ತ್ರೈಮಾಸಿಕ ಫಲಿತಾಂಶಗಳು, ಬಜೆಟ್ ಮಂಡನೆ ಮೇಲೆ ಹೂಡಿಕೆದಾರರು ದೃಷ್ಟಿ ನೆಟ್ಟಿದ್ದಾರೆ.

ಎಫ್‌ಪಿಐ ಒಳಹರಿವು ಏರಿಕೆ


ನವದೆಹಲಿ (ಪಿಟಿಐ): ಲೋಕಸಭಾ ಚುನಾವಣಾ ಫಲಿತಾಂಶದ ಬಳಿಕ ದೇಶದ ಷೇರುಪೇಟೆಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆ ಪ್ರಮಾಣವು ಏರುಗತಿಯಲ್ಲಿದೆ.

ಕೇಂದ್ರದಲ್ಲಿ ಎನ್‌ಡಿಎ ಮೈತ್ರಿಕೂಟದ ಸರ್ಕಾರವು ಹಣಕಾಸು ನೀತಿಗಳ ಸುಧಾರಣೆ ಮತ್ತು ಆರ್ಥಿಕತೆ ಬೆಳವಣಿಗೆಗೆ ಒತ್ತು ನೀಡಲಿದೆ ಎಂಬ ಭರವಸೆಯು ಹೂಡಿಕೆದಾರರಲ್ಲಿ ಮೂಡಿರುವುದೇ ಇದಕ್ಕೆ ಕಾರಣ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಜೂನ್ ಆರಂಭದಿಂದ 21ರ ವರೆಗೆ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ದೇಶೀಯ ಷೇರುಪೇಟೆಗಳಲ್ಲಿ ₹12,170 ಕೋಟಿ ಹೂಡಿಕೆ ಮಾಡಿದ್ದು, ಈ ಪೈಕಿ ₹11,194 ಕೋಟಿ ಹಿಂಪಡೆದಿದ್ದಾರೆ. ಆದರೆ, ಇದೇ ಅವಧಿಯಲ್ಲಿ ಸಾಲಪತ್ರ ಮಾರುಕಟ್ಟೆಯಲ್ಲಿ ₹10,575 ಕೋಟಿ ಹೂಡಿಕೆ ಮಾಡಿದ್ದಾರೆ ಎಂದು ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್‌ನ (ಎನ್‌ಎಸ್‌ಡಿಎಲ್) ಅಂಕಿ ಅಂಶ ತಿಳಿಸಿವೆ.

‘ಚೀನಾದಲ್ಲಿ ಕಳೆದ ಎರಡು ತಿಂಗಳಿನಿಂದ ತಾಮ್ರದ ಬೆಲೆಯು ಕುಸಿತ ಕಂಡಿದೆ. ಇದು ಅಲ್ಲಿನ ಷೇರು ಮಾರುಕಟ್ಟೆಗಳ ಮೇಲೆ ಪರಿಣಾಮ ಬೀರಿದೆ. ಆರ್ಥಿಕತೆ ಬೆಳವಣಿಗೆಯೂ ಮಂದಗತಿಯಲ್ಲಿದೆ. ಮತ್ತೊಂದೆಡೆ ದೇಶೀಯ ಮಾರುಕಟ್ಟೆಯಲ್ಲಿ ಷೇರುಗಳ ಖರೀದಿ ಸಂಖ್ಯೆಯಲ್ಲಿ ಏರಿಕೆಯಾಗಿದೆ. ಇದರಿಂದ ವಿದೇಶಿ ಒಳಹರಿವು ಹೆಚ್ಚಳವಾಗಿದೆ’ ಎಂದು ಮೋಜೊ ಪಿಎಂಎಸ್‌ನ ಮುಖ್ಯ ಹೂಡಿಕೆ ತಜ್ಞ ಸುನಿಲ್ ದಮಾನಿಯಾ ತಿಳಿಸಿದ್ದಾರೆ.

ಚಿರಸ್ಮರಣೆ



ಶ್ರೀ ಡಾ|| ಹೆಚ್.ಚೌಡಯ್ಯನವರು

ಮರಣ: 24-06-2021

ಸದಾ ಸ್ಮರಿಸುವ:
ಪತ್ನಿ ಮತ್ತು ಕುಟುಂಬ ವರ್ಗದವರು

ವೈಕುಂಠ ಸಮಾರಾಧನೆ



ಶ್ರೀಮತಿ ಗೌರಮ್ಮನವರು

(ಲೇಟ್ ಶ್ರೀ ವೈ.ಎಚ್. ರಾಮಕೃಷ್ಣಪ್ಪ, ಮಾಜಿ ಪುರಸಭೆ ಅಧ್ಯಕ್ಷರು, ಇವರ ಧರ್ಮಪತ್ನಿ)
ಸುರಭಿ ಲೇಔಟ್, ಯಲಹಂಕ, ಬೆಂ-64

ಇವರು ದಿನಾಂಕ.14.6.2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾದ ಪುಣ್ಯಾಹ ಮತ್ತು ವೈಕುಂಠ ಸಮಾರಾಧನೆಯನ್ನು ತಾ:24.6.2024ರಂದು ಸೋಮವಾರ ಬೆಳಗ್ಗೆ 9.30ರಿಂದ ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಶ್ರೀಧರ್.ವೈ.ಆರ್., ಲಕ್ಷ್ಮಣ ಗೌಡ.ಆರ್, ಮಕ್ಕಳು, ಅಳಿಯಂದಿರು ಹಾಗೂ ಸಾತನೂರು ಕುಟುಂಬದವರು.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹260-488
ದ್ವಿತಳಿ (ಬಿ.ವಿ)	₹375-603

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹560
12 ಕ್ಕೆ	₹75
ಮೈಸೂರು	
100ಕ್ಕೆ	₹565

ಬಿಒಬಿ: 1,500 ತಾಂತ್ರಿಕ ಪರಿಣತರ ನೇಮಕ

ಮುಂಬೈ (ಪಿಟಿಐ): ಮುಂದಿನ ಎರಡು ವರ್ಷಗಳಲ್ಲಿ ಬ್ಯಾಂಕ್‌ನ ತಾಂತ್ರಿಕ ಪರಿಣತ ನೌಕರರ ಸಂಖ್ಯೆಯನ್ನು ದುಪ್ಪಟ್ಟುಗೊಳಿಸಲು ನಿರ್ಧರಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ (ಬಿಒಬಿ) ತಿಳಿಸಿದೆ.

‘ಪ್ರಸ್ತುತ ಬ್ಯಾಂಕ್‌ನಲ್ಲಿ 1,500 ತಾಂತ್ರಿಕ ನೌಕರರು ಇದ್ದಾರೆ. ಹೊಸದಾಗಿ ಇಷ್ಟೇ ಸಂಖ್ಯೆಯ ನೌಕರರ ನೇಮಕಕ್ಕೆ ತೀರ್ಮಾನಿಸಲಾಗಿದ್ದು, ಮಾಹಿತಿ ತಂತ್ರಜ್ಞಾನ ತಂಡದ ಸಿಬ್ಬಂದಿ ಸಂಖ್ಯೆಯನ್ನು ಮೂರು ಸಾವಿರಕ್ಕೆ ಏರಿಸಲಾಗುವುದು’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ದೇಬದತ್ತ ಚಂದ್ ತಿಳಿಸಿದ್ದಾರೆ.

ಬ್ಯಾಂಕ್‌ಗಳಲ್ಲಿ ಮಾಹಿತಿ ತಂತ್ರಜ್ಞಾನ ಪರಿಣತರ ತಂಡದ ಕೊರತೆಯಿದೆ. ಇದರಿಂದಾಗಿ ವಹಿವಾಟಿನ ಕಾರ್ಯ ನಿರ್ವಹಣೆಗೆ ತೊಡಕಾಗುತ್ತಿದೆ. ಹಾಗಾಗಿ, ಐ.ಟಿ ತಂಡವನ್ನು ಸದೃಢಗೊಳಿಸಲು ಮುಂದಾಗಬೇಕು ಎಂದು ಇತ್ತೀಚೆಗೆ ಭಾರತೀಯ ರಿಸರ್ವ್ ಬ್ಯಾಂಕ್ ಎಲ್ಲಾ ಬ್ಯಾಂಕ್‌ಗಳಿಗೆ ಸೂಚಿಸಿದೆ.

ಹಾಗಾಗಿ, ಬ್ಯಾಂಕ್‌ಗಳು ಎಂಜಿನಿಯರಿಂಗ್ ಪದವೀಧರರ ನೇಮಕಕ್ಕೆ ಮುಂದಾಗಿವೆ ಎಂದು ಹೇಳಲಾಗಿದೆ.

‘ಬ್ಯಾಂಕ್‌ನಲ್ಲಿ ಸದ್ಯ ತಾಂತ್ರಿಕ ಕೆಲಸಗಳ ನಿರ್ವಹಣೆಗೆ ಗುತ್ತಿಗೆ ಆಧಾರದ ಮೇಲೆ ಪರಿಣತರನ್ನು ನೇಮಿಸಿಕೊಳ್ಳಲಾಗಿದೆ’ ಎಂದು ಚಂದ್ ತಿಳಿಸಿದ್ದಾರೆ. ಅಲ್ಲದೆ, ಜನರೇಟಿವ್ ಕೃತಕ ಬುದ್ಧಿಮತ್ತೆ ಸೇವೆ ಬಳಕೆಗೆ ಒತ್ತು ನೀಡಲಾಗುವುದು. ಬ್ಯಾಂಕ್ ಮತ್ತು ಗ್ರಾಹಕರ ನಡುವಿನ ಸಂವಾದಾತ್ಮಕ ಸೇವೆ ಒದಗಿಸುವಲ್ಲಿ ಇದು ನೆರವಾಗಲಿದೆ. ತಂತ್ರಜ್ಞಾನ ಮೂಲ ಸೌಕರ್ಯದ ಅಭಿವೃದ್ಧಿಗೆ ಬ್ಯಾಂಕ್ ₹2 ಸಾವಿರ ಕೋಟಿ ವೆಚ್ಚ ಮಾಡಲಿದೆ ಎಂದು ತಿಳಿಸಿದ್ದಾರೆ.

400 ಹೊಸ ಶಾಖೆ ಸ್ಥಾಪನೆ

ಹೂಡಿಕೆ ಉತ್ತೇಜನಕ್ಕೆ ಸಹಕಾರಿ: ಎಸ್‌ಬಿಐ ಅಧ್ಯಕ್ಷ ಖಾರಾ

ನವದೆಹಲಿ (ಪಿಟಿಐ): ದೇಶದಾದ್ಯಂತ ಬ್ಯಾಂಕ್‌ನ ನೆಟ್‌ವರ್ಕ್ ವಿಸ್ತರಿಸುವ ಭಾಗವಾಗಿ ಪ್ರಸಕ್ತ ಹಣಕಾಸು ವರ್ಷದಲ್ಲಿ ಹೊಸದಾಗಿ 400 ಶಾಖೆಗಳನ್ನು ತೆರೆಯಲು ಸರ್ಕಾರಿ ಸ್ವಾಮ್ಯದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ನಿರ್ಧರಿಸಿದೆ.

ಕಳೆದ ಆರ್ಥಿಕ ವರ್ಷದಲ್ಲಿ 137 ಹೊಸ ಶಾಖೆಗಳನ್ನು ತೆರೆದಿತ್ತು. ಈ ಪೈಕಿ 59 ಶಾಖೆಗಳನ್ನು ಗ್ರಾಮೀಣ ಭಾಗದಲ್ಲಿ ತೆರೆದು, ಗ್ರಾಹಕರಿಗೆ ಅನುಕೂಲ ಕಲ್ಪಿಸಿತ್ತು.

‘ಬ್ಯಾಂಕ್‌ನ ಶೇ 89ರಷ್ಟು ವಹಿವಾಟು ಡಿಜಿಟಲ್ ರೂಪದಲ್ಲಿ ನಡೆಯುತ್ತಿದೆ. ಶೇ 98ರಷ್ಟು ವಹಿವಾಟು ಬ್ಯಾಂಕ್‌ನ ಹೊರಭಾಗದಲ್ಲಿ ನಡೆಯುತ್ತಿದೆ. ಇಂತಹ ಸ್ಥಿತಿಯಲ್ಲಿ ಹೊಸ ಶಾಖೆಗಳ ಅಗತ್ಯವಿದೆಯೇ ಎಂದು ಕೆಲವರು ನನಗೆ ಪ್ರಶ್ನೆ ಮುಂದಿಡುತ್ತಾರೆ. ಇದಕ್ಕೆ ನಾನು ‘ಹೌದು’ ಎಂದು ಉತ್ತರಿಸುತ್ತೇನೆ. ಹೊಸ ಪ್ರದೇಶಗಳಲ್ಲಿ ಬ್ಯಾಂಕ್ ಶಾಖೆಗಳ ಅಗತ್ಯ ಹೆಚ್ಚಿರುತ್ತದೆ’ ಎಂದು ಬ್ಯಾಂಕ್‌ನ ಅಧ್ಯಕ್ಷ ದಿನೇಶ್ ಖಾರಾ ತಿಳಿಸಿದ್ದಾರೆ.

ಗ್ರಾಹಕರಿಗೆ ಬ್ಯಾಂಕಿಂಗ್ ವ್ಯವಸ್ಥೆ ಕುರಿತ ಸಲಹೆ ಹಾಗೂ ಅವರ ಹೂಡಿಕೆಯ ಅಗತ್ಯತೆ ಪೂರೈಸಲು ಶಾಖೆಗಳಿಂದ ಮಾತ್ರ ಸಾಧ್ಯ. ಶಾಖೆ ತೆರೆಯಲು ಅವಕಾಶವಿರುವ ಪ್ರದೇಶಗಳನ್ನು ಗುರುತಿಸಲಾಗುತ್ತಿದೆ. ಪರಿಶೀಲನೆ ಪೂರ್ಣಗೊಂಡ ಬಳಿಕ ಹೊಸ ಶಾಖೆಗಳು ಕಾರ್ಯಾರಂಭ ಮಾಡಲಿವೆ’ ಎಂದು ತಿಳಿಸಿದ್ದಾರೆ.

ಪ್ರಸಕ್ತ ವರ್ಷದ ಮಾರ್ಚ್ ಅಂತ್ಯಕ್ಕೆ ದೇಶದಾದ್ಯಂತ ಎಸ್‌ಬಿಐ ಒಟ್ಟು 22,542 ಶಾಖೆಗಳನ್ನು ಹೊಂದಿದೆ.

ಕೆನರಾ ಬ್ಯಾಂಕ್ ‘ಎಕ್ಸ್’ ಖಾತೆ ಹ್ಯಾಕ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್‌ನ ಅಧಿಕೃತ ‘ಎಕ್ಸ್’ (ಹಿಂದಿನ ಟ್ವಿಟರ್) ಖಾತೆಯು ಭಾನುವಾರ ಹ್ಯಾಕ್ ಆಗಿದೆ.

ಬ್ಯಾಂಕ್‌ನ ತಾಂತ್ರಿಕ ಪರಿಣತರ ತಂಡದಿಂದ ಈ ಕುರಿತು ಪರಿಶೀಲನೆ ನಡೆಯುತ್ತಿದೆ. ಮರು ಸ್ಥಾಪಿಸುವ ವರೆಗೂ ಗ್ರಾಹಕರು ಬ್ಯಾಂಕ್‌ನ ‘ಎಕ್ಸ್’ ಪೇಜ್ ಮೇಲೆ ಯಾವುದೇ ಪೋಸ್ಟ್ ಮಾಡಬಾರದು ಎಂದು ಕೋರಿದೆ.

ಖಾತೆಯು ಹ್ಯಾಕ್ ಆಗಿರುವ ಬಗ್ಗೆ ಬ್ಯಾಂಕ್‌ನ ಎಲ್ಲಾ ಸಿಬ್ಬಂದಿಗೆ ತಿಳಿಸಲಾಗಿದೆ. ಈ ಕುರಿತ ತನಿಖೆ ಪ್ರಗತಿಯಲ್ಲಿದೆ. ‘ಎಕ್ಸ್’ನ ತಾಂತ್ರಿಕ ತಂಡದೊಂದಿಗೂ ಸಂಪರ್ಕ ಸಾಧಿಸಿದ್ದು, ಮರಳಿ ಪಡೆಯುವ ಪ್ರಯತ್ನ ನಡೆದಿದೆ ಎಂದು ತಿಳಿಸಿದೆ.

ಗ್ರಾಹಕರಿಗೆ ಆಗಿರುವ ತೊಂದರೆಗೆ ವಿಷಾದ ವ್ಯಕ್ತಪಡಿಸಿದೆ.

ಖಾತೆಯು ಮರು ಸ್ಥಾಪನೆಗೊಂಡು ಬ್ಯಾಂಕ್‌ಗೆ ಅಧಿಕೃತವಾಗಿ ಬಳಕೆಗೆ ಲಭಿಸಿದ ನಂತರ ಗ್ರಾಹಕರಿಗೆ ಮಾಹಿತಿ ನೀಡಲಾಗುವುದು ಎಂದು ತಿಳಿಸಿದೆ.

ಗ್ರಾಹಕರು ಹತ್ತಿರದ ಬ್ಯಾಂಕ್‌ನ ಶಾಖೆ ಅಥವಾ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ ಹೆಚ್ಚಿನ ಮಾಹಿತಿ ಮತ್ತು ಸೇವೆಯನ್ನು ಪಡೆಯಬಹುದಾಗಿದೆ ಎಂದು ಹೇಳಿದೆ.

ಸರಕು ಸಾಗಣೆ ಹಡಗು ಗುರಿಯಾಗಿಸಿ ಡ್ರೋನ್ ದಾಳಿ

ದುಬೈ (ಎ.ಪಿ): ಯೆಮನ್‌ನ ಹೂಥಿ ಬಂಡುಕೋರರು ಉಡಾವಣೆ ಮಾಡಿದ್ದರು ಎನ್ನಲಾದ ಡ್ರೋನ್, ಕೆಂಪುಸಮುದ್ರದಲ್ಲಿ ಹಡಗೊಂದಕ್ಕೆ ಡಿಕ್ಕಿ ಹೊಡೆದಿದ್ದು, ಜಖಂಗೊಳಿಸಿದೆ. ಹಡಗುಗಳನ್ನು ಗುರಿಯಾಗಿಸಿ ನಡೆದ ಡ್ರೋನ್ ದಾಳಿಯ ಮತ್ತೊಂದು ಪ್ರಕರಣ ಇದಾಗಿದೆ.

ಅಮೆರಿಕವು ಇಲ್ಲಿ ನಿಯೋಜಿಸಿದ್ದ ಯುಎಸ್‌ಎಸ್ ಡ್ವೈಟ್ ಡಿ ಐಸೆನ್‌ಹೊವೆರ್ ತುಕಡಿಯನ್ನು ಸ್ವದೇಶಕ್ಕೆ ಕಳುಹಿಸಿದ್ದ ಹಿಂದೆಯೇ ಈ ದಾಳಿ ಪ್ರಕರಣ ವರದಿಯಾಗಿದೆ. ಚೀನಾದ ಕ್ವಿಂಗ್ಡಾವೊಗೆ ತೆರಳುತ್ತಿದ್ದ ಹಡಗು ಗುರಿಯಾಗಿಸಿ ದಾಳಿ ನಡೆದಿದೆ. ಸದ್ಯ ಹೂಥಿ ದಾಳಿಯ ಹೊಣೆ ಹೊತ್ತುಕೊಂಡಿಲ್ಲ. ತಡವಾಗಿ ಹೊಣೆ ಹೊರಬಹುದು ಎನ್ನಲಾಗಿದೆ.

ನಿರ್ದಿಷ್ಟ ಸರಕು ಸಾಗಣೆ ಹಡಗುಗಳನ್ನು ಗುರಿಯಾಗಿಸಿ ಹೂಥಿ ಬಂಡುಕೋರರು ಇದುವರೆಗೂ 60ಕ್ಕೂ ಹೆಚ್ಚು ದಾಳಿ ನಡೆಸಿದ್ದಾರೆ.

ಏಷ್ಯಾ, ಮಧ್ಯಪ್ರಾಚ್ಯ ಮತ್ತು ಐರೋಪ್ಯ ಮಾರುಕಟ್ಟೆಗಳಿಗೆ ಸಂಪರ್ಕ ಕಲ್ಪಿಸುವ ಈ ನಿರ್ಣಾಯಕ ಮಾರ್ಗದಲ್ಲಿ, ಡ್ರೋನ್ ದಾಳಿ ಪ್ರಕರಣಗಳ ಬಳಿಕ ಹಡಗುಗಳ ಸಂಚಾರ ಕಡಿಮೆ ಆಗಿದೆ. ಇಸ್ರೇಲ್-ಹಮಾಸ್ ನಡುವಿನ ಸಂಘರ್ಷ ನಿಲ್ಲುವವರೆಗೂ ಹಡಗುಗಳನ್ನು ಗುರಿಯಾಗಿಸಿ ದಾಳಿ ನಡೆಸಲಾಗುವುದು ಎಂದು ಹೂಥಿ ಬಂಡುಕೋರರು ತಿಳಿಸಿದ್ದಾರೆ.



ಮೀನು ಖರೀದಿ ಮೀನುಗಳ ಸಂತಾನೋತ್ಪತ್ತಿಗೆ ಅವಕಾಶ ಕಲ್ಪಿಸಲು 61 ದಿನ ದೇಶದ ಪೂರ್ವ ಕರಾವಳಿಯಲ್ಲಿ ಮೀನುಗಾರಿಕೆಗೆ ನಿಷೇಧ ಹೇರಲಾಗಿತ್ತು. ಈ ಅವಧಿ ಮುಗಿದಿದ್ದು, ಚೆನ್ನೈನ ಕಾಸಿಮೇಡು ಬಂದರಿನಲ್ಲಿ ಭಾನುವಾರ ಮೀನು ಖರೀದಿಸಲು ಜನರು ಮುಗಿಬಿದ್ದಿದ್ದರು –ಎಎಫ್‌ಪಿ ಚಿತ್ರ

ಚುನಾವಣಾ ಅಕ್ರಮ: ಆಯುಕ್ತರ ರಾಜೀನಾಮೆಗೆ ಆಗ್ರಹ

ಇಸ್ಲಾಮಾಬಾದ್ (ಪಿಟಿಐ): ಚುನಾವಣಾ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ ಮುಖ್ಯ ಚುನಾವಣಾ ಆಯುಕ್ತ ಸಿಕಂದರ್ ಸುಲ್ತಾನ್ ರಜಾ ತಕ್ಷಣವೇ ರಾಜೀನಾಮೆ ನೀಡಬೇಕು ಎಂಬ ಬೇಡಿಕೆಯನ್ನು ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಪಕ್ಷ ಮುಂದಿರಿಸಿದೆ.

ಮಾಜಿ ಪ್ರಧಾನಿ ಇಮ್ರಾನ್ ಖಾನ್ ನೇತೃತ್ವದ ಪಿಟಿಐ ಪಕ್ಷದ ಮುಖಂಡರು, ರಾಷ್ಟ್ರೀಯ ಅಸೆಂಬ್ಲಿ ಸದಸ್ಯರು ಭಾನುವಾರ, ಸಿಇಸಿ ರಾಜೀನಾಮೆಗೆ ಆಗ್ರಹಪಡಿಸಿ ಸಂಸತ್ ಆವರಣದಿಂದ ಆಯೋಗದ ಕಚೇರಿಯವರೆಗೂ ಪ್ರತಿಭಟನಾ ಜಾಥಾ ನಡೆಸಿದರು.

ಪ್ರತಿಪಕ್ಷದ ನಾಯಕ ಒಮರ್ ಅಯೂಬ್ ನೇತೃತ್ವ ವಹಿಸಿದ್ದರು. ಫೆಬ್ರುವರಿಯಲ್ಲಿ ನಡೆದಿದ್ದ ಸಾರ್ವತ್ರಿಕ ಚುನಾವಣೆಯಲ್ಲಿ ಭಾರಿ ಅಕ್ರಮ ನಡೆದಿದೆ ಎಂದು ವಿಪಕ್ಷಗಳು ಆರೋಪಿಸಿವೆ.

ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವುದು ಆಯೋಗದ ಹೊಣೆಗಾರಿಕೆ. ಆದರೆ, ಆಯೋಗ ಇದರಲ್ಲಿ ವಿಫಲವಾಗಿದೆ ಎಂದು ಪ್ರತಿಭಟನಕಾರರು ಟೀಕಿಸಿದರು ಎಂದು ‘ದ ನ್ಯೂಸ್ ಇಂಟರ್‌ನ್ಯಾಷನಲ್’ ದೈನಿಕ ವರದಿ ಮಾಡಿದೆ.

ಇದೇ ಸಂದರ್ಭದಲ್ಲಿ ಪ್ರತಿಭಟನಕಾರರು, ಬಂಧನದಲ್ಲಿರುವ ಇಮ್ರಾನ್ ಖಾನ್ ಬಿಡುಗಡೆಗೆ ಆಗ್ರಹಪಡಿಸಿ ಘೋಷಣೆ ಕೂಗಿದರು. ಭ್ರಷ್ಟಾಚಾರ ಪ್ರಕರಣದಲ್ಲಿ ಬಂಧಿತರಾಗಿರುವ ಇಮ್ರಾನ್ ಖಾನ್, ಕಳೆದ ವರ್ಷ ಸೆಪ್ಟೆಂಬರ್‌ನಿಂದ ರಾವಲ್ಪಿಂಡಿಯ ಜೈಲಿನಲ್ಲಿ ಇದ್ದಾರೆ.

ಪಿಟಿಐ ಅಧ್ಯಕ್ಷ ಬ್ಯಾರಿಸ್ಟರ್ ಗೋಹರ್ ಖಾನ್ ಅವರು, ‘ವಿರೋಧ ಪಕ್ಷಗಳ ನಾಯಕರಿಗೆ ಕೋರ್ಟ್‌ಗಳ ಬಾಗಿಲು ಮುಚ್ಚಿವೆ. ನಮ್ಮ ಮಹಿಳೆಯರು ಜೈಲಿನಲ್ಲಿ ಇದ್ದಾರೆ. ಇತಿಹಾಸ ಎಂದಿಗೂ ಈ ಸಂಗತಿಗಳನ್ನು ನೆನಪಿನಲ್ಲಿ ಇಡಲಿದೆ’ ಎಂದು ಕಿಡಿಕಾರಿದರು.

ಫೆಬ್ರುವರಿಯಲ್ಲಿ ನಡೆದಿದ್ದ ಚುನಾವಣೆಯಲ್ಲಿ, ಒಟ್ಟು 265 ಸದಸ್ಯ ಬಲದ ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಪಿಟಿಐ 93 ಸ್ಥಾನಗಳನ್ನು ಗೆದ್ದುಕೊಂಡಿತ್ತು.

ಎಸ್‌ಐಸಿ ಮೀಸಲು ಸ್ಥಾನಗಳಿಗೆ ಅರ್ಹತೆ ಪಡೆದಿಲ್ಲ: ಆಯೋಗ

ಇಸ್ಲಾಮಾಬಾದ್ (ಪಿಟಿಐ): ಇಮ್ರಾನ್ ಖಾನ್ ನೇತೃತ್ವದ ಪಿಟಿಐ ಪಕ್ಷದ ಬೆಂಬಲಿತ ಸುನ್ನಿ ಇತ್ತೆಹಾದ್ ಕೌನ್ಸಿಲ್, ಮೀಸಲು ಸ್ಥಾನಗಳಿಗೆ ಅರ್ಹವಲ್ಲ ಎಂದು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಹೇಳಿಕೆ ಸಲ್ಲಿಸಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಪಕ್ಷವು ಮುಸ್ಲಿಮೇತರರು ಮಂಡಳಿಯ ಭಾಗವಾಗಲು ಅವಕಾಶ ನೀಡದಿರುವುದು ಇದಕ್ಕೆ ಕಾರಣ ಎಂದು ಆಯೋಗ ತಿಳಿಸಿದೆ.

ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಮಹಿಳಾ ಮತ್ತು ಅಲ್ಪಸಂಖ್ಯಾತರಿಗೆ ಮೀಸಲಾದ ಸ್ಥಾನಗಳಿಗೆ ಸ್ಪರ್ಧಿಸುವುದನ್ನು ತಿರಸ್ಕರಿಸಿದ್ದ ಆಯೋಗದ ಕ್ರಮ ಪ್ರಶ್ನಿಸಿ ಸುನ್ನಿ ಇತ್ತೆಹಾದ್ ಕೌನ್ಸಿಲ್ ಸಲ್ಲಿಸಿದ್ದ ಅರ್ಜಿಗೆ ಈ ಪ್ರತಿಕ್ರಿಯೆ ದಾಖಲಿಸಿದೆ.

ಐತಿಹಾಸಿಕ ಜಯ ಸಾಧಿಸಿದ ರಶೀದ್ ಖಾನ್ ಪಡೆ • ಗುಲ್ಬದೀನ್ ನೈಬ್ ಆಟದ ಸೊಬಗು

ಆಸ್ಟ್ರೇಲಿಯಾಗೆ ಅಫ್ಘಾನಿಸ್ತಾನ ಆಘಾತ

ಕಿಂಗ್ಸ್‌ಟೌನ್ (ಪಿಟಿಐ): ಅಂತರ ರಾಷ್ಟ್ರೀಯ ಕ್ರಿಕೆಟ್‌ನ ಮೂರು ಮಾದರಿಗಳಲ್ಲಿಯೂ ಚಾಂಪಿಯನ್ ಆಗಿರುವ ಆಸ್ಟ್ರೇಲಿಯಾ ತಂಡವು ಅಫ್ಘಾನಿಸ್ತಾನದ ಎದುರು ಸೋಲಿನ ಆಘಾತಕ್ಕೊಳಗಾಯಿತು.

ಸೇಂಟ್ ವಿನ್ಸೆಂಟ್‌ನ ಅರ್ನೋಸ್ ವಾಲೆ ಮೈದಾನದಲ್ಲಿ ಭಾನುವಾರ ಬೆಳಿಗ್ಗೆ (ಭಾರತೀಯ ಕಾಲಮಾನ) ನಡೆದ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 8ರ ಹಂತದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು 21 ರನ್‌ಗಳಿಂದ ಅಫ್ಘಾನಿಸ್ತಾನವು ಸೋಲಿಸಿತು. ಚಾರಿತ್ರಿಕ ಸಾಧನೆ ಮಾಡಿದ ಅಫ್ಗನ್ ಬಳಗದ ಆಟಗಾರರು ಮತ್ತು ನೆರವು ಸಿಬ್ಬಂದಿ ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ಮಧ್ಯಮವೇಗಿ ಗುಲ್ಬದೀನ್ ನೈಬ್ ನಾಲ್ಕು ವಿಕೆಟ್ ಗಳಿಸಿ ಗೆಲುವಿನ ರೂವಾರಿಯಾದರು. ಅದರಲ್ಲೂ 15ನೇ ಓವರ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ (59; 41ಎ, 4X6, 6X3) ವಿಕೆಟ್ ಗಳಿಸಿದ ನೈಬ್, ಇನಿಂಗ್ಸ್‌ಗೆ ಮಹತ್ವದ ತಿರುವು ನೀಡಿದರು. ಇದು ಅಫ್ಗನ್ ಗೆಲುವಿನ ಹಾದಿಯನ್ನು ಸುಗಮಗೊಳಿಸಿತು. ಸತತ ಎರಡನೇ ಪಂದ್ಯದಲ್ಲಿಯೂ ಹ್ಯಾಟ್ರಿಕ್ ಸಾಧಿಸಿದ ಆಸ್ಟ್ರೇಲಿಯಾದ ವೇಗಿ ಪ್ಯಾಟ್ ಕಮಿನ್ಸ್ ದಾಖಲೆ ಪುಟ ಸೇರಿದರು.



ಗುಲ್ಬದೀನ್ ನೈಬ್ ಸಂಭ್ರಮ —ಎಎಫ್‌ಪಿ ಚಿತ್ರ

ಟಾಸ್ ಗೆದ್ದ ಆಸ್ಟ್ರೇಲಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ತುಸು ಕಷ್ಟವೇ ಆಗಿದ್ದ ಪಿಚ್‌ನಲ್ಲಿ ಅಫ್ಘಾನಿಸ್ತಾನದ ಆರಂಭಿಕ ಜೋಡಿ ರಹಮಾನುಲ್ಲಾ ಗುರ್ಬಾಜ್ (60; 49ಎ, 4X4, 6X4) ಹಾಗೂ ಇಬ್ರಾಹಿಂ ಜದ್ರಾನ್ (51; 48ಎ, 4X6) ಮೊದಲ ವಿಕೆಟ್‌ಗೆ 118 ರನ್ ಸೇರಿಸಿದರು. 16ನೇ ಓವರ್‌ನವರೆಗೂ ಇವರಿಬ್ಬರ ಜೊತೆಯಾಟ ನಡೆಯಿತು. ಆದರೆ ಕೊನೆಯ ನಾಲ್ಕು ಓವರ್‌ಗಳಲ್ಲಿ ಕಮಿನ್ಸ್ ದಾಳಿಯಿಂದಾಗಿ ಆರು ವಿಕೆಟ್‌ಗಳು ಪತನವಾದವು. ನಿಗದಿತ 20 ಓವರ್‌ಗಳಲ್ಲಿ ಅಫ್ಗನ್ ತಂಡವು 6 ವಿಕೆಟ್‌ಗೆ148 ರನ್ ಸೇರಿಸಿತು. ಇದಕ್ಕುತ್ತರವಾಗಿ ಆಸ್ಟ್ರೇಲಿಯಾ ತಂಡಕ್ಕೆ 19.2 ಓವರ್‌ಗಳಲ್ಲಿ 127 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಆಸ್ಟ್ರೇಲಿಯಾದ ಬಲಿಷ್ಠ ಬ್ಯಾಟರ್‌ಗಳ ಪಡೆಗೆ ಇದೇನೂ ದೊಡ್ಡ ಮೊತ್ತವಾಗಿರಲಿಲ್ಲ. ಆದರೆ, ನಿಧಾನಗತಿಯ ಎಸೆತಗಳನ್ನು ಚಾಣಾಕ್ಷತನದಿಂದ ಪ್ರಯೋಗಿಸಿದ ನೈಬ್ (20ಕ್ಕೆ4) ಹಾಗೂ ನವೀನ್ ಉಲ್ ಹಕ್ (20ಕ್ಕೆ3) ಅವರ ಮುಂದೆ ಆಸ್ಟ್ರೇಲಿಯನ್ ಬ್ಯಾಟರ್‌ಗಳ ಆಟ ನಡೆಯಲಿಲ್ಲ. ಟ್ರಾವಿಸ್ ಹೆಡ್, ಡೇವಿಡ್ ವಾರ್ನರ್, ನಾಯಕ ಮಿಚೆಲ್ ಮಾರ್ಷ್, ಮಾರ್ಕಸ್ ಸ್ಟೊಯಿನಿಸ್, ಟಿಮ್ ಡೇವಿಡ್ ಹಾಗೂ ಮ್ಯಾಥ್ಯೂ ವೇಡ್ ಅವರಂತಹ ನುರಿತ ಬ್ಯಾಟರ್‌ಗಳು ಹೆಚ್ಚು ಹೊತ್ತು ಕ್ರೀಸ್‌ನಲ್ಲಿ ನಿಲ್ಲಲಿಲ್ಲ. ಆದರೆ ಗ್ಲೆನ್ ಮ್ಯಾಕ್ಸ್‌ವೆಲ್ ಮಾತ್ರ ಏಕಾಂಗಿ ಹೋರಾಟ ನಡೆಸಿದರು. ನಾಲ್ಕನೇ ಕ್ರಮಾಂಕದಲ್ಲಿ ಅವರು ಕ್ರೀಸ್‌ಗೆ ಬಂದಾಗ ಆಸ್ಟ್ರೇಲಿಯಾ ತಂಡದ ಪ್ರಮುಖ ಬ್ಯಾಟರ್‌ಗಳು ಪವರ್‌ಪ್ಲೇನಲ್ಲಿ-ಯೇ (3ಕ್ಕೆ32) ಔಟಾಗಿದ್ದರು.

ಮ್ಯಾಕ್ಸ್‌ವೆಲ್ ಅವರು ಹೋದ ವರ್ಷ ಮುಂಬೈನಲ್ಲಿ ಅಫ್ಘಾನಿಸ್ತಾನ ಎದುರು ನಡೆದಿದ್ದ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಅಜೇಯ ದ್ವಿಶತಕ ಬಾರಿಸಿ ಆಸ್ಟ್ರೇಲಿಯಾವನ್ನು ಗೆಲ್ಲಿಸಿದ್ದರು. ಇಲ್ಲಿಯೂ ಅದೇ ರೀತಿಯಾಗುವ ಎಲ್ಲ ಲಕ್ಷಣಗಳೂ ಕಂಡಿದ್ದವು. ಆದರೆ ನೈಬ್ ಎಸೆತವನ್ನು ಹೊಡೆದ ಗ್ಲೆನ್ ಅವರು ನೂರ್ ಅಹಮದ್‌ಗೆ ಕ್ಯಾಚ್ ಆದರು. ನಂತರದ 21 ರನ್‌ಗಳ ಅಂತರದಲ್ಲಿ ನಾಲ್ಕು ವಿಕೆಟ್‌ಗಳು ಪತನವಾದವು.

ಈ ಸೋಲಿನಿಂದಾಗಿ ಆಸ್ಟ್ರೇಲಿಯಾದ ಸೆಮಿಫೈನಲ್ ಹಾದಿ ಕಠಿಣವಾಗಿದೆ. ಸೂಪರ್ 8ರ ಹಂತದಲ್ಲಿ ಆಸ್ಟ್ರೇಲಿಯಾ ತಂಡವು ತನ್ನ ಕೊನೆಯ ಪಂದ್ಯದಲ್ಲಿ ಭಾರತವನ್ನು ಎದುರಿಸಲಿದೆ. ಅಫ್ಗನ್ ತಂಡವು ಬಾಂಗ್ಲಾ ಎದುರು ಸೆಣಸಲಿದೆ. ಉಭಯ ತಂಡಗಳೂ ತಮ್ಮ ಅಂತಿಮ ಪಂದ್ಯಗಳಲ್ಲಿ ಸೋತರೆ ಅಥವಾ ಗೆದ್ದರೆ (ಪಾಯಿಂಟ್‌ಗಳಲ್ಲಿ ಸಮಬಲವಾಗುತ್ತದೆ) ನೆಟ್ ರನ್‌ರೇಟ್ ಹೆಚ್ಚು ಇರುವ ತಂಡವು ನಾಲ್ಕರ ಘಟ್ಟಕ್ಕೆ ಸಾಗಲಿದೆ. ಒಂದೊಮ್ಮೆ ಭಾರತದ ಎದುರು ಆಸ್ಟ್ರೇಲಿಯಾ ಸೋತು, ಅಫ್ಗನ್ ತಂಡವು ತನ್ನ ಪಂದ್ಯದಲ್ಲಿ ಜಯಿಸಿದರೆ ಇತಿಹಾಸ ಸೃಷ್ಟಿಯಾಗಲಿದೆ. ಆಸ್ಟ್ರೇಲಿಯಾ ಹೊರಬೀಳಲಿದೆ. ಅಫ್ಗನ್ ನಾಲ್ಕರ ಘಟ್ಟಕ್ಕೆ ಪ್ರವೇಶಿಸುತ್ತದೆ.

ಸಂಕ್ಷಿಪ್ತ ಸ್ಕೋರು: ಅಫ್ಘಾನಿಸ್ತಾನ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 148 (ಗುರ್ಬಾಜ್ 60, ಇಬ್ರಾಹಿಂ ಝದ್ರಾನ್ 51, ಕರೀಂ ಜನತ್ 13, ಮೊಹಮ್ಮದ್ ನಬಿ 10, ಪ್ಯಾಟ್ ಕಮಿನ್ಸ್ 28ಕ್ಕೆ3, ಆ್ಯಡಂ ಜಂಪಾ 28ಕ್ಕೆ2) **ಆಸ್ಟ್ರೇಲಿಯಾ:** 19.2 ಓವರ್‌ಗಳಲ್ಲಿ 127 (ಗ್ಲೆನ್ ಮ್ಯಾಕ್ಸ್‌ವೆಲ್ 59, ಮಿಚೆಲ್ ಮಾರ್ಷ್ 12, ನವೀನ್ ಉಲ್ ಹಕ್ 20ಕ್ಕೆ3, ಗುಲ್ಬದೀನ್ ನೈಬ್ 20ಕ್ಕೆ4, ಅಜ್ಮತ್‌ಉಲ್ಲಾ ಒಮರ್‌ಝೈ 10ಕ್ಕೆ1, ಮೊಹಮ್ಮದ್ ನಬಿ 1ಕ್ಕೆ1). **ಫಲಿತಾಂಶ:** ಅಫ್ಘಾನಿಸ್ತಾನ ತಂಡಕ್ಕೆ 21 ರನ್‌ಗಳ ಜಯ. **ಪಂದ್ಯದ ಆಟಗಾರ:** ಗುಲ್ಬದೀನ್ ನೈಬ್

‘ಅಂದೂ ನಿದ್ದೆ ಆಗಿರಲಿಲ್ಲ..ಇಂದೂ ಆಗಲ್ಲ..’

ಕಿಂಗ್ಸ್‌ಟೌನ್ (ಪಿಟಿಐ): ‘ಅವತ್ತು ಮುಂಬೈನಲ್ಲಿ ಆಸ್ಟ್ರೇಲಿಯಾ ಎದುರು ಸೋತ ರಾತ್ರಿಯಿಡೀ ನಿದ್ದೆ ಮಾಡಿರಲಿಲ್ಲ. ಗ್ಲೆನ್ ಮ್ಯಾಕ್ಸ್‌ವೆಲ್ ಇನಿಂಗ್ಸ್ ಕಾಡುತ್ತಿತ್ತು. ಇವತ್ತು ಇಲ್ಲಿಯೂ ನಿದ್ದೆ ಬರುವುದಿಲ್ಲ. ಏಕೆಂದರೆ; ಗೆಲುವಿನ ಸಂತಸ ಉತ್ತುಂಗದಲ್ಲಿದೆ’

ಅಫ್ಘಾನಿಸ್ತಾನ ಕ್ರಿಕೆಟ್ ತಂಡದ ನಾಯಕ ರಶೀದ್ ಖಾನ್ ಅವರ ಭಾವುಕ ನುಡಿಗಳು ಇವು.

ಹೋದ ವರ್ಷ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಮುಂಬೈನಲ್ಲಿ ನಡೆದಿದ್ದ ಪಂದ್ಯದಲ್ಲಿ ಅಫ್ಗನ್ ಎದುರು ಆಸ್ಟ್ರೇಲಿಯಾವು 292 ರನ್‌ಗಳ ಗುರಿ ಬೆನ್ನಟ್ಟಿತ್ತು. ಈ ಹಾದಿಯಲ್ಲಿ 91 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು. ಆಗ ಮ್ಯಾಕ್ಸ್‌ವೆಲ್ ಅಜೇಯ 201 ರನ್ ಗಳಿಸಿದ್ದರು. ತಮ್ಮ ತೊಡೆಯ ಸ್ನಾಯುಸೆಳೆತದ ನೋವಿನಲ್ಲಿ ಅವರು ಈ ಸಾಧನೆ ಮಾಡಿ ತಂಡವನ್ನು ಗೆಲ್ಲಿಸಿದ್ದರು. ಇದೀಗ ಅಫ್ಗನ್ ತಂಡವು ಆ ಸೋಲಿಗೆ ಇಲ್ಲಿ ಮುಯ್ಯಿ ತೀರಿಸಿಕೊಂಡಿದೆ.

‘ನಮ್ಮ ತಂಡಕ್ಕೆ ಇದೊಂದು ಅವಿಸ್ಮರಣೀಯ ಗೆಲುವಾಗಿದೆ. ವಿಶ್ವಕಪ್ ಪಂದ್ಯ ಇದು. ಶ್ರೇಷ್ಠ ತಂಡವನ್ನು ಸೋಲಿಸುವುದೆಂದರೆ ದೊಡ್ಡ ಸಾಧನೆಯೇ ಸರಿ. ಆಸ್ಟ್ರೇಲಿಯಾ 2021ರ ಚಾಂಪಿಯನ್ ಕೂಡ ಹೌದು’ ಎಂದು ರಶೀದ್ ಹೇಳಿದರು.

ಕಮಿನ್ಸ್ ಹ್ಯಾಟ್ರಿಕ್ ದಾಖಲೆ

ಕಿಂಗ್ಸ್‌ಟೌನ್ (ಪಿಟಿಐ): ಆಸ್ಟ್ರೇಲಿಯಾ ತಂಡದ ವೇಗಿ ಪ್ಯಾಟ್ ಕಮಿನ್ಸ್ ಅವರು ಈ ವಿಶ್ವಕಪ್ ಟೂರ್ನಿಯಲ್ಲಿ ಸತತ ಎರಡನೇ ಪಂದ್ಯದಲ್ಲಿ ಹ್ಯಾಟ್ರಿಕ್ ಸಾಧನೆ ಮಾಡಿದರು.

ವಿಶ್ವಕಪ್ ಕ್ರಿಕೆಟ್‌ನಲ್ಲಿ ಇಂತಹ ಸಾಧನೆ ಮಾಡಿದ ಮೊದಲ ಬೌಲರ್ ಆದರು. 31 ವರ್ಷದ ಪ್ಯಾಟ್ ಇನಿಂಗ್ಸ್‌ನ 18ನೇ ಓವರ್‌ನಲ್ಲಿ ರಶೀದ್ ಖಾನ್, ಕರೀಂ ಮತ್ತು ಗುಲ್ಬದೀನ್ ನೈಬ್ ಅವರ ವಿಕೆಟ್‌ಗಳನ್ನು ಕಬಳಿಸಿದರು.

‘ಆಸ್ಟ್ರೇಲಿಯಾ ತಂಡದಲ್ಲಿ 100ಕ್ಕೂ ಹೆಚ್ಚು ಪಂದ್ಯಗಳನ್ನು ಆಡಿದ ನಂತರ ಎರಡನೇ ಸಲ ಹ್ಯಾಟ್ರಿಕ್ ಪಡೆಯುತ್ತಿರುವುದು ಸಂತಸವಾಗಿದೆ’ ಎಂದು ಪ್ಯಾಟ್ ಹೇಳೀದ್ದಾರೆ.



ಪ್ಯಾಟ್ ಕಮಿನ್ಸ್ ಬೌಲಿಂಗ್ ಶೈಲಿ

ಭಾರತದ ಕೈಯಲ್ಲಿ ಮಾರ್ಷ್ ಪಡೆ ಭವಿಷ್ಯ



ರಿಷಭ್ ಪಂತ್

ಪ್ರಜಾವಾಣಿ ವಾರ್ತೆ

ಗ್ರಾಸ್ ಐಲೆಟ್: ಅಫ್ಘಾನಿಸ್ತಾನ ಎದುರು ಸೋಲಿನ ಆಘಾತ ಅನುಭವಿಸಿರುವ ಆಸ್ಟ್ರೇಲಿಯಾ ತಂಡವು ಸೋಮವಾರ ಸೂಪರ್ 8ರ ಹಂತದಲ್ಲಿ ಭಾರತ ತಂಡವನ್ನು ಎದುರಿಸಲಿದೆ.

ಸೆಮಿಫೈನಲ್ ಪ್ರವೇಶಿಸಲು ಮಿಚೆಲ್ ಮಾರ್ಷ್ ತಂಡಕ್ಕೆ ಭಾರತದ ಎದುರು ಉತ್ತಮ ರನ್‌ರೇಟ್‌ನೊಂದಿಗೆ ಜಯಿಸುವ ಒತ್ತಡವಿದೆ.

ಹೋದ ವರ್ಷ ಅಹಮದಾಬಾದಿನಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಫೈನಲ್ ಸೋಲಿನ ಕಹಿ ಮರೆತಿರುವುದಾಗಿ ಭಾರತ ತಂಡದ ಆಟಗಾರರು, ನೆರವು ಸಿಬ್ಬಂದಿ ಹೇಳುತ್ತಲೇ ಇರಬಹುದು. ಆದರೂ ಅವರೆಲ್ಲರ ಮನದ ಮೂಲೆಯಲ್ಲಿ ಈಗ ಮುಯ್ಯಿ ತೀರಿಸಿಕೊಳ್ಳುವ ವಿಚಾರ ಕುಡಿಯೊಡೆದಿದ್ದರೆ ಅಚ್ಚರಿಯೇನಿಲ್ಲ. ಭಾರತ ಗೆದ್ದರೆ ಆಸ್ಟ್ರೇಲಿಯಾ ತಂಡದ ಸೆಮಿಫೈನಲ್ ಕನಸು ಭಗ್ನವಾಗುವುದು ಬಹುತೇಕ ಖಚಿತ.

ಇಷ್ಟೇ ಅಲ್ಲ. ಈ ಟೂರ್ನಿಯಲ್ಲಿ ಇದುವರೆಗೂ ಭಾರತ ತಂಡವು ಅಜೇಯವಾಗುಳಿದಿದೆ. ಸೂಪರ್ 8ರಲ್ಲಿ ನಾಲ್ಕು ಅಂಕ ಗಳಿಸಿದೆ. ಇದರೊಂದಿಗೆ ಸೆಮಿಫೈನಲ್ ಪ್ರವೇಶ ಬಹುತೇಕ ಖಚಿತವಾಗಿದೆ.

ಬಾಂಗ್ಲಾ ಎದುರು ನಡೆದಿದ್ದ ಕಳೆದ ಪಂದ್ಯದಲ್ಲಿ ಭಾರತದ ಏಳು ಬ್ಯಾಟರ್‌ಗಳಲ್ಲಿ ನಾಲ್ವರು 150ರ ಸ್ಟ್ರೈಕ್‌ರೇಟ್ ನಲ್ಲಿ ರನ್ ಗಳಿಸಿದ್ದರು. ಆದರೆ ವಿರಾಟ್ 132.14ರ ಸ್ಟ್ರೈಕ್‌ರೇಟ್ ನಲ್ಲಿ ಆಡಿದ್ದರು. ಕೊಹ್ಲಿ ಏನಾದರೂ ಆಸ್ಟ್ರೇಲಿಯಾ ಎದುರು ಪುಟಿದೆದ್ದರೆ ಭಾರತದ ಬ್ಯಾಟಿಂಗ್ ಬಲ ಹೆಚ್ಚಲಿದೆ.

ಆ ಪಂದ್ಯದಲ್ಲಿ ಹಾರ್ದಿಕ್ ಪಾಂಡ್ಯ ಮಿಂಚಿನ ಅರ್ಧಶತಕ ಹೊಡೆದಿದ್ದರು. ರಿಷಭ್ ಪಂತ್, ಶಿವಂ ದುಬೆ ಲಯಕ್ಕೆ ಮರಳಿದ್ದಾರೆ. ಬೌಲಿಂಗ್‌ನಲ್ಲಿ ಜಸ್‌ಪ್ರೀತ್ ಬೂಮ್ರಾ ಅದ್ಭುತ ಯಶಸ್ಸು ಗಳಿಸಿದ್ದಾರೆ. ಐದು ಪಂದ್ಯಗಳಲ್ಲಿ ಹತ್ತು ವಿಕೆಟ್‌ಗಳನ್ನು ಗಳಿಸಿದ್ದಾರೆ. 3.42ರ ಏಕಾನಮಿಯಲ್ಲಿ ಬೌಲಿಂಗ್ ಮಾಡಿದ್ದಾರೆ. 6.50ರ ಸರಾಸರಿ ಹಾಗೂ 11.4ರ ಸ್ಟ್ರೈಕ್ ರೇಟ್ ಕೂಡ ಅವರದ್ದಾಗಿದೆ. ಟೆಸ್ಟ್ ಕ್ರಿಕೆಟ್‌ನಲ್ಲಿ-ಯೇ ಇಂತಹ ಸಾಧನೆ ಮೂಡಿಬರುವುದು ಕಷ್ಟಸಾಧ್ಯವಾಗಿರುವ ಇಂದಿನ ದಿನಗಳಲ್ಲಿ ಬೂಮ್ರಾ ಟಿ20 ಮಾದರಿಯಲ್ಲಿ ಮಾಡಿದ್ದಾರೆ.

ಆಸ್ಟ್ರೇಲಿಯಾದ ಸ್ಪಿನ್ನರ್ ಆ್ಯಡಂ ಜಂಪಾ 13 ವಿಕೆಟ್ ಗಳಿಸಿದ್ದಾರೆ. 6.08ರ ಏಕಾನಮಿಯಲ್ಲಿ ಬೌಲಿಂಗ್ ಮಾಡಿದ್ದಾರೆ. ಪ್ಯಾಟ್ ಕಮಿನ್ಸ್ ಎರಡು ಹ್ಯಾಟ್ರಿಕ್ ಸಾಧಿಸಿದ್ದಾರೆ. ಜೋಶ್ ಹ್ಯಾಜಲ್‌ವುಡ್ ಕೂಡ ಪರಿಣಾಮಕಾರಿಯಾಗಬಲ್ಲರು.

ಬಲಾಬಲ

ಪಂದ್ಯ	31
ಭಾರತ ಜಯ	19
ಆಸ್ಟ್ರೇಲಿಯಾ ಜಯ	11
ಫಲಿತಾಂಶವಿಲ್ಲ	1

ಇಂದಿನ ಪಂದ್ಯಗಳು

ವೆಸ್ಟ್ ಇಂಡೀಸ್ Vs ದಕ್ಷಿಣ ಆಫ್ರಿಕಾ (ಬೆಳಿಗ್ಗೆ 6)

ಆಸ್ಟ್ರೇಲಿಯಾ Vs ಭಾರತ (ರಾತ್ರಿ 8)

ಲೈವ್ ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್ ಸ್ಟಾರ್

ಹರಿಣಗಳಿಗೆ ವಿಂಡೀಸ್ ಸವಾಲು

ನಾರ್ತ್ ಸೌಂಡ್ (ಪಿಟಿಐ): ಅಜೇಯ ಓಟದಲ್ಲಿರುವ ದಕ್ಷಿಣ ಆಫ್ರಿಕಾ ತಂಡವು ಸೋಮವಾರ ಸೂಪರ್ ಎಂಟರ ಘಟ್ಟದ (ಗುಂಪು–2) ಪಂದ್ಯದಲ್ಲಿ ಆತಿಥೇಯ ವೆಸ್ಟ್ ಇಂಡೀಸ್ ತಂಡವನ್ನು ಎದುರಿಸಲಿದೆ.

ಇದೇ ಗುಂಪಿನಲ್ಲಿರುವ ಇಂಗ್ಲೆಂಡ್ ತಂಡವು ಮೂರು ಪಂದ್ಯಗಳಲ್ಲಿ ಎರಡನ್ನು ಗೆದ್ದಿದೆ. ಒಟ್ಟು ನಾಲ್ಕು ಅಂಕಗಳೊಂದಿಗೆ ಉತ್ತಮ ನೆಟ್ ರನ್‌ರೇಟ್‌ನೊಂದಿಗೆ ಸೆಮಿಫೈನಲ್‌ಗೆ ಅರ್ಹತೆ ಪಡೆದಿದೆ. ಅಮೆರಿಕ ತಂಡವು ಈಗಾಗಲೇ ಟೂರ್ನಿಯಿಂದ ಹೊರಬಿದ್ದಿದೆ.

ದಕ್ಷಿಣ ಆಫ್ರಿಕಾ ಆಡಿರುವ ಎರಡೂ ಪಂದ್ಯಗಳನ್ನು ಗೆದ್ದು, 4 ಅಂಕದೊಂದಿಗೆ ಎರಡನೇ ಸ್ಥಾನದಲ್ಲಿದೆ. ಕೊನೆಯ ಪಂದ್ಯದಲ್ಲೂ ಗೆಲುವು ಸಾಧಿಸಿ, ನಾಲ್ಕರ ಘಟ್ಟಕ್ಕೆ ಮುನ್ನಡೆಯುವ ಹುಮ್ಮಸ್ಸಿನಲ್ಲಿದೆ. ವಿಂಡೀಸ್ ತಂಡವು ಸೆಮಿಫೈನಲ್ ಕನಸನ್ನು ಜೀವಂತವಾಗಿರಿಸಲು ಈ ಪಂದ್ಯವನ್ನು ಗೆಲ್ಲಬೇಕಾದ ಅನಿವಾರ್ಯತೆಗೆ ಸಿಲುಕಿದೆ.

ಟಿ20 ವಿಶ್ವಕಪ್: ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಟೈ	ಅಂಕ	ನೆಟ್ ರನ್‌ರೇಟ್
ಸೂಪರ್ ಎಂಟರ ಹಂತ–ಗುಂಪು 1						
ಭಾರತ	2	2	0	0	4	2.425
ಆಸ್ಟ್ರೇಲಿಯಾ	2	1	1	0	2	0.223
ಅಫ್ಘಾನಿಸ್ತಾನ	2	1	1	0	2	-0.650
ಬಾಂಗ್ಲಾದೇಶ	2	0	2	0	0	-2.489
ಗುಂಪು 2						
ಇಂಗ್ಲೆಂಡ್	3	2	1	0	4	1.992
ದಕ್ಷಿಣ ಆಫ್ರಿಕಾ	2	2	0	0	4	0.625
ವೆಸ್ಟ್ ಇಂಡೀಸ್	2	1	1	0	2	1.814
ಅಮೆರಿಕ	3	0	3	0	0	-3.906


ಕ್ರಿಸ್ ಹ್ಯಾಟ್ರಿಕ್: ಸೆಮಿಗೆ ಇಂಗ್ಲೆಂಡ್

ಬ್ರಿಜ್‌ಟೌನ್ (ಪಿಟಿಐ): ವೇಗಿ ಕ್ರಿಸ್ ಜೋರ್ಡನ್ ಅವರ ಹ್ಯಾಟ್ರಿಕ್ ಮತ್ತು ಜೋಸ್‌ಬಟ್ಲರ್‌ಅಬ್ಬರದಬ್ಯಾಟಿಂಗ್‌ಬಲದಿಂದ ಇಂಗ್ಲೆಂಡ್ ತಂಡವು ಅಮೆರಿಕ ವಿರುದ್ಧ ಸುಲಭ ಜಯ ಸಾಧಿಸಿತು.

ಕೆನ್ಸಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸೂಪರ್ 8ರ ಹಂತದ ಪಂದ್ಯದಲ್ಲಿ ಇಂಗ್ಲೆಂಡ್ 10 ವಿಕೆಟ್‌ಗಳಿಂದ ಜಯಿಸಿತು. ಇದರೊಂದಿಗೆ ಸೂಪರ್ ಎಂಟರ ಹಂತದಲ್ಲಿ ಒಟ್ಟು ನಾಲ್ಕು ಅಂಕ ಗಳಿಸಿ, ಸೆಮಿಫೈನಲ್‌ಗೆ ಅರ್ಹತೆ ಪಡೆಯಿತು.

ಟಾಸ್ ಗೆದ್ದ ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಮೆರಿಕ ತಂಡವು 18.5 ಓವರ್‌ಗಳಲ್ಲಿ 115 ರನ್ ಗಳಿಸಿತು. ಅದಕ್ಕುತ್ತರವಾಗಿ ಇಂಗ್ಲೆಂಡ್ ತಂಡವು 9.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 117 ರನ್ ಗಳಿಸಿ ಜಯಿಸಿತು. ಫಿಲಿಪ್ ಸಾಲ್ಟ್ (ಔಟಾಗದೆ 25, 21ಎ, 4X2) ಮತ್ತು ಜೋಸ್ ಬಟ್ಲರ್ (ಔಟಾಗದೆ 83; 38ಎ, 4X6, 6X7) ಅಬ್ಬರಿಸಿದರು.

ಕ್ರಿಸ್ ಹ್ಯಾಟ್ರಿಕ್: ಅಮೆರಿಕದ ಇನಿಂಗ್ಸ್‌ನ 19ನೇ ಓವರ್‌ನಲ್ಲಿ ಕ್ರಿಸ್ ಜೋರ್ಡನ್ ಅವರು ಒಟ್ಟು ನಾಲ್ಕು ವಿಕೆಟ್ ಗಳಿಸಿದರು. ಮೊದಲ ಎಸೆತದಲ್ಲಿ ಕೋರಿ ಆ್ಯಂಡರ್ಸನ್ ವಿಕೆಟ್ ಪಡೆದರು.



—ಎಎಫ್‌ಪಿ ಚಿತ್ರ

ಮೂರು, ನಾಲ್ಕು ಮತ್ತು ಐದನೇ ಎಸೆತಗಳಲ್ಲಿ ಕ್ರಮವಾಗಿ ಅಲಿ ಖಾನ್, ನಾಸ್ತುಷ್ ಕೆಂಜಿಗೆ ಹಾಗೂ ಸೌರಭ್ ನೇತ್ರಾವಳ್ಕರ್ ವಿಕೆಟ್‌ಗಳನ್ನು ಗಳಿಸಿ ಹ್ಯಾಟ್ರಿಕ್ ಸಾಧಿಸಿದರು. ಅಮೆರಿಕ ಇನಿಂಗ್ಸ್‌ನ ಆರಂಭದಲ್ಲಿ ಸಂಕಷ್ಟ ಅನುಭವಿಸಿತು. ಆದರೆ ನಿತೀಶ್ ಕುಮಾರ್ (30 ರನ್) ಮತ್ತು ಸ್ಟೀವನ್ ಟೇಲರ್ (12 ರನ್) ಅವರಿಬ್ಬರೂ ವೇಗವಾಗಿ ರನ್ ಗಳಿಸಿ ಚೇತರಿಕೆ ನೀಡಿದರು. ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ 36 ರನ್ ಸೇರಿಸಿದರು. ಆದರೆ ಪವರ್‌ಪ್ಲೇ ಮುಗಿಯುವ ಮುನ್ನವೇ ಟೇಲರ್ ವಿಕೆಟ್ ಗಳಿಸಿದ ಸ್ಯಾಮ್ ಕರನ್ ಜೊತೆಯಾಟ ಮುರಿದರು. ಆದಿಲ್ ರಶೀದ್ ಅವರು ನಿತೀಶ್ ಮತ್ತು ಆ್ಯರನ್ ಜೋನ್ಸ್ ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಅಮೆರಿಕ: 18.5 ಓವರ್‌ಗಳಲ್ಲಿ 115 (ನಿತೀಶ್ ಕುಮಾರ್ 30, ಕೋರಿ ಆ್ಯಂಡರ್ಸನ್ 29, ಹರ್ಮೀತ್ ಸಿಂಗ್ 21, ಸ್ಯಾಮ್ ಕರನ್ 23ಕ್ಕೆ2, ಆದಿಲ್ ರಶೀದ್ 13ಕ್ಕೆ2, ಕ್ರಿಸ್ ಜೋರ್ಡನ್ 10ಕ್ಕೆ4) **ಇಂಗ್ಲೆಂಡ್:** 9.4 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 117 (ಫಿಲಿಪ್ ಸಾಲ್ಟ್ ಔಟಾಗದೆ 25, ಜೋಸ್ ಬಟ್ಲರ್ ಔಟಾಗದೆ 83) **ಫಲಿತಾಂಶ:** ಇಂಗ್ಲೆಂಡ್ ತಂಡಕ್ಕೆ 10 ವಿಕೆಟ್ ಜಯ. **ಪಂದ್ಯದ ಆಟಗಾರ:** ಆದಿಲ್ ರಶೀದ್

ಮಂದಾನ ಮೋಹಕ ಬ್ಯಾಟಿಂಗ್; ದೀಪ್ತಿ ಮೋಡಿ, ದಕ್ಷಿಣ ಆಫ್ರಿಕಾಗೆ ಸೋಲು

ಹರ್ಮನ್‌ಪ್ರೀತ್ ಬಳಗಕ್ಕೆ ಕ್ಲೀನ್‌ಸ್ವೀಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹತ್ತು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡ ಸ್ಮೃತಿ ಮಂದಾನ ಮತ್ತು ದೀಪ್ತಿ ಶರ್ಮಾ ಅವರ ಸ್ಪಿನ್ ಮೋಡಿಯಿಂದಾಗಿ ಭಾರತ ಮಹಿಳಾ ತಂಡವು ದಕ್ಷಿಣ ಆಫ್ರಿಕಾ ಎದುರು ಏಕದಿನ ಕ್ರಿಕೆಟ್ ಸರಣಿಯನ್ನು ಕ್ಲೀನ್‌ಸ್ವೀಪ್ ಮಾಡಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಸರಣಿಯ ಕೊನೆಯ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗವು 6 ವಿಕೆಟ್‌ಗಳಿಂದ ದಕ್ಷಿಣ ಆಫ್ರಿಕಾ ಎದುರು ಗೆದ್ದಿತು. 3–0ಯಿಂದ ಸರಣಿ ಜಯಿಸಿತು.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕಿ ಲೌರಾ ವೋಲ್ವಾರ್ಟ್ (61; 57ಎ, 4X7) ಮತ್ತು ತೆಂಜಿನ್ ಬ್ರಿಟ್ಸ್ (38; 66ಎ, 4X2, 6X1) ಅವರು ಉತ್ತಮ ಆರಂಭ ನೀಡಿದರು. ಆದರೆ ದೀಪ್ತಿ ಶರ್ಮಾ ಮತ್ತು ಅರುಂಧತಿ ರೆಡ್ಡಿ ಅವರ ದಾಳಿಯಿಂದಾಗಿ ಮಧ್ಯಮ ಕ್ರಮಾಂಕ ಕುಸಿಯಿತು. ಇದರಿಂದಾಗಿ ಪ್ರವಾಸಿ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 215 ರನ್ ಗಳಿಸಿತು. ಬೆಂಗಳೂರಿನ ಶ್ರೇಯಾಂಕಾ ಪಾಟೀಲ ಅವರೂ ಮೆರಿಜಾನ್ ಕಾಪ್ ಅವರ ವಿಕೆಟ್ ಗಳಿಸಿದರು. ಗುರಿ ಬೆನ್ನಟ್ಟಿದ ಆತಿಥೇಯ ತಂಡವು 40.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 220 ರನ್ ಗಳಿಸಿ ಗೆದ್ದಿತು. ಕಳೆದ ಎರಡೂ ಪಂದ್ಯಗಳಲ್ಲಿ ಶತಕ ಗಳಿಸಿದ್ದ ಸ್ಮೃತಿ ಇಲ್ಲಿಯೂ (90; 83ಎ, 4X11) ಸುಂದರ ಬ್ಯಾಟಿಂಗ್ ಮಾಡಿದರು. ಆದರೆ ಶತಕದ ಹ್ಯಾಟ್ರಿಕ್ ಗಳಿಸುವ ಅವಕಾಶ ಅವರ ಕೈತಪ್ಪಿತು. 31ನೇ ಓವರ್‌ನಲ್ಲಿ ಮಿಲಾಬಾ ಬೌಲಿಂಗ್‌ನಲ್ಲಿ ಅವರು ನಿರ್ಗಮಿಸಿದರು. ಕ್ರೀಡಾಂಗಣದಲ್ಲಿ ಸೇರಿದ್ದ 15 ಸಾವಿರ ಪ್ರೇಕ್ಷಕರು ನಿರಾಶೆಯಿಂದ ಮೌನವಾದರು. ನಾಯಕಿ ಹರ್ಮನ್‌ಪ್ರೀತ್ ಕೌರ್ (42; 48ಎ) ತಂಡದ ಗೆಲುವಿಗೆ ಬಲ ತುಂಬಿದರು. ಜೆಮಿಮಾ ರಾಡ್ರಿಗಸ್ (ಔಟಾಗದೆ 19 ರನ್) ತಂಡವನ್ನು ಜಯದ ದಡ ಸೇರಿಸಿದರು.

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 215 (ಲೌರಾ ವೋಲ್ವಾರ್ಟ್ 61, ತೆಂಜಿನ್ 38, ಅರುಂಧತಿ ರೆಡ್ಡಿ 36ಕ್ಕೆ2, ದೀಪ್ತಿ ಶರ್ಮಾ 27ಕ್ಕೆ2) **ಭಾರತ:** 40.4 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 220 (ಸ್ಮೃತಿ ಮಂದಾನ 90, ಶಫಾಲಿ ವರ್ಮಾ 25, ಪ್ರಿಯಾ ಪೂನಿಯಾ 28, ಹರ್ಮನ್‌ಪ್ರೀತ್ ಕೌರ್ 42, ಜೆಮಿಮಾ ರಾಡ್ರಿಗಸ್ ಔಟಾಗದೆ 19, ಅಯಾಬೊಂಗಾ ಕಾಕಾ 38ಕ್ಕೆ1) **ಪಂದ್ಯಶ್ರೇಷ್ಠ:** ದೀಪ್ತಿ ಶರ್ಮಾ. **ಸರಣಿಶ್ರೇಷ್ಠ:** ಸ್ಮೃತಿ ಮಂದಾನ.



ಭಾನುವಾರ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿ ಜಯಿಸಿದ ಭಾರತ ತಂಡದೊಂದಿಗೆ ಆಟಗಾರ್ತಿ ಜೆಮಿಮಾ ರಾಡ್ರಿಗಸ್ ಸೆಲ್ಫಿ ತೆಗೆದುಕೊಂಡರು —ಪ್ರಜಾವಾಣಿ ಚಿತ್ರ/ಪುಷ್ಕರ್ ವಿ.

ಗಡಿಯಲ್ಲಿನ ಭದ್ರತಾ ಸಮಸ್ಯೆ ಕುರಿತು ಚರ್ಚೆ

ಮಣಿಪುರ– ಅಸ್ಸಾಂ ಮುಖ್ಯಮಂತ್ರಿಗಳ ಭೇಟಿ

ಇಂಫಾಲ್ (ಪಿಟಿಐ): ಅಂತರರಾಜ್ಯ ಗಡಿಯಾದ ಜಿರೀಬಾಮ್–ಕಛಾರ್‌ನಲ್ಲಿಯ ಭದ್ರತಾ ಸಮಸ್ಯೆ ಕುರಿತು ಚರ್ಚೆ ನಡೆಸುವ ಸಲುವಾಗಿ ಮಣಿಪುರ ಮುಖ್ಯಮಂತ್ರಿ ಬಿರೇನ್ ಸಿಂಗ್ ಮತ್ತು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮ ಅವರು ಗುವಾಹಟಿಯಲ್ಲಿ ಭೇಟಿಯಾಗಿದ್ದರು ಎಂದು ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ.

ಜೂನ್ ಮೊದಲ ವಾರದಲ್ಲಿ ಮಣಿಪುರದ ಜಿರೀಬಾಮ್‌ನಲ್ಲಿ ಹಿಂಸಾಚಾರ ನಡೆದಿತ್ತು. ಆ ವೇಳೆ ಹಲವರು ಪಕ್ಕದ ರಾಜ್ಯ ಅಸ್ಸಾಂನ ಕಾಚರ್‌ನಲ್ಲಿ ಆಶ್ರಯ ಪಡೆದರು. ಈ ಹಿನ್ನೆಲೆಯಲ್ಲಿ ಚರ್ಚೆ ನಡೆಸುವ ಸಲುವಾಗಿ ಬಿರೇನ್ ಸಿಂಗ್ ಮತ್ತು ತಮ್ಮ ಸಂಪುಟ ಸಚಿವ ಎಲ್. ಸುಸಿಂದ್ರೊ ಸಿಂಗ್ ಜೊತೆ ಶನಿವಾರ ರಾತ್ರಿ ಗುವಾಹಟಿಗೆ ತೆರಳಿದರು. ಅವರು ಭಾನುವಾರ ರಾಜ್ಯಕ್ಕೆ ವಾಪಸ್ಸಾಗಲಿದ್ದಾರೆ ಎನ್ನಲಾಗಿದೆ.

ಜಿರೀಬಾಮ್‌ನಿಂದ ಆಶ್ರಯ ಅರಸಿ ಬಂದವರಿಗೆ ಅಗತ್ಯ ಮಾನವೀಯ ನೆರವು ಒದಗಿಸುವಂತೆ ಹಿಮಂತ ಅವರು ಶನಿವಾರವಷ್ಟೇ ಅಧಿಕಾರಿಗಳಿಗೆ ಸೂಚಿಸಿದ್ದರು. ಅಸ್ಸಾಂ ಮತ್ತು ಮಣಿಪುರ ಗಡಿಯಾದ್ಯಂತ ಭದ್ರತೆ ಹೆಚ್ಚಿಸಲಾಗಿದೆ.

ಮಣಿಪುರದಲ್ಲಿ ಮೈತೇಯಿ ಸಮುದಾಯ ಮತ್ತು ಕುಕಿ ಬುಡಕಟ್ಟು ಸಮುದಾಯದ ನಡುವೆ ಕಳೆದ ವರ್ಷ ಮೇ ತಿಂಗಳಿಂದಲೂ ಘರ್ಷಣೆ ನಡೆಯುತ್ತಿದೆ. ಆದರೆ ಈ ಸಂಘರ್ಷ ಜೂನ್‌ವರೆಗೆ ಜಿರೀಬಾಮ್‌ಗೆ ತಲುಪಿರಲಿಲ್ಲ.

ಗುಂಡಿನ ಚಕಮಕಿ

ಕಳೆದೊಂದು ವರ್ಷದಿಂದ ವ್ಯಾಪಕ ಹಿಂಸಾಚಾರದಿಂದ ನಲುಗಿದ್ದ ಮಣಿಪುರದಲ್ಲಿ ಇದೀಗ ಮತ್ತೊಮ್ಮೆ ಕುಕಿ ಮತ್ತು ಮೈತೇಯಿ ಸಮುದಾಯಗಳ ಜನರ ನಡುವೆ ಗುಂಡಿನ ಚಕಮಕಿ ನಡೆದಿದೆ.

ಶನಿವಾರ ತಡರಾತ್ರಿ ಈ ಘಟನೆ ನಡೆದಿದ್ದು, ಇಂಫಾಲ್ ಪೂರ್ವ ಜಿಲ್ಲೆಯ ಥಮ್ನಾಪೋಕ್ಪಿ ಹಾಗೂ ಲಾಮ್‌ಲಾಯಿ ಪ್ರದೇಶಗಳನ್ನು ಗುರಿಯಾಗಿಸಿ ನೆರೆಯ ಜಿಲ್ಲೆ ಕಾಂಗ್‌ಪೋಕ್ಪಿ ಜಿಲ್ಲೆಯ ಬೆಟ್ಟಗಳ ಮೇಲಿಂದ ದುಷ್ಕರ್ಮಿಗಳು ಗುಂಡು ಹಾರಿಸಿದ್ದಾರೆ. ಆಗ ಗ್ರಾಮ ರಕ್ಷಣೆಯ ಸ್ವಯಂ ಸೇವಕರು ಪ್ರತಿದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಸದ್ಯ ಭದ್ರತಾ ಪಡೆಗಳು ಸ್ಥಳಕ್ಕೆ ತೆರಳಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿವೆ. ಘಟನೆಯಲ್ಲಿ ಯಾವುದೇ ಸಾವು–ನೋವುಗಳು ವರದಿಯಾಗಿಲ್ಲ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಯುಎಇ ಪ್ರವಾಸಕ್ಕೆ ತೆರಳಿದ ಸಚಿವ ಜೈಶಂಕರ್

ನವದೆಹಲಿ (ಪಿಟಿಐ): ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ (ಯುಎಇ) ಭಾನುವಾರ ಪ್ರವಾಸ ಕೈಗೊಂಡಿದ್ದಾರೆ.

ಪ್ರವಾಸದ ಸಂದರ್ಭದಲ್ಲಿ ಅವರು ಯುಎಇ ವಿದೇಶಾಂಗ ವ್ಯವಹಾರಗಳ ಸಚಿವ ಅಬ್ದುಲ್ಲಾ ಬಿನ್ ಜಾಯೇದ್ ಅಲ್ ನಹಯಾನ್‌ರೊಂದಿಗೆ ಗಾಜಾ ಸಮಸ್ಯೆಗೆ ಸಂಬಂಧಿಸಿದ ವಿಚಾರಗಳ ಬಗ್ಗೆಯೂ ಚರ್ಚೆ ನಡೆಸುವ ಸಾಧ್ಯತೆ ಇದೆ.

‘ಜೈಶಂಕರ್ ಅವರ ಯುಎಇ ಪ್ರವಾಸವು ಉಭಯ ದೇಶಗಳ ಪಾಲುದಾರಿಕೆ ಕಾರ್ಯತಂತ್ರಗಳ ಕುರಿತು ಹಾಗೂ ಪ್ರಾದೇಶಿಕ, ಜಾಗತಿಕ ಬೆಳವಣಿಗೆಗಳ ಬಗ್ಗೆ ಚರ್ಚಿಸುವ ಉದ್ದೇಶ ಹೊಂದಿದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಉದ್ಯಮಿ ಅರುಣ್ ಜಾಮೀನು ಅರ್ಜಿ ತಿರಸ್ಕೃತ

ದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿಯಲ್ಲಿ ನಡೆದಿದೆ ಎನ್ನಲಾದ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ನ್ಯಾಯಾಂಗ ಬಂಧನದಲ್ಲಿರುವ ಹೈದರಾಬಾದ್ ಮೂಲದ ಉದ್ಯಮಿ ಅರುಣ್ ರಾಮಚಂದ್ರನ್ ಪಿಳ್ಳೈ ಅವರಿಗೆ ಮಧ್ಯಂತರ ಜಾಮೀನು ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಬೆನ್ನುನೋವಿಗೆ 21 ದಿನ ‘ಪಂಚಕರ್ಮ ಚಿಕಿತ್ಸೆ’ ಅಗತ್ಯವಿದೆ. ಹೀಗಾಗಿ ಆಯುರ್ವೇದ ಕೇಂದ್ರಕ್ಕೆ ದಾಖಲಾಗಬೇಕಿದ್ದು, ಮಧ್ಯಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ಕೋರಿ ಪಿಳ್ಳೈ ಅವರು ನ್ಯಾಯಾಲಯದ ಮೊರೆಹೋಗಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ ದೆಹಲಿ ಹೈಕೋರ್ಟ್‌ನ ರಜಾಕಾಲದ ಪೀಠವು, ‘ಪಿಳ್ಳೈ ಅವರು ಜೀವಕ್ಕೆ ಅಪಾಯವಿರುವ ಕಾಯಿಲೆಗಳಿಂದ ಬಳಲುತ್ತಿರುವುದಾಗಿ ಯಾವುದೇ ವೈದ್ಯಕೀಯ ವರದಿಯಲ್ಲಿ ಉಲ್ಲೇಖವಿಲ್ಲ’ ಎಂದು ಹೇಳಿದೆ.

ಬಿಹಾರ: ನಿರ್ಮಾಣ ಹಂತದ ಇನ್ನೊಂದು ಸೇತುವೆ ಕುಸಿತ



ಬಿಹಾರದ ಮೋತಿಹಾರಿ ಜಿಲ್ಲೆಯಲ್ಲಿ ನಿರ್ಮಾಣ ಹಂತದಲ್ಲಿದ್ದ ಸೇತುವೆ ಭಾನುವಾರ ಕುಸಿದುಬಿದ್ದಿತು —ಪಿಟಿಐ ಚಿತ್ರ

ಒಂದನೇ ಪುಟದಿಂದ...

‘ಸೇತುವೆಯ ಕೆಲವು ಕಂಬಗಳ ನಿರ್ಮಾಣಕ್ಕೆ ಸ್ಥಳೀಯರ ಪೈಕಿ ಕೆಲವರು ಆರಂಭದಲ್ಲಿ ಆಕ್ಷೇಪ ವ್ಯಕ್ತ-ಪಡಿಸಿದ್ದರು ಎಂಬ ವರದಿಗಳಿವೆ. ಈ ಬಗ್ಗೆಯೂ ಪೊಲೀಸರು ಪರಿಶೀಲಿಸುತ್ತಿದ್ದಾರೆ’ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಸೌರಭ್ ಜೊರ್ವಾಲ್ ತಿಳಿಸಿದ್ದಾರೆ. ಬಿಹಾರದ ಸಿವಾನ್ ಜಿಲ್ಲೆಯಲ್ಲಿ ಸೇತುವೆಯೊಂದು ಶನಿವಾರ ಕುಸಿದಿತ್ತು. ಇದನ್ನು ಒಂದು ಕಾಲುವೆಗೆ ಅಡ್ಡವಾಗಿ ನಿರ್ಮಿಸಲಾಗುತ್ತಿತ್ತು. ಮಂಗಳವಾರ ಅರರಿಯಾ ಜಿಲ್ಲೆಯಲ್ಲಿ 180 ಮೀಟರ್ ಉದ್ದದ, ಹೊಸದಾಗಿ ನಿರ್ಮಿಸಿದ್ದ ಸೇತುವೆಯೊಂದು ಕುಸಿದುಬಿದ್ದಿತ್ತು. ಸೇತುವೆ ಕುಸಿತದ ಹಲವು ಪ್ರಕರಣಗಳು ರಾಜ್ಯದಲ್ಲಿ ವರದಿಯಾಗಿವೆ. ಈ ಘಟನೆಗಳಲ್ಲಿ ಜೀವಹಾನಿ ಆಗಿಲ್ಲದಿದ್ದರೂ, ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರಶ್ನೆಗಳು ಮೂಡಿವೆ.

‘ತಲಾ ₹1000ಕ್ಕೆ 42 ಎಕರೆ ಭೂಮಿ ಗುತ್ತಿಗೆ ನೀಡಿದ ಜಗನ್’

ಅಮರಾವತಿ (ಪಿಟಿಐ): ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ವೈ.ಎಸ್ ಜಗನ್ ಮೋಹನ್ ರೆಡ್ಡಿ ನೇತೃತ್ವದ ಹಿಂದಿನ ವೈಎಸ್‌ಆರ್‌ಸಿಪಿ ಸರ್ಕಾರವು ಪಕ್ಷದ ಕಚೇರಿಗಳನ್ನು ನಿರ್ಮಿಸಲು 26 ಜಿಲ್ಲೆಗಳಲ್ಲಿ 42 ಎಕರೆ ಭೂಮಿಯನ್ನು ಕೇವಲ ತಲಾ ₹1000 ಹಣಕ್ಕೆ 33 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಿದೆ ಎಂದು ಮಾಹಿತಿ ತಂತ್ರಜ್ಞಾನ ಮತ್ತು ಎಲೆಕ್ಟ್ರಾನಿಕ್ಸ್ ಸಚಿವ ನಾರಾ ಲೋಕೇಶ್ ಭಾನುವಾರ ಆರೋಪಿಸಿದ್ದಾರೆ.

ಈ ಬಗ್ಗೆ ತಮ್ಮ ‘ಎಕ್ಸ್’ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, ರಾಜ್ಯದ ವಿವಿಧೆಡೆ ನಿರ್ಮಾಣ ಹಂತದಲ್ಲಿರುವ ಹಲವಾರು ವೈಎಸ್‌ಆರ್‌ಸಿಪಿ ಕಚೇರಿ ಕಟ್ಟಡಗಳ ಚಿತ್ರಗಳನ್ನು ಹಂಚಿಕೊಂಡಿದ್ದಾರೆ. ಹೀಗೆ ಗುತ್ತಿಗೆ ನೀಡಲಾಗಿರುವ ಜಾಗ ಒಟ್ಟು ₹600 ಕೋಟಿ ಮೌಲ್ಯದ್ದಾಗಿದೆ ಎಂದು ತಿಳಿಸಿದ್ದಾರೆ.

ವಿಶಾಖಪಟ್ಟಣದ ರುಶಿಕೊಂಡದಲ್ಲಿ ಜಗನ್ ಅವರಿಗೆ ₹500 ಕೋಟಿ ವೆಚ್ಚದಲ್ಲಿ ಅರಮನೆ ಭವನ ನಿರ್ಮಿಸಲಾಗಿದೆ ಎಂಬುದು ಚರ್ಚೆಗೆ ಗ್ರಾಸವಾದ ಬೆನ್ನಲ್ಲೇ ಲೋಕೇಶ್ ಈ ಆರೋಪ ಮಾಡಿದ್ದಾರೆ.

ಮಹಾರಾಷ್ಟ್ರ: ಉತ್ಖನನ ವೇಳೆ ಶೇಷಶಾಯಿ ವಿಷ್ಣು ಶಿಲ್ಪ ಪತ್ತೆ

ಛತ್ರಪತಿ ಸಂಭಾಜಿ ನಗರ (ಪಿಟಿಐ): ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಬುಲ್‌ಢಾಣಾ ಜಿಲ್ಲೆಯ ಸಿಂಧಖೇಡ್ ರಾಜಾ ಪಟ್ಟಣದಲ್ಲಿ ನಡೆಸಿದ ಉತ್ಖನನದ ವೇಳೆ ‘ಶೇಷಶಾಯಿ ವಿಷ್ಣು’ (ವಿರಮಿಸುತ್ತಿರುವ ವಿಷ್ಣು) ಮೂರ್ತಿ ಸಿಕ್ಕಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಲಖುಜಿ ಜಾಧವರಾವ್ ಛತ್ರಿ ದೇಗುಲದಲ್ಲಿ ಉತ್ಖನನ ನಡೆಸಿದ ಸಂದರ್ಭದಲ್ಲಿ 2.25 ಮೀಟರ್ ಆಳದಲ್ಲಿ ಈ ಶಿಲ್ಪ ಪತ್ತೆಯಾಯಿತು’ ಎಂದು ಪುರಾತತ್ವ ಸರ್ವೇಕ್ಷಣಾ ಇಲಾಖೆಯು ನಾಗಪುರ ವಲಯದ ಪುರಾತತ್ವ ಶಾಸ್ತ್ರಜ್ಞ ಅಧೀಕ್ಷಕ ಅರುಣ್ ಮಲ್ಲಿಕ್ ತಿಳಿಸಿದರು.

‘ಸಭಾಮಂಟಪ ಪತ್ತೆಹಚ್ಚಿದ ನಂತರ, ನಾವು ದೇವಾಲಯದ ಆಳವನ್ನು ಪರಿಶೀಲಿಸಲು ನಿರ್ಧರಿಸಿದ್ದೆವು. ಆ ವೇಳೆ ಲಕ್ಷ್ಮೀ ಮೂರ್ತಿ ಸಿಕ್ಕಿತು. ಇದಾದ ಬಳಿಕ ಶೇಷಶಾಯಿ ವಿಷ್ಣು ಮೂರ್ತಿ ಪತ್ತೆಯಾಯಿತು. ಈ ಮೂರ್ತಿಯು 1.70 ಮೀ. ಉದ್ದ ಹಾಗೂ 1 ಮೀ. ನಷ್ಟು ಎತ್ತರವಿದೆ. ಮೂರ್ತಿಯ ತಳಭಾಗ 30 ಸೆಂ.ಮೀ.ನಷ್ಟಿರಬಹುದು’ ಎಂದು ಮಲ್ಲಿಕ್ ತಿಳಿಸಿದರು.

‘ಕಪ್ಪುಶಿಲೆಯ ಮೂರ್ತಿ ಇದಾಗಿದ್ದು, ಹೊಯ್ಸಳರ ಕಾಲದ ಮೂರ್ತಿಗಳನ್ನು ಹೋಲುತ್ತಿದೆ. ವಿಷ್ಣುವು ಶೇಷನಾಗನ ಮೇಲೆ ವಿರಮಿಸಿದ್ದು, ಲಕ್ಷ್ಮಿಯು ವಿಷ್ಣುವಿನ ಪಾದ ಒತ್ತುತ್ತಿದ್ದಾಳೆ. ಸಮುದ್ರ ಮಂಥನದ ಚಿತ್ರಣವಿದ್ದು, ಅಶ್ವ, ಐರಾವತವನ್ನೂ ಕಾಣಬಹುದು’ ಎಂದು ವಿವರಿಸಿದರು.



ಮಹಾರಾಷ್ಟ್ರದ ಬುಲ್‌ಠಾಣಾ ಜಿಲ್ಲೆಯ ಸಿಂಧ್‌ಖೇಡ್ ರಾಜಾ ಪಟ್ಟಣದಲ್ಲಿ ಉತ್ಖನನದ ವೇಳೆ ಸಿಕ್ಕ ‘ಶೇಷಶಾಯಿ ವಿಷ್ಣು’ (ವಿರಮಿಸುತ್ತಿರುವ ವಿಷ್ಣು) ಮೂರ್ತಿ —ಪಿಟಿಐ ಚಿತ್ರ

ಪ್ರತಿಮಾಶಾಸ್ತ್ರ ತಜ್ಞ ಸೈಲಿ ಪಲಾಂಡೆ ದಾತಾರ್ ಪ್ರಕಾರ, ‘ಸ್ಥಳೀಯವಾಗಿ ಸಿಗುವ ಜ್ವಾಲಾಮುಖಿ ಬಂಡೆಯ ಬದಲಾಗಿ ಕಪ್ಪುಶಿಲೆಯನ್ನೇ ಮೂರ್ತಿ ರಚನೆಗೆ ಬಳಸಲಾಗಿದೆ’.

‘ಈ ಹಿಂದೆ ಮರಾಠವಾಡ ಪ್ರದೇಶದಲ್ಲಿ ಜ್ವಾಲಾಮುಖಿ ಬಂಡೆಯಿಂದ ರಚಿಸಲಾದ ಇಂತಹ ಮೂರ್ತಿಗಳು ಸಿಕ್ಕಿದ್ದವು. ಇದುವರೆಗಿನ ಮೂರ್ತಿಗಳಿಗೆ ಹೋಲಿಸಿದರೆ ಇದು ಸಂಪೂರ್ಣ ಭಿನ್ನವಾಗಿದೆ. ಭವಿಷ್ಯದಲ್ಲಿ ಮಹಾರಾಷ್ಟ್ರದಲ್ಲಿ ‘ಆರ್ಟ್ ಮ್ಯೂಸಿಯಂ’ ಆರಂಭಿಸಿದರೆ, ಈಗ ಸಿಕ್ಕ ಪ್ರತಿಮೆಯು ಮೇರುಮೂರ್ತಿಯಾಗಿ ಗುರುತಿಸಿಕೊಳ್ಳಲಿದೆ’ ಎಂದು ದಾತಾರ್ ವಿವರಿಸಿದರು.

ಡೋಪಿಂಗ್ ತಡೆ ನಿಯಮ ಉಲ್ಲಂಘನೆ ಆರೋಪ: 'ನಾಡಾ' ಕ್ರಮ

ಬಜರಂಗ್ ಮತ್ತೊಮ್ಮೆ ಅಮಾನತು

ನವದೆಹಲಿ (ಪಿಟಿಐ): ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರನ್ನು ಡೋಪಿಂಗ್ ತಡೆ ನಿಯಮ ಉಲ್ಲಂಘನೆಗಾಗಿ 'ನಾಡಾ' (ರಾಷ್ಟ್ರೀಯ ಉದ್ದೀಪನ ಮದ್ದು ಸೇವನೆ ತಡೆ ಘಟಕ) ಮತ್ತೊಮ್ಮೆ ಅಮಾನತುಗೊಳಿಸಿದೆ.

ಸೋನೆಪತ್‌ನಲ್ಲಿ ಮಾರ್ಚ್ 10ರಂದು ನಡೆದ ಆಯ್ಕೆ ಟ್ರಯಲ್ಸ್‌ನಲ್ಲಿ ನಿಷೇಧಿತ ಉದ್ದೀಪನ ಮದ್ದು ಪರೀಕ್ಷೆಗಾಗಿ ಮೂತ್ರದ ಮಾದರಿಯನ್ನು ನೀಡಲು ನಿರಾಕರಿಸಿದ್ದಕ್ಕಾಗಿ ಪೂನಿಯಾ ಅವರನ್ನು ಏಪ್ರಿಲ್ 23ರಂದು 'ನಾಡಾ' ತಾತ್ಕಾಲಿಕವಾಗಿ ಅಮಾನತುಗೊಳಿಸಿತ್ತು. ಅದನ್ನು ಯುನೈಟೆಡ್ ವರ್ಲ್ಡ್ ರೆಸ್ಲಿಂಗ್ (ಯುಡಬ್ಲ್ಯುಡಬ್ಲ್ಯು) ಸಂಸ್ಥೆಯೂ ಅಂಗೀಕರಿಸಿತ್ತು.



ಬಜರಂಗ್ ಪೂನಿಯಾ

ಈ ಕ್ರಮದ ವಿರುದ್ಧ ಬಜರಂಗ್ ಅವರು ಡೋಪಿಂಗ್ ವಿರೋಧಿ ಶಿಸ್ತು ಸಮಿತಿಗೆ ಮೇಲ್ಮನವಿ ಸಲ್ಲಿಸಿದ್ದರು. ನಾಡಾ ನೋಟಿಸ್ ನೀಡದ ಕಾರಣ ಅಮಾನತು ಆದೇಶವನ್ನು ಮೇ 31ರಂದು ರದ್ದುಗೊಳಿಸಲಾಗಿತ್ತು. ಅದಾದ ಮೂರು ವಾರಗಳ ಬಳಿಕ ಭಾನುವಾರ ಕುಸ್ತಿಪಟುವಿಗೆ 'ನಾಡಾ' ಅಧಿಕೃತ ನೋಟಿಸ್ ನೀಡಿ, ಅಮಾನತು ಆದೇಶ ಹೊರಡಿಸಿದೆ.

'ರಾಷ್ಟ್ರೀಯ ಉದ್ದೀಪನ ಮದ್ದು ತಡೆ ನಿಯಮ–2021ರ ವಿಧಿ 2.3 ಅನ್ನು ಉಲ್ಲಂಘನೆಗೆ ಸಂಬಂಧಿಸಿದಂತೆ ಈ ನೋಟಿಸ್ ನೀಡಲಾಗಿದೆ. ತಾತ್ಕಾಲಿಕವಾಗಿ ಅಮಾನತು ಮಾಡಲಾಗಿದೆ' ಎಂದು ಬಜರಂಗ್ ಅವರಿಗೆ ತಿಳಿಸಲಾಗಿದೆ. ಇದರ ವಿರುದ್ಧ ಮೇಲ್ಮನವಿ ಸಲ್ಲಿಸಲು ಜುಲೈ 11ರ ವರೆಗೆ ಕಾಲಾವಕಾಶ ನೀಡಲಾಗಿದೆ.

ನಾಡಾ ಕ್ರಮವನ್ನು ಪ್ರಶ್ನಿಸುವುದಾಗಿ ಬಜರಂಗ್ ಪರ ವಕೀಲ ವಿದೂಷ್‌ಪತ್ ಸಿಂಘಾನಿಯಾ ಸ್ಪಷ್ಟಪಡಿಸಿದ್ದಾರೆ.

'ಪರೀಕ್ಷೆಗೆ ಮಾದರಿ ನೀಡಲು ನಾನು ನಿರಾಕರಿಸಿಲ್ಲ. ತಮ್ಮ ಮಾದರಿ ಪಡೆದುಕೊಳ್ಳಲು ಬಂದ ಸಂದರ್ಭದಲ್ಲಿ ತರಲಾಗಿದ್ದ ಕಿಟ್‌ಗಳ ಅವಧಿ (ಎಕ್ಸ್‌ಪೈರಿ ಡೇಟ್) ಮುಗಿದ ಕಾರಣ ಅಧಿಕಾರಿಯನ್ನು ಪ್ರಶ್ನಿಸಿದ್ದೆ' ಎಂದು ಬಜರಂಗ್ ಈ ಹಿಂದೆಯೇ ಹೇಳಿದ್ದರು.

ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ದೌರ್ಜನ್ಯ ನೀಡಿದ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್‌ನ ಹಿಂದಿನ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧದ ಹೋರಾಟದಲ್ಲಿ ಬಜರಂಗ್ ಮುಂಚೂಣಿಯಲ್ಲಿದ್ದರು.

ಆರ್ಚರಿ: ಧೀರಜ್‌ಗೆ ಡಬಲ್ ಕಂಚು

ಅಂತ್ಯಾಲ, ಟರ್ಕಿ (ಪಿಟಿಐ): ಧೀರಜ್ ಬೊಮ್ಮದೇವರ ಅವರು ಭಾನುವಾರ ಆರ್ಚರಿ ಮೂರನೇ ಹಂತದ ವಿಶ್ವಕಪ್‌ನಲ್ಲಿ ಎರಡು ಕಂಚಿನ ಪದಕವನ್ನು ಗೆದ್ದರು.

ಪುರುಷರ ವಿಭಾಗದ ರೀಕರ್ವ್ ವೈಯಕ್ತಿಕ ವಿಭಾಗ ಮತ್ತು ಭಜನ್ ಕೌರ್ ಅವರನ್ನು ಒಳಗೊಂಡ ರೀಕರ್ವ್ ಮಿಶ್ರ ತಂಡದಲ್ಲಿ ಅವರು ಪದಕ ಜಯಿಸಿದರು. ಈ ಮೂಲಕ ಭಾರತ ಒಂದು ಚಿನ್ನ, ಒಂದು ಬೆಳ್ಳಿ ಮತ್ತು ಎರಡು ಕಂಚಿನೊಡನೆ ಅಭಿಯಾನವನ್ನು ಮುಗಿಸಿತು.

ಶನಿವಾರ ಜ್ಯೋತಿ ಸುರೇಖಾ ವೆನ್ನಂ, ಅದಿತಿ ಸ್ವಾಮಿ ಮತ್ತು ಪರ್ಣೀತ್ ಕೌರ್ ಅವರನ್ನು ಒಳಗೊಂಡ ಮಹಿಳಾ ಕಾಂಪೌಂಡ್ ಆರ್ಚರಿ ತಂಡ ಚಿನ್ನ ಗೆದ್ದರೆ, ಪುರುಷರ ಕಾಂಪೌಂಡ್ ವೈಯಕ್ತಿಕ ಸ್ಪರ್ಧೆಯಲ್ಲಿ ಪ್ರಿಯಾಂಶ್ ಬೆಳ್ಳಿ ಪದಕವನ್ನು ಜಯಿಸಿದ್ದರು.

ಇಕ್ವೆಡೋರ್ ವಿರುದ್ಧ ವೆನೆಜುವೆಲಾಕ್ಕೆ ಗೆಲುವು

ಸಾಂತಾ ಕ್ಲಾರಾ (ಅಮೆರಿಕ), (ಎಪಿ): ಮಧ್ಯಂತರದ ನಂತರ ಝೊಂಡರ್ ಕಾಡಿಝ್ ಮತ್ತು ಎಡ್ವರ್ಡ್ ಬೆಲ್ಲೊ ಗಳಿಸಿದ ಗೋಲುಗಳ ನೆರವಿನಿಂದ ವೆನೆಜುವೆಲಾ ತಂಡವು ಹಿನ್ನಡೆಯಿಂದ ಚೇತರಿಸಿ 2–1 ಗೋಲುಗಳಿಂದ ಇಕ್ವೆಡೊರ್ ತಂಡವನ್ನು ಮಣಿಸಿತು. ಭಾನುವಾರ ನಡೆದ ಕೊಪಾ ಅಮೆರಿಕ 'ಬಿ' ಗುಂಪಿನ ಈ ಪಂದ್ಯದಲ್ಲಿ ಇಕ್ವೆಡೋರ್ ಹೆಚ್ಚಿನ ಅವಧಿಯಲ್ಲಿ 10 ಮಂದಿಯೊಡನೆ ಆಡಬೇಕಾಯಿತು.

ಈಕ್ವಡೊರ್ ತಂಡದ ದಾಳಿಯ ಮುಂಚೂಣಿಯಲ್ಲಿರಬೇಕಾಗಿದ್ದ ಎನ್ನರ್ ವಲೆನ್ಸಿಯಾ ಅವರಿಗೆ 22 ನಿಮಿಷ ಕೆಂಪುಕಾರ್ಡ್ ದರ್ಶನವಾಗಿ ಪಂದ್ಯದಿಂದ ಹೊರನಡೆಯಬೇಕಾಯಿತು.

ಆದರೆ 40ನೇ ನಿಮಿಷ ಇಕ್ವೆಡೋರ್ ತಂಡವೇ ಮುನ್ನಡೆ ಸಾಧಿಸಿತು. ಕೆಂಡ್ರಿ ಪೇಝ್ ಅವರು ಫ್ರೀಕಿಕ್‌ನಲ್ಲಿ ಒದ್ದ ಚೆಂಡನ್ನು ವೆನೆಜುಯೇಲಾ ರಕ್ಷಣೆ ಆಟಗಾರರು ಸರಿಯಾಗಿ ದೂರಕ್ಕೆ ಕಳಿಸದ ಕಾರಣ ದೊರೆತ ಅವಕಾಶವನ್ನು ಜೆರೆಮಿ ಸರ್ಮಿಂಟೊ ಗೋಲಾಗಿ ಪರಿವರ್ತಿಸಿದರು.

64ನೇ ನಿಮಿಷ ಕಾಡಿಝ್ 15 ಗಜ ದೂರದಿಂದ ಒದ್ದ ಚೆಂಡು ಸೀದಾ ಗೋಲಿನೊಳಕ್ಕೆ ಹೋಯಿತು. ಬೆಲ್ಲೊ ಅವರು 74ನೇ ನಿಮಿಷ ವೆನೆಜುಯೇಲಾ ತಂಡದ ಗೆಲುವಿನ ಅಂತರ ಹೆಚ್ಚಿಸಿದರು.

30ನೇ ಕ್ರಮಾಂಕದಲ್ಲಿರುವ ಇಕ್ವೆಡೋರ್ ಬುಧವಾರ ಲಾಸ್‌ವೇಗಸ್‌ನಲ್ಲಿ ನಡೆಯುವ ಪಂದ್ಯದಲ್ಲಿ ಜಮೈಕಾ ತಂಡವನ್ನು ಎದುರಿಸಲಿದೆ. 54ನೇ ಕ್ರಮಾಂಕದ ವೆನೆಜುವೆಲಾ ಅದೇ ದಿನ ಕ್ಯಾಲಿಫೋರ್ನಿಯಾದ ಇಂಗೆಲ್‌ವುಡ್‌ನಲ್ಲಿ ನಡೆಯುವ ಪಂದ್ಯದಲ್ಲಿ ಮೆಕ್ಸಿಕೊ ತಂಡದ ಜೊತೆ ಆಡಲಿದೆ.

ಸಂಕ್ಷಿಪ್ತ ಸುದ್ದಿ

ಜಂಪ್‌ರೋಪ್ ತಂಡಕ್ಕೆ ರಾಜ್ಯದ ಮೂವರು ಆಯ್ಕೆ

ಕೊಪ್ಪಳ: ಜುಲೈ 22ರಿಂದ ಜಪಾನ್‌ನ ಕಾವಸಕಿಯಲ್ಲಿ ಆಯೋಜನೆಯಾಗಿರುವ ಏಷ್ಯನ್ ಜಂಪ್‌ರೋಪ್ ಚಾಂಪಿಯನ್‌ಷಿಪ್‌ಗೆ ಕೊಪ್ಪಳ ಜಿಲ್ಲೆಯ ಇಬ್ಬರು ಕ್ರೀಡಾಪಟುಗಳು ಆಯ್ಕೆಯಾಗಿದ್ದಾರೆ. ಭಾರತ ಸೀನಿಯರ್ ತಂಡದ ವ್ಯವಸ್ಥಾಪಕರಾಗಿ ರಾಜ್ಯ ಜಂಪ್‌ರೋಪ್ ಸಂಸ್ಥೆ ಪ್ರಧಾನ ಕಾರ್ಯದರ್ಶಿ ರಜಾಕ್ ಟೇಲರ್ ನೇಮಕವಾಗಿದ್ದಾರೆ.

ಈ ಟೂರ್ನಿಯಲ್ಲಿ ಭಾರತದಿಂದ 42 ಜನ ಕ್ರೀಡಾಪಟುಗಳು ಮತ್ತು ನಾಲ್ಕು ಜನ ಸಿಬ್ಬಂದಿ ಭಾಗವಹಿಸುವರು. ರಾಜ್ಯದಿಂದ ಆಯ್ಕೆಯಾದ ಇಬ್ಬರು ಕ್ರೀಡಾಪಟುಗಳಾದ ಭೀಮಸೇನ ಪರಸಾಪುರ ಹಾಗೂ ಮಂಜುನಾಥ ಚೌಡಕಿ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನವರೇ ಎನ್ನುವುದು ವಿಶೇಷ.

ಟಿಟಿ: ಶ್ರೀಜಾ ಚಾಂಪಿಯನ್

ಲಾಗೋಸ್, ನೈಜೀರಿಯಾ (ಪಿಟಿಐ): ಭಾರತದ ಟೇಬಲ್ ಟೆನಿಸ್ ಆಟಗಾರ್ತಿ ಶ್ರೀಜಾ ಅಕುಲಾ ಭಾನುವಾರ ಡಬ್ಲ್ಯುಟಿಟಿ ಕಂಟೆಂಡರ್ ಮಹಿಳಾ ಸಿಂಗಲ್ಸ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಅವರು ಫೈನಲ್‌ನಲ್ಲಿ 4–1ರಿಂದ ಚೀನಾದ ಡಿಂಗ್ ಯಿಜೀ ಅವರನ್ನು ಮಣಿಸಿದರು. ಅಲ್ಲದೆ, ಕರ್ನಾಟಕದ ಅರ್ಚನಾ ಕಾಮತ್ ಅವರೊಂದಿಗೆ ಮಹಿಳೆಯರ ಡಬಲ್ಸ್‌ನಲ್ಲೂ ಪ್ರಶಸ್ತಿ ಗೆದ್ದರು. ಪುರುಷರ ಡಬಲ್ಸ್‌ನಲ್ಲಿ ಹರ್ಮೀತ್ ದೇಸಾಯಿ ಮತ್ತು ಮಾನವ್ ಠಕ್ಕರ್ ಜೋಡಿ ಚಾಂಪಿಯನ್ ಆಯಿತು.

ಯುರೋ ಕಪ್ ಫುಟ್‌ಬಾಲ್ ಟೂರ್ನಿ: ಟೈಲೆಮ್ಯಾನ್ಸ್, ಕೆವಿನ್ ಮಿಂಚು

ಬೆಲ್ಜಿಯಂಗೆ ಮಣಿದ ರೊಮೇನಿಯಾ

ಕಲೋನ್, ಜರ್ಮನಿ (ಎಎಫ್‌ಪಿ): ಯೋರಿ ಟೈಲೆಮ್ಯಾನ್ಸ್ ಮತ್ತು ಕೆವಿನ್ ಡಿ ಬ್ರೂಯ್ನೆ ಗಳಿಸಿದ ಗೋಲುಗಳ ನೆರವಿನಿಂದ ಬೆಲ್ಜಿಯಂ ತಂಡವು ಯುರೋ ಕಪ್ ಫುಟ್‌ಬಾಲ್ ಟೂರ್ನಿಯ 'ಇ' ಗುಂಪಿನ ಪಂದ್ಯದಲ್ಲಿ 2–0ಯಿಂದ ರೊಮೇನಿಯಾ ತಂಡವನ್ನು ಮಣಿಸಿ, ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶದ ಕನಸನ್ನು ಜೀವಂತವಾಗಿರಿಸಿಕೊಂಡಿತು.

ಡೊಮೆನಿಕ್ ಟೆಡೆಸ್ಕೊ ನಾಯಕತ್ವದ ಬೆಲ್ಜಿಯಂ ತಂಡವು ಮೊದಲ ಪಂದ್ಯದಲ್ಲಿ 0–1ರಿಂದ ಸ್ಲೋವಾಕಿಯಾ ವಿರುದ್ಧ ಸೋತಿತ್ತು. ಎರಡನೇ ಪಂದ್ಯದಲ್ಲೂ ಪರಾಭವಗೊಂಡಿದ್ದರೆ ಟೂರ್ನಿಯಿಂದಲೇ ಹೊರಬೀಳುವ ಆತಂಕದಲ್ಲಿತ್ತು. ಶನಿವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಸಾಂಘಿಕ ಆಟ ಪ್ರದರ್ಶಿಸಿ, ಗೆಲುವಿನೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನಕ್ಕೆ ಏರಿದೆ.

ತನ್ನ ಮೊದಲ ಪಂದ್ಯದಲ್ಲಿ 3–0 ಯಿಂದ ಉಕ್ರೇನ್ ತಂಡವನ್ನು ಹಿಮ್ಮೆಟ್ಟಿಸಿದ್ದ ರೊಮೇನಿಯಾ ತಂಡವು ಈ ಪಂದ್ಯದ ಸೋಲಿನ ಹೊರತಾಗಿಯೂ ಅಗ್ರಸ್ಥಾನದಲ್ಲಿದೆ. ಸ್ಲೋವಾಕಿಯಾ ಮತ್ತು ಉಕ್ರೇನ್ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿವೆ. ನಾಲ್ಕೂ ತಂಡಗಳೂ ತಲಾ ಎರಡು ಪಂದ್ಯಗಳನ್ನು ಆಡಿದ್ದು, ಎಲ್ಲಾ ತಂಡಗಳು ತಲಾ ಒಂದರಲ್ಲಿ ಗೆದ್ದಿವೆ.



ಗೋಲು ದಾಖಲಿಸಿದ ಸಂಭ್ರಮದಲ್ಲಿ ಬೆಲ್ಜಿಯಂ ತಂಡದ ಯೋರಿ ಟೈಲೆಮ್ಯಾನ್ಸ್ —ಎಎಫ್‌ಪಿ ಚಿತ್ರ

UEFA ಯುರೋ ಕಪ್ 2024 ಜರ್ಮನಿ

ಪಂದ್ಯ ಆರಂಭವಾದ 73 ಸೆಕೆಂಡ್‌ನಲ್ಲೇ ಟೈಲೆಮ್ಯಾನ್ಸ್ ಅವರು ಬೆಲ್ಜಿಯಂ ತಂಡಕ್ಕೆ ಮುನ್ನಡೆ ಒದಗಿಸಿದರು. ಕೆವಿನ್ 80ನೇ ನಿಮಿಷದಲ್ಲಿ ಮತ್ತೊಂದು ಗೋಲು ದಾಖಲಿಸಿ, ತಂಡದ ಮುನ್ನಡೆಯನ್ನು ಹೆಚ್ಚಿಸಿದರು.

ಬುಧವಾರ ನಡೆಯುವ ಪಂದ್ಯದಲ್ಲಿ ಬೆಲ್ಜಿಯಂ ತಂಡವನ್ನು ಉಕ್ರೇನ್ ಹಾಗೂ ರೊಮೇನಿಯಾ ತಂಡವನ್ನು ಸ್ಲೋವಾಕಿಯಾ ಎದುರಿಸಲಿವೆ. ಈ ಪಂದ್ಯಗಳ ಫಲಿತಾಂಶವೇ ನಾಲ್ಕೂ ತಂಡಗಳಿಗೆ ನಿರ್ಣಾಯಕವಾಗಿದೆ. ಗುಂಪಿನಲ್ಲಿ ಮೊದಲೆರಡು ಸ್ಥಾನ ಪಡೆಯುವ ತಂಡಗಳು ಮುಂದಿನ ಹಂತಕ್ಕೆ ಪ್ರವೇಶಿಸಲಿವೆ.

ಇಂದಿನ ಪಂದ್ಯ
ಸ್ಕಾಟ್ಲೆಂಡ್– ಹಂಗೆರಿ
(ರಾತ್ರಿ 12.30)
ನೇರಪ್ರಸಾರ: ಸೋನಿ ಸ್ಪೋರ್ಟ್ಸ್

ಟೇಬಲ್ ಟೆನಿಸ್: ಸಾತ್ವಿಕ್, ತನಿಷ್ಕಾ ಚಾಂಪಿಯನ್

ಬೆಂಗಳೂರು: ಸಾತ್ವಿಕ್ ಎಂ. ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಕರ್ನಾಟಕ ಟೇಬಲ್ ಟೆನಿಸ್ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ 13 ವರ್ಷದೊಳಗಿನವರ ಬಾಲಕ ಮತ್ತು ಬಾಲಕಿಯರ ಪ್ರಶಸ್ತಿಯನ್ನು ಗೆದ್ದುಕೊಂಡರು.

ಭಾನುವಾರ ನಡೆದ ಬಾಲಕರ ಫೈನಲ್‌ನಲ್ಲಿ ಸಾತ್ವಿಕ್ 9-11, 11-6, 11-5, 11-4ರಿಂದ ಸಿದ್ಧಾಂತ್ ಎಂ. ಅವರನ್ನು ಮಣಿಸಿದರು. ಸೆಮಿಫೈನಲ್‌ನಲ್ಲಿ ಸಾತ್ವಿಕ್ ಅವರು ಪ್ರತರ್ದನ್ ವಿಶ್ವನಾಥ್ ವಿರುದ್ಧ; ಸಿದ್ಧಾಂತ್ ಅವರು ಅಭಿನವ್ ಪ್ರಸನ್ನ ವಿರುದ್ಧ ಗೆಲುವು ಸಾಧಿಸಿದ್ದರು.



ಪ್ರಶಸ್ತಿ ಪತ್ರದೊಂದಿಗೆ (ಎಡದಿಂದ) ಸುಚೇತ್ ಸಿ, ಸಾತ್ವಿಕ್ ಎಂ, ಸಾಕ್ಷ್ಯಾ ಸಂತೋಷ್ ಮತ್ತು ತನಿಷ್ಕಾ

ಬಾಲಕಿಯರ ಫೈನಲ್‌ನಲ್ಲಿ ತನಿಷ್ಕಾ ಅವರು 12-10, 11-4, 11-3ರಿಂದ ಸಾಕ್ಷ್ಯಾ ಸಂತೋಷ್ ಅವರನ್ನು ಮಣಿಸಿದರು. ತನಿಷ್ಕಾ 15 ವರ್ಷದೊಳಗಿನವರ ವಿಭಾಗದಲ್ಲೂ ಚಾಂಪಿಯನ್ ಆಗಿದ್ದರು. ಸೆಮಿಫೈನಲ್‌ನಲ್ಲಿ ತನಿಷ್ಕಾ ಅವರು ಮಿಹಿಕಾ ಆರ್. ಉಡುಪ ಅವರನ್ನು; ಸಾಕ್ಷ್ಯಾ ಅವರು ದೀಕ್ಷಿತಾ ಪಿ.ನಾಯ್ಕ್ ಅವರನ್ನು ಮಣಿಸಿದ್ದರು.

ಹೋಪ್ಸ್ ಬಾಲಕಿಯರ ವಿಭಾಗದಲ್ಲಿ ಸಾಕ್ಷ್ಯಾ ಸಂತೋಷ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಹೋಪ್ಸ್ ಬಾಲಕರ ವಿಭಾಗದ ಪ್ರಶಸ್ತಿಯನ್ನು ಸುಚೇತ್ ಸಿ. ಧರೆನ್ನವರ್ ಗೆದ್ದುಕೊಂಡರು.